ನಿರ್ವಹಣೆ ವಿಧೇಯಕ 2005.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಕೆ. ಪಾಟೀಲ್:– (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕರೇ, 2005ರ ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕ ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ: 2005ರ ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು:– 2005ರ ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಹೆಚ್. ಕೆ. ಪಾಟೀಲ್:– ಮಾನ್ಯ ಅಧ್ಯಕ್ಷರೇ ಈ ವಿಧೇಯಕವನ್ನು ನಾಳೆ ಬೇಕಾದರೆ ಪರಿಶೀಲನೆಗೆ ತೆಗೆದುಕೊಳ್ಳಬಹುದು. ಸದನ ಅಪೇಕ್ಷೆ ಪಟ್ಟರೆ, ತಮ್ಮ ವಿವೇಚನೆಗೆ ಅದು ಸರಿ ಅನಿಸಿದರೆ ಇಂದೇ ಪರಿಶೀಲನೆಗೆ ತೆಗೆದುಕೊಂಡರೂ ಅದು ಒಳ್ಳೆಯದೇ ಅಂತ ಹೇಳಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ ನಾಳೆ ತೆಗೆದು ಕೊಳ್ಳೋಣ.

ಉಪಾಧ್ಯಕ್ಷರು :–ಈ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಮೇಲಿನ ದರ್ಜೆಯನ್ನು ತೆಗೆದುಕೊಳ್ಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ :–ಮಾನ್ಯ ಅಧ್ಯಕ್ಷರೇ ನಾಲ್ಕು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಷಯಗಳು ಇದ್ದವು ಅವುಗಳನ್ನು ಮುಗಿಸಿಡಿ.

ಉಪಾಧ್ಯಕ್ಷರು :– ಶೂನ್ಯ ವೇಳೆ ಮುಗಿದು ಹೋಗಿದೆ ಆಗಲೇ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೇ ಪಟ್ಟಿ ಮಾಡಿ ಕೊಟ್ಟಿದ್ದೇವೆ.

ಉಪಾಧ್ಯಕ್ಷರು :– ನಾಳೆ ತೆಗೆದುಕೊಳ್ಳೋಣ. ಸಬ್ಜೆಕ್ಟ್ ಏನಾದರೂ ಇದ್ದರೆ ಈಗ ತೆಗೆದುಕೊಳ್ಳೋಣ. ನಿಯಮ 69ರ ಮೇಲಿನ ವಿಷಯ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಬಹಳ ಸೀರಿಯಸ್ ಆದ ವಿಷಯಗಳು ಇವೆ.

ಉಪಾಧ್ಯಕ್ಷರು :– ನಾಳೆ ತೆಗೆದುಕೊಳ್ಳೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೇ ಗಮನ ಸೆಳೆಯುವ ಸೂಚನೆಗಳು ಇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರಲ್ಲಿ ನಾನು ವಿನಂತಿ ಮಾಡಿಕೊಂಡೆ ನಾನು 5–00 ಗಂಟೆಗೆ ಎಲ್ಲೋ ಹೋಗಬೇಕು ಅದಕ್ಕೆ ಮೊದಲು ಈ ವಿಷಯವನ್ನು ತೆಗೆದುಕೊಳ್ಳಿ ಎಂದು ನೀವೆಲ್ಲ ಒಪ್ಪುವುದಾದರೆ ನಾನು ಬಹಳ ಹೊತ್ತು ತೆಗೆದುಕೊಳ್ಳುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಿಯಮ 69ತೆಗೆದುಕೊಂಡರೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷರು:– ಇದು ಆದು ಮೇಲೆ ತೆಗೆದುಕೊಳ್ಳೋಣ. ಇದು ಅರ್ಧ ಗಂಟೆಯಲ್ಲಿ ಮುಗಿದು ಹೋಗುತ್ತದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ ನಾನು ಬಹಳ ಹೊತ್ತು ತೆಗೆದುಕೊಳ್ಳುವುದಿಲ್ಲ. ಒಂದು ಅತ್ಯಂತ ಗಂಭೀರವಾದ ವಿಷಯವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇವತ್ತು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಡಾ: ರಘುವಂಶ ಪ್ರಸಾದ್ ಸಿಂಗ್‌ರವರು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಧರ್ಮಸಿಂಗ್‌ರವರಿಗೆ ಒಂದು ಪತ್ರ ಬರೆದು ನೀವು ಕೇಂದ್ರ ಸರ್ಕಾರದಿಂದ ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಇಲ್ಲ......

ಶ್ರೀ ಕೆ ಶ್ರೀನಿವಾಸ ಗೌಡ :– ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು

ಮೇಲ್ಮನೆಯಲ್ಲಿ ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರನ್ನು ಕರೆಸಿ ಆಮೇಲೆ ಬೇಕಾದರೆ ಈ ವಿಷಯವನ್ನು ತೆಗೆದುಕೊಳ್ಳೋಣ. ಮಾನ್ಯ ಸಚಿವರು ಇಲ್ಲ. ಯಾರಾದರೂ ಮಾನ್ಯ ಸಚಿವರು ಉತ್ತರ ಕೊಡಲಿ. ನಾನು ಚರ್ಚೆಯನ್ನು ಮುಂದುವರಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೋ ಅದನ್ನು ನಾನು ಬರೆದು ಇಟ್ಟುಕೊಳ್ಳುತ್ತೇನೆ. ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಬಂದ ಮೇಲೆ ಅವರಿಗೆ ಹೇಳುತ್ತೇನೆ. ಅವರು ಉತ್ತರ ಕೊಡುತ್ತಾರೆ. ಏಕೆಂದರೆ ಮಾನ್ಯ ಸಚಿವರು ಮೇಲ್ಮನೆಯಲ್ಲಿದ್ದಾರೆ. ಇವತ್ತು ಮಾತನಾಡಲಿ ಅಥವಾ ನಾಳೆ ಬೇಕಾದರೆ ಅವರು ಬಂದ ಮೇಲೆಯೇ ಮಾತನಾಡಲಿ.

ಉಪಾಧ್ಯಕ್ಷರು :– ಮಾನ್ಯ ಸಚಿವರು ಮೇಲ್ಮನೆಯಲ್ಲಿದ್ದಾರೆ. ಚರ್ಚೆಯನ್ನು ಪ್ರಾರಂಭ ಮಾಡಿದ್ದೀರಿ ಅದನ್ನು ಮೊಟಕುಗೊಳಿಸುವುದುಬೇಡ. ತಾವು ಪ್ರಾರಂಭ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರು ಡಾ: ರಘುವಂಶ ಪ್ರಸಾದ್ ಸಿಂಗ್‌ರವರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಕೇಂದ್ರ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಪ್ರಧಾನ ಮಂತ್ರಿ ಸಡಕ್ ಯೋಜನೆಯಡಿ ಯಲ್ಲಿ ಹಣ ಪಡೆಯುವುದರಲ್ಲಿ ನಿಮ್ಮ ಸರ್ಕಾರ ವಿಪಲವಾಗಿದೆ. ಇದರಿಂದ ಮುಂದೆ ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಹಣ ಸಿಗುವುದು ಕಡಿತವಾಗುತ್ತದೆಂದು ಬಹಳ ಎಚ್ಚರಿಕೆಯಿಂದ ಒಂದು ಪತ್ರವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದಿದ್ದಾರೆ. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಈ ಇಲಾಖೆಯಲ್ಲಿ ಆಸಕ್ತಿ ಇಲ್ಲದಿದ್ದರೆ ಅವರು ಬೇಕಾದರೆ ಬೇರೆ ಯಾವುದಾದರೂ ಒಂದು ಇಲಾಖೆಯನ್ನು ತೆಗೆದುಕೊಳ್ಳಲಿ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಅಟಲ್ ಬಿಹಾರಿ ವಾಜಪೇಯಿಯವರ ನೇತೃತ್ವದಲ್ಲಿ ಇದ್ದ ಸರ್ಕಾರದಲ್ಲಿ ಇದು ಪ್ರಾರಂಭವಾದಂತಾದ್ದು, ಈ ರಾಜ್ಯದ ಗ್ರಾಮೀಣ ರಸ್ತೆಗಳ ನಿರ್ಮಾಣಕ್ಕೆ ಒಂದು ದೊಡ್ಡ ಕೊಡುಗೆಯಾಗಿತ್ತು. ನಾನು ಕೇಳುತ್ತೇನೆ ಇವತ್ತು ಏನಾಗಿದೆ? 2001–02, 2002–03ನೇ ಸಾಲಿಗೆ ಭಾರತ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ ಒಟ್ಟು

218.22 ಕೋಟಿ ರೂಪಾಯಿಗಳನ್ನು ಕೊಟ್ಟು 936 ರಸ್ತೆಗಳ ಕಾಮಗಾರಿಕೆ ಅನುಮತಿ ಕೊಟ್ಟರು. ಇದು 2001, 2002, 2003ನೇ ಸಾಲಿನಲ್ಲಿ ಮೊನ್ನೆ ದಿನಾಂಕ27-06-2005ರಂತೆ ಈ 936 ಕಾಮಗಾರಿಗಳಲ್ಲಿ ಕೇವಲ 190 ಕಾಮಗಾರಿ ಮಾತ್ರ ಪೂರ್ಣವಾಗಿದೆ. ಅಲ್ಲಿ 190 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 669 ರಸ್ತೆ ಕಾಮಗಾರಿಕೆಗಳನ್ನು ಮಾತ್ರ ಮುಗಿಸಲಾಗಿದೆ. 936, ಇದು 2001, 2002, 2003ನೇ ಸಾಲಿನಲ್ಲಿ ಈಗ 2003-04ನೇ ಸಾಲಿಗೆ ಭಾರತ ಸರ್ಕಾರ 118.41ಕೋಟಿ ರೂಪಾಯಿಗಳನ್ನು ಕೊಟ್ಟರು. ಒಟ್ಟು 360ರಸ್ತೆ ಕಾಮಗಾರಿಯನ್ನು ಮಾಡಲು ಅನುಮೋದನೆ ಸಿಕ್ಕಿತು. ದಿನಾಂಕ 27-06-2005ರಲ್ಲಿ ನಾನು ತೆಗೆದುಕೊಂಡ ಮಾಹಿತಿ ಪ್ರಕಾರ 19ಕಾಮಗಾರಿಗಳನ್ನು ಮಾತ್ರ ಮುಗಿಸಿದ್ದಾರೆ. ಖರ್ಚು ಮಾಡಿರುವುದು 34.33 ಕೋಟಿ ಮಾತ್ರ. 118.41 ಕೋಟಿ ರೂಪಾಯಿಗಳಲ್ಲಿ 360 ರಸ್ತೆ ಕಾಮಗಾರಿಯನ್ನು ತೆಗೆದುಕೊಂಡು 19 ಕಾಮಗಾರಿಯನ್ನು ಮುಗಿಸಿ ಖರ್ಚು ಮಾಡಿರುವುದು 34.33ಕೋಟಿ. ಇನ್ನು 85ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಲಿಲ್ಲ. ಇವತ್ತೂ ಯಥಾಸ್ಥಿತಿ ಇದೆ. ಇದಕ್ಕಿಂತ ಬಹಳ ಆಶ್ಚರ್ಯಕರ ಸಂಗತಿ ಅಂದರೆ 2004-05ನೇ ಸಾಲಿಗೆ 116.7 ಕೋಟಿ ಮತ್ತೆ 95 ಕೋಟಿ ಒಟ್ಟು 211.7 ಕೋಟಿ ರೂಪಾಯಿಗಳ ಅಂದಾಜು ಸಲ್ಲಿಸುವುದಕ್ಕೆ ಕರ್ನಾಟಕ ರಾಜ್ಯಕ್ಕೆ ದಿನಾಂಕ 20-05-03 ಮತ್ತು 19-6-2003ರಲ್ಲಿ ಪತ್ರ ಬರೆದಿದ್ದಾರೆ. ಒಟ್ಟು 211.7 ಕೋಟಿಗೆ ಅಂದಾಜುಗಳನ್ನು ಸಲ್ಲಿಸಿ, ಕೆಲಸ ಪ್ರಾರಂಭ ಮಾಡಿ ಅಂತ. ಇದುವರೆಗೂ, ಈ ನಿಮಿಷದವರೆಗೂ ಕರ್ನಾಟಕ ಸರ್ಕಾರ ಅಂದಾಜು ತಯಾರಿಸಿಲ್ಲ. ಭಾರತ ಸರ್ಕಾರಕ್ಕೆ ಪ್ರಸ್ತಾಪನೆ ಸಲ್ಲಿಸಿಲ್ಲ. ಗುತ್ತಿಗೆದಾರರನ್ನು ನೇಮಿಸಲಿಲ್ಲ. ಯಾವುದೇ ಕಾರ್ಯಕ್ರಮದ ಕೆಲಸ ಇದುವರೆಗೂ ಪ್ರಾರಂಭವಾಗಿಲ್ಲ. 211.7 ಕೋಟಿ ರೂಪಾಯಿದು. 2005-06ನೇ ಸಾಲಿಗೆ ಬೇರೆ ಎಲ್ಲಾ ರಾಜ್ಯಗಳೂ ಅನುಮೋದನೆಯನ್ನು ಪಡೆದಾಗಿದೆ. ಆದರೆ ನಮ್ಮ ರಾಜ್ಯ ಸರ್ಕಾರ ಪ್ರಸ್ತಾಪನೆಯನ್ನೇ ಕಳುಹಿಸಿಲ್ಲ. ಈ ಬಗ್ಗೆ ಕೇಂದ್ರದ ಸಚಿವರಾದ ಶ್ರೀ ರಘುವಂಶ ಪ್ರಸಾದ್ ಸಿಂಗ್‌ರವರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಇನ್ನು ಮುಂದೆ ಈ ಯೋಜನೆಗೆ ಹಣಕಾಸು ಕಡಿತ ಮಾಡುತ್ತೇವೆಂದು ಎಚ್ಚರಿಕೆಯ ಪತ್ರ ಬರೆದ ಮೇಲೆ ಇದುವರೆಗೂ ಸರ್ಕಾರ ಕೈ ಕಟ್ಟಿಕೊಂಡು ಕುಳಿತಿದೆ. ಎಂದಾದರೆ ಬಹುಶ: ಇದೊಂದು ಬೇಜವಾಬ್ದಾರಿ ನಿಷ್ಕ್ರಿಯ ಸರ್ಕಾರ ಎಂದು ಹೇಳಬೇಕಾಗುತ್ತದೆ. ತಾನೆ ಗ್ರಾಮೀಣ ಅಭಿವೃದ್ಧಿ ಬಗ್ಗೆ ನಿಮಗೆ ಆಸಕ್ತಿ ಇಲ್ಲ ಎಂದು ಬಹಳ ಸ್ಪಷ್ಟವಾಗಿ ನಾವು ಹೇಳಬೇಕು ತಾನೆ ಇವತ್ತು

ಮಾನ್ಯ ಉಪಾಧ್ಯಕ್ಷರೇ, 2001-02ನೇ ಸಾಲಿನಲ್ಲಿ ಅಂದಾಜುಗಳ ಮಂಜೂರಾತಿ ಮಾಡಿಕೊಳ್ಳುವುದರಲ್ಲಿ ದೇಶದಲ್ಲಿಯೇ 10ನೇ ಸ್ಥಾನ ಕರ್ನಾಟಕ ಖರ್ಚು ಮಾಡಿರುವಂತಹ ರಾಜ್ಯಗಳಲ್ಲಿ 2001-02ನೇ ಸಾಲಿಗೆ 7ನೇ ಸ್ಥಾನದಲ್ಲಿ ನಾವಿದ್ದೇವೆ. ಇದು 2001-02. 2003-04ನೇ ಸಾಲಿನಲ್ಲಿ ಅಂದಾಜು ಮಂಜೂರಾತಿಯಲ್ಲಿ 10ನೇ ಸ್ಥಾನ. ಖರ್ಚು ಮಾಡಿರುವಂಥ ಸ್ಥಾನದಲ್ಲಿ 9ನೇ ಸ್ಥಾನ. 2004-05ನೇ ಸಾಲಿನಲ್ಲಿ ನೀವು ಅಂದಾಜು ಕಳುಹಿಸಲಿಲ್ಲ. 211.07ಕೋಟಿಗೆ, ಕೆಲಸವೂ ಈ ನಿಮಿಷದವರೆಗೂ ಪ್ರಾರಂಭ ಮಾಡಲಿಲ್ಲ. ಕೇಂದ್ರ ಸರ್ಕಾರದಿಂದ ಪತ್ರ ಬರೆದರೂ ನೀವು ಕುಂಭಕರ್ಣನ ನಿದ್ರೆಯಿಂದ ಮೇಲೆ ಏಳಲಿಲ್ಲ. ಅಂದ್ರೆ ಯಾವ ರೀತಿಯಲ್ಲಿ ಗ್ರಾಮೀಣ ಅಭಿವೃದ್ಧಿಯಾಗುತ್ತದೆ. ಯಾವ ರೀತಿ ನಮ್ಮ ಸಚಿವರು ನಿಷ್ಕ್ರೀಯತೆಯಿಂದ ಬೇಜವಾಬ್ದಾರಿತನದಿಂದ ನಡೆದುಕೊಳ್ಳುತ್ತಿದ್ದಾರೆ ಎನ್ನುವುದಕ್ಕೆ ಇದಕ್ಕಿಂತ ಒಂದು ತಾಜಾ ಉದಾಹರಣೆ ನಿಮಗೆ ಬೇಕಾ? ನಾನು ಹೇಳುತ್ತೇನೆ ಮಾನ್ಯ ಮುಖ್ಯಮಂತ್ರಿಗಳಿಗೆ ದಯಮಾಡಿ ಮೊದಲು ಆ ಗ್ರಾಮೀಣಾಭಿವೃದ್ಧಿ ಸಚಿವರನ್ನು ಬೇರೆ ಯಾವುದಾದರೂ ಒಂದು ಇಲಾಖೆ ಕೊಡಿ, ಅವರ ಕೈಯಲ್ಲಿ ಗ್ರಾಮೀಣಾಭಿವೃದ್ದಿ ಆಗುವುದಿಲ್ಲ. ಹಳ್ಳಿಗಾಡಿನ ಸುಧಾರಣೆಯಾಗುವುದಿಲ್ಲ. ರಸ್ತೆಗಳ ನಿರ್ಮಾಣ ಆಗುವುದಿಲ್ಲ. ಅವರಿಗೆ ಆಸಕ್ತಿಯೂ ಇಲ್ಲ. ಇಚಿತಹವರು ಈ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿಗಳು ಯಾವತ್ತಾದರು ರಿವಿವ್ಯ ಮಾಡಿದರೇ ನಿಮ್ಮ ಚೀಫ್ ಸೆಕ್ರೆಟರಿ ಬದುಕಿದ್ದಾರೆ. ನಿಮ್ಮ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು. ಹರಿಶ್ಚಂದ್ರನ ಮೊಮ್ಮಕ್ಕಳು, ಮೇಲಿನಿಂದ ಉದುರಿ ಬಿದ್ದಿದ್ದಾರೆಂದು ಮಾತನಾಡುತ್ತೀರಲ್ಲ, ಆ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೇ ಇಲ್ಲಿ ಎಲ್ಲಕ್ಕೂ ಕಡಿವಾಣ ಹಾಕುವಂತಹ ಅಧಿಕಾರಿಗಳು, ಕೇಂದ್ರ ಸರ್ಕಾರದಿಂದ ಬಂದಂತಹ ಹಣಕ್ಕೆ ಅಂದಾಜುಗಳನ್ನು ಸಲ್ಲಿಸಿ, ಕೆಲಸವನ್ನು ಇದುವರೆವಿಗೂ ಪ್ರಾರಂಭ ಮಾಡಿಲ್ಲವೆಂದರೆ, ಒಟ್ಟು ಸುಮಾರು 350 ಕೋಟಿ ರೂಪಾಯಿಗಳ ಕಳೆದ ಎರಡು ಮೂರು ವರ್ಷಗಳಲ್ಲಿ ಪ್ರಧಾನಮಂತ್ರಿ ಗ್ರಾಮ ಯೋಜನೆಯಲ್ಲಿ ಉಪಯೋಗ ಮಾಡಿಕೊಳ್ಳುವಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. 2001-02ನೇ ಸಾಲಿನಲ್ಲಿ ಉತ್ತರಪ್ರದೇಶ ರಾಜ್ಯ ಒಂದು ಸಾವಿರದ ಐವತ್ತೆಂಟು ಕೋಟಿ, ಅರವತ್ತೊಂದು ಲಕ್ಷ ರೂಪಾಯಿಗಳ ಕಾಮಗಾರಿ ಕೆಲಸವನ್ನು ಮಾಡದೆ; ಪಶ್ಚಿಮ ಬಂಗಾಳ ಐನೂರು ತ್ತೊಂಬತ್ತೈದು ಕೋಟಿ ಮಾಡಿದೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶ ನಾನೂರ

ಮೂವತ್ತೇರಡು ಕೋಟಿ ಎಪ್ಪತ್ತೆಂಟು ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿದೆ ಆದರೆ ಕರ್ನಾಟಕ ರಾಜ್ಯ ಕೇವಲ ಇನ್ನೂರ ಹದಿನೆಂಟು ಕೋಟಿ ಇಪ್ಪತ್ತೇಳು ಲಕ್ಷ ರೂಪಾಯಿಗಳ ಕಾಮಗಾರಿ ಕೆಲಸಗಳಿಗೆ ಮಾತ್ರ ಅಂದಾಜು ತಯಾರಿಸಿತು ಅದುಕೂಡ ಪೂರ್ತಿ ಆಗಲಿಲ್ಲ, ಇದು 2001–02ರ ಕರ್ಮ ಕತೆಯಾಗಿದೆ. 2003–04ನೇ ಸಾಲಿನಲ್ಲಿ ರಾಜಸ್ಥಾನ ರಾಜ್ಯ ಆರುನೂರ ಎಪ್ಪತ್ತಾರು ಕೋಟಿ ರೂಪಾಯಿಗಳಿಗೆ ಅಂದಾಜು ತಯಾರಿಸಿ ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡಿದರೆ, ಕರ್ನಾಟಕ ರಾಜ್ಯ ಕೇವಲ ನೂರ ಹದಿನೆಂಟು ಕೋಟಿ ರೂಪಾಯಿಗಳಿಗೆ ಅಂದಾಜು ತಯಾರು ಮಾಡಿದ್ದೀರಿ, ನಾನು ಈಗಾಗಲೇ ಆ ಹಣದ ಕರ್ಮಕತೆ ಏನೆಂಬುದನ್ನು ಹೇಳಿದ್ದೇನೆ. ಅದರಲ್ಲಿ ನೀವು ಕೇವಲ ಮೂವತ್ತು ನಾಲ್ಕು ಕೋಟಿ ಮೂವತ್ತಮೂರು ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿದ್ದೀರಿ. 2004–05ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಏನೇನು ಪತ್ರಗಳನ್ನು ಬರೆದಿದ್ದಾರೆ ಎಲ್ಲಾ ಪತ್ರಗಳು ಇದ್ದಾವೆ. ಇಲಾಖೆಯ ಅಧಿಕಾರಿಗಳು, ಇಲ್ಲಿರುವ ನಮ್ಮ ಅಧಿಕಾರಿಗಳಿಗೇನು ಪತ್ರವನ್ನು ಬರೆದಿದ್ದಾರೆ. ಈ ಬಗ್ಗೆ ಎಲ್ಲಾ ಮಾಹಿತಿಗಳು, ವಿವರಗಳು ನನ್ನ ಹತ್ತಿರವಿದೆ. ಆದರೆ ಈ ಸರ್ಕಾರ ಆ ಯಾವುದೇ ಪತ್ರಕ್ಕೆ ಸ್ಪಂದಿಸಿಲ್ಲ. ಅಂದಾಜುಗಳನ್ನು ಕಳುಹಿಸಿಲ್ಲ. ಕೆಲಸ ಮಾಡಿಲ್ಲವೆಂದರೆ, ಇಂದೊಂದು ಬೇಜವಾಬ್ದಾರಿಯ ಸರ್ಕಾರ ಎಂದು ಹೇಳುತ್ತೇನೆ. ಮತ್ತೆ ಬೇರೆ ಯಾವ ಶಬ್ದವನ್ನು ಉಪಯೋಗ ಮಾಡುವುದಿಲ್ಲ. ಆ ಕಡೆ ಈ ಕಡೆ ಇರುವ ಶಾಸಕ ಮಿತ್ರರಿಗೆ ವಿನಂತಿ ಮಾಡುವುದೇನೆಂದರೆ, ಈ ಸಮಿಶ್ರ ಸರ್ಕಾರ, ಅವರ ಒಳಜಗಳ, ಗೊಂದಲದಲ್ಲಿ ನಿರತವಾಗಿ, ಅವರ ಇಲಾಖೆಯಲ್ಲಿ ಆಗುತ್ತಿರುವ ಕಾಮಗಾರಿಗಳ ಬಗ್ಗೆ ರಿವಿವ್ಯ ಮಾಡದೆ, ಅವರು ಅಧಿಕಾರಿಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳದೆ, ಸಂಬಂಧಪಟ್ಟ ಸಚಿವರು ಕುಂಭಕರ್ಣ ನಿದ್ರೆಯಲ್ಲಿರುವುದು, ಅಧಿಕಾರಿಗಳು ಕುಂಭಕರ್ಣ ನಿದ್ರೆಯಲ್ಲಿ ಇರುವುದಾದರೆ, ನಾವು ಈ ಸರ್ಕಾರವನ್ನು ಬೇಜವಾಬ್ದಾರಿ ಸರ್ಕಾರವೆಂದು ಹೇಳಬೇಕೊ, ಅಥವಾ ಜವಾಬ್ದಾರಿ ಇರುವ ಸರ್ಕಾರವೆಂದು ಹೇಳಬೇಕು ದಯಮಾಡಿ ನೀವು ಯೋಚನೆ ಮಾಡಬೇಕಾಗಿದೆ. ಈ ಅಂಕಿಅಂಶದಲ್ಲಿ ಒಂದು ಶಬ್ಧ ವ್ಯತ್ಯಾಸವಿದ್ದರೆ ನಾನು ತಾವು ಹೇಳುವಂತಹ ಶಿಕ್ಷೆಗೆ ಗುರಿಯಾಗುವುದಕ್ಕೆ ಸಿದ್ದನಿದ್ದೇನೆ. ಅಂದರೆ ಕೇಂದ್ರ ಇಲಾಖೆಯ ಅಧಿಕಾರಿಗಳು ಪತ್ರಗಳನ್ನು ಬರೆದು, ಸಂಬಂಧಪಟ್ಟ ಸಚಿವರು ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದರು ಕೂಡ, ದಿನಾಂಕ: 27–6–2005ರವರೆವಿಗೂ ಇದೇ ಸ್ಥಿತಿ ಮುಂದುವರೆದಿದೆ

ಎನ್ನುವುದಾದರೆ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಆಸಕ್ತಿ ಇಲ್ಲವೆನ್ನುತ್ತೀರಾ? ಆ ಅಧಿಕಾರಿಗಳ ಮೇಲೆ ನೀವು ಕ್ರಮ ತೆಗೆದುಕೊಳ್ಳುತ್ತೀರಾ? ಇದೆಲ್ಲದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಇದು ಬಹಳ ಗಂಭೀರವಾದ ವಿಷಯ, ರಾಜ್ಯ ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ನಿಂತಿದೆ ಗ್ರಾಮೀಣ ಅಭಿವೃದ್ಧಿ ನಿಂತಿದೆ. ರಸ್ತೆಯಲ್ಲಿ ಓಡಾಡದಂತಹ ವಿಚಿತ್ರವಾದ ಪರಿಸ್ಥಿತಿ ಇದೆ ಎಂದಾಗ, ಇವತ್ತು ಬೇರೆ ಬೇರೆ ರಾಜ್ಯಗಳು ಐನೂರು, ಸಾವಿರ ಕೋಟಿ ರೂಪಾಯಿಗಳನ್ನು ಉಪಯೋಗ ಮಾಡಿಕೊಂಡಿದ್ದಾರೆ. ನೀವು, ಕೊಟ್ಟ ಹಣವನ್ನು ಉಪಯೋಗ ಮಾಡಿಕೊಂಡು, ಇನ್ನು ಹೆಚ್ಚು ಅಂದಾಜುಗಳನ್ನು ಕಳುಹಿಸಿಕೊಟ್ಟು, ಮುಖ್ಯಮಂತ್ರಿಗಳು ಅವರ ಮೇಲೆ ಹೆಚ್ಚು ಒತ್ತಡವನ್ನು ತಂದು ಹೆಚ್ಚು ಅನುದಾನವನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿಸಿಕೊಳ್ಳುವ ಕೆಲಸ ಬೇರೆ ಬೇರೆ ರಾಜ್ಯಗಳು ಮಾಡಿರಬೇಕಾದರೆ, ನೀವು ಈ ರೀತಿಯಾಗಿ ಕೈ ಕಟ್ಟಿಕೊಂಡು ಕುಳಿತಿರುವಂತಹದ್ದು ನಿಮಗೆ ಶೋಭೆ ತರುವಂತಹದಲ್ಲ, ಗ್ರಾಮೀಣ ಅಭಿವೃದ್ಧಿ ಸಚಿವರು ತಕ್ಷಣ ಅವರ ಸ್ಥಾನಕ್ಕೆ ರಾಜಿನಾಮೆಯನ್ನು ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ತನಿಖೆ ಮಾಡಬೇಕು ಮತ್ತೆ ಈ ಅಪರಾಧಕ್ಕೆ ಏನು ಶಿಕ್ಷೆ ಎನ್ನುವುದು ನಿರ್ಧಾರವಾಗಬೇಕು ಯಾವ ತ ್ಪಗಾಗಿ ಪ್ರತಿಪಕ್ಷದಲ್ಲಿ ಕುಳಿತಿರುವ ನಾವು, ಕೇಂದ್ರ ಸರ್ಕಾರದ ಯೋಜನೆಯನ್ನು ಉಪಯೋಗ ಮಾಡಿಕೊಳ್ಳದೆ ಕೈಕಟ್ಟಿಕೊಂಡು ಕುಳಿತಿರುವ ಸರ್ಕಾರದ ಬಗ್ಗೆ ಹೇಗೆ ನಡೆದುಕೊಳ್ಳಬೇಕು, ಈ ಬಗ್ಗೆ ಆಡಳಿತ ಪಕ್ಷದ ಸದಸ್ಯರೆ ಸಲಹೆಯನ್ನು ಕೊಡಬೇಕು. ಇಂತಹ ಒಂದು ವಿಚಿತ್ರವಾದ ಪರಿಸ್ಥಿತಿಯ ಬಗ್ಗೆ ಕೇವಲ ಒಂದು ಉದಾಹರಣೆಯನ್ನು ಮಾತ್ರ ನಿಮಗೆ ಕೊಡುತ್ತಿರುವುದು. ನಾವು ಹೇಳಿಕೊಂಡು ಬಂದೂ, ರಾಜ್ಯದಲ್ಲಿ ಒಂದು ಮನೆಯನ್ನು ಕಟ್ಟಲಿಲ್ಲ. ಅದನ್ನು ಆಮೇಲೆ ಚರ್ಚೆ ಮಾಡೋಣ. ರಾಜ್ಯದಲ್ಲಿ ಒಂದು ಭಾಗ್ಯಜ್ಯೋತಿ ದೀಪವನ್ನು ಕೊಡಲಿಲ ಆಯಿತು. ಆ ಬಗ್ಗೆ ಆಮೇಲೆ ಚರ್ಚೆ ಮಾಡೋಣ. ಕುಡಿಯುವ ನೀರಿಗಾಗಿ ಜವಾಬ್ದಾರಿಯನ್ನು ಶಾಸಕರಿಗೆ ಕೊಟ್ಟು ಅದು ಜಾರಿಯಾಗುವುದಕ್ಕೆ ಅವಕಾಶ ಕೊಡಲಿಲ್ಲ ಮಾಡಿದ್ದೇನು? ಸರ್ಕಾರದ ಬೊಕ್ಕಸ ತುಂಬಿ ತುಳುಕುತ್ತಿದೆ. ತೆರಿಗೆ ಸಂಗ್ರಹದಲ್ಲಿ ಮೊದಲನೆ ಸ್ಥಾನದಲ್ಲಿರುವುದಾಗಿ ಬೊಬ್ಬೆ ಹೊಡೆಯುವ ನಮ್ಮ ಹಣಕಾಸಿನ ಸಚಿವರು, ನಮ್ಮ ಮುಖ್ಯ ಮುಖ್ಯಮಂತ್ರಿಯವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ರೀತಿಯ ತೊಗಲಕ್ ದರ್ಬಾರ್ ಇವತ್ತು ರಾಜ್ಯದಲ್ಲಿ

ನಡೆಯುತ್ತಿದೆ. ಎನ್ನುವುದಾದರೆ ನಿಮಗೆ ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕಿದೆಯೇ? ನಿಮಗೆ ರಾಜ್ಯದ ಜನರ ಹಿತ ಕಾಪಾಡುವ ಬಗ್ಗೆ, ಅಭಿವೃದ್ಧಿ ಕಾರ್ಯದ ಕಡೆಗೆ ಗಮನಕೊಡುವುದರ ಬಗ್ಗೆ ಗಮನವಿಲ್ಲದೆ ಸಂಪೂರ್ಣ ರಾಜಕಾರಣದಲ್ಲಿಯೇ ತಲ್ಲೀನರಾಗಿದ್ದಾರೆನ್ನುವುದಕ್ಕೆ ಇದಕ್ಕಿಂತ ಉದಾಹರಣೆ ಬೇಕಾ? ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕು. ಯಾವ ಅಧಿಕಾರಿಗಳಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ಸಚಿವರನ್ನು ಅವರಿಗೆ ಗ್ರಾಮೀಣಾಭಿವೃದ್ಧಿಯ ಬಗ್ಗೆ ಅಸಕ್ತಿ ಇಲ್ಲದೆ ಇದ್ದರೆ ತಕ್ಷಣ ಕೈಬಿಡಬೇಕು, : ಬೇರೆ ಯಾವುದೇ ಜವಾಬ್ದಾರಿಯನ್ನು ಅವರಿಗೆ ಕೊಡಿ. ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ. ಇನ್ನು ಅನೇಕ ವಿವರಗಳಿದ್ದಾವೆ. ನಾನು ಹೇಳಿದಂತ ಅಂಕಿಅಂಶಗಳ ಬಗ್ಗೆ ಮಾಹಿತಿಯನ್ನು ಕೊಟ್ಟು ಮೇಲೆ ಉಳಿದಂತಹ ವಿಷಯಗಳ ಬಗ್ಗೆ ನಾನು ನನ್ನ ಚರ್ಚೆಯನ್ನು ಮುಂದುವರೆಸುತ್ತೇನೆ.

ಶ್ರೀ ಗೋವಿಂದ ಎಂ. ಕಾರ್ಜೋಳ (ಮುಧೋಳ): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಗ್ರಾಮ ಸಡಕ್ ಯೋಜನೆಯಲ್ಲಿ ಒಂಬತ್ತುನೂರ ಮೂವತ್ತಾರು ಕಾಮಗಾರಿಗಳ ಅನುಮೋದನೆ ಆಗಿದ್ದರು ಕೂಡ ರಾಜ್ಯದಲ್ಲಿ ಕೇವಲ ಮೂವತ್ತುನಾಲ್ಕು ಕಾಮಗಾರಿಗಳನ್ನು ಮಾತ್ರ ಪೂರ್ಣಗೊಳಿಸಿರುವುದನ್ನು ನಮ್ಮ ನಾಯಕರಾದ ಯಡಿಯೂರಪ್ಪನವರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆ ಮೂವತ್ತನಾಲ್ಕು ಕಾಮಗಾರಿಗಳ ಗುಣಮಟ್ಟವನ್ನು ಕೂಡ ನಾವು ನೋಡಬೇಕಾಗುತ್ತದೆ. ಈ ಸಲ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಅದಂತಹ ಕಾಮಗಾರಿಗಳ ಗುಣಮಟ್ಟವನ್ನು ನೋಡುವುದಕ್ಕೆ ತಾವು ಒಂದು ಸದನದ ಸಮಿತಿಯನ್ನು ರಚಿಸಿದರೆ ಉತ್ತಮವಾಗುತ್ತದೆ. ಆ ಕಾಮಗಾರಿಗಳ ಗುಣಮಟ್ಟವನ್ನು ತಾವು ನೋಡಿದರೆ ಗೊತ್ತಾಗುತ್ತದೆ. ಇವತ್ತು ಅಸ್ಫಾಲ್ಟಿಂಗ್ ಮಾಡಿದ್ದು ಬ್ಲಾಕ್ ಟಾಪ್ ಕಾಣುವುದಿಲ್ಲ ಬರಿ ಮೆಟಲ್ ಕಾಣುತ್ತಿದೆ. ಆದರೆ ಆ ಕಾಮಗಾರಿಗಳ ಗುಣಮಟ್ಟ ಎಷ್ಟು ಕಳಪೆ ಮಟ್ಟದ್ದಾಗಿದೆ ಎಂಬುದನ್ನು ಸರ್ಕಾರ ನೋಡಬೇಕಾಗುತ್ತದೆ. ಅಧಿಕಾರಿಯೊಬ್ಬರೂ ಸರಿಯಾಗಿ ನಿಂತು ಸೂಪರ್‌ವಿಷನ ಮಾಡಿ ಕೆಲಸ ತೆಗೆದುಕೊಂಡಿಲ್ಲ. ಮತ್ತೆ ಸ್ಪೆಸಿ, ಕೇಶನ್ ಪ್ರಕಾರ ಏನು ಕೆಲಸವಾಗಬೇಕಾಗಿತ್ತು ಆ ಪ್ರಕಾರ ಆಗಿಲ್ಲ. ಅಸ್ಫಾಲ್ಟಿಂಗ್ ಎಷ್ಟು ತಿಕ್‌ನೆಸ್ ಮಾಡದಿರುವ ಕಾರಣ ಮತ್ತು ಕಡಿಮೆ ಪ್ರಮಾಣಕ್ಕೆ ಡಾಂಬರ್ ಉಪಯೋಗ ಮಾಡದ್ದಕ್ಕೆ ಇವತ್ತು ಮಾಡಿದ್ದೆಲ್ಲಾ ಕಿತ್ತುಕೊಂಡು ಹೋಗಿಬಿಟ್ಟಿದ್ದಾವೆ. ಅದಕ್ಕಾಗಿ

ನಮ್ಮ ನಾಯಕರೇನು ಇವತ್ತು ಕೆಲವು ಸ್ಪಷ್ಟೀಕರಣವನ್ನು ಕೇಳಿದ್ದಾರೆ. ಅದನ್ನು ಸರ್ಕಾರ ಕೊಡಲೇ ಕೋಡಬೇಕು. ಅದರ ಜೊತಗೆ ಈ ಗುಣಮಟ್ಟದ ಬಗ್ಗೆ ಸದನ ಸಮಿತಿಯನ್ನು ರಚಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ನಾಗರಾಜ ಶೆಟ್ಟಿರ್ (ಬಂಟ್ವಾಳ): ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಮ್ಮ ನಾಯಕರು ಹೇಳಿದಂತೆ ಇವತ್ತು ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಹಲವಾರು ಕಾರ್ಯಕ್ರಮಗಳು ನಮ್ಮ ಹಳ್ಳಿಯ ಪ್ರದೇಶಗಳಿಗೆ ಬರುತ್ತದೆಂದು ಆಸೆ ಆಕಾಂಕ್ಷೆಯಿಂದ ನಾವು ಇರುತ್ತೇವೆ. ಆದರೆ ಬಂದಂತಹ ಹಣವನ್ನು ಸದುಪಯೋಗ ಮಾಡದೆ, ನಮ್ಮ ಹಳ್ಳಿಗಳ ಅಭಿವೃದ್ಧಿ ಕಾರ್ಯಕ್ಕೆ ಆ ಹಣ ವಾಪಸ್ ಆಗುವುದು, ಕೇಂದ್ರ ಸರ್ಕಾರದಿಂದ ಛೀಮಾರಿ ಹಾಕುವುದು ಬಹಳ ಬೇಸರ ವಿಷಯ.ಈಗಾಗಲೇ ತಮಗೆ ಗೊತ್ತಿರುವಂತೆ ಕಳೆದ ಒಂದುವರೆ ವರ್ಷದಿಂದ ಬಹಳಷ್ಟು ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿದೆ. ಹಳ್ಳಿಗಳಲ್ಲಿ ರಸ್ತೆಗಳ ವ್ಯವಸ್ಥೆ ಬಹಳ ಕೆಟ್ಟುಹೋಗಿದೆ ಬೇರೆ ಬೇರೆ ಯೋಜನೆಗಳಲ್ಲಿ ಬಂದಂತಹ ಹಣವನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಮಾಡುವ ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಈಗಾಗಲೇ ನಮ್ಮ ಹಿರಿಯ ನಾಯಕರು ಹೇಳಿದಂತೆ, ಆದಂತಹ ಸ್ವಲ್ಪಮಟ್ಟಿನ ಕೆಲಸ ಕೂಡ ಒಂದೇ ವರ್ಷದಲ್ಲಿ ಕಳಪೆ ಕಾಮಗಾರಿ ಮಾಡಿ ಹಾಳಾಗಿದೆ. ಈ ನಿಟ್ಟಿನಲ್ಲಿ ನಾವೇನು ಕೆಲಸವನ್ನು ತೆಗೆದುಕೊಳ್ಳುತ್ತೇವೆ ಅಥವಾ ಕೇಂದ್ರ ಸರ್ಕಾರದ ಅನೇಕ ಕಾರ್ಯಕ್ರಮಗಳು ನಮಗೆ ಬರುತ್ತದೆ ಅದನ್ನು ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡುವುದರಲ್ಲಿ ಸಂಬಂಧಪಟ್ಟ ಸರ್ಕಾರ, ಮಂತ್ರಿಗಳು ಮುತುವರ್ಜಿ ವಹಿಸಿಕೊಂಡು ವಿಶೇಷವಾಗಿ ಅಧಿಕಾರಿಗಳು, ನಾನು ಒತ್ತಿ ಹೇಳುತ್ತಿದ್ದೇನೆ. ನಮ್ಮ ಹಿರಿಯ ನಾಯಕರು ಕೂಡ ಹೇಳಿದರು. ಕಾರ್ಯಗತ ಮಾಡುವುದರಲ್ಲಿ ನಾವು ಬಹಳ ನಿಧಾನವಿದ್ದೇವೆ. ಕೇಳಿದರೆ, ಅದಕ್ಕೆ ಟೆಂಡರ್ ಕರೆಯಬೇಕು. ಮೂರು ತಿಂಗಳು ಆರು ತಿಂಗಳು ಬೇಕೆಂದು ಹೇಳುತ್ತಾರೆ. ಈ ರೀತಿ ಬೇರೆ ಬೇರೆ ಕಾರಣಗಳಿಂದ ನಮ್ಮ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಈ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯುವುದಕ್ಕೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಈ ಬಗ್ಗೆ ಅತೀ ಶೀಘ್ರದಲ್ಲಿ ಬರುವಂತಹ ಯಾವುದೇ ಕಾರ್ಯಕ್ರಮವಿರಲಿ ಅದನ್ನು ನಿಜವಾದ ರೀತಿಯಲ್ಲಿ ಕಾರ್ಯಗತಮಾಡಿ ಯಾವುದೆ ಕಳಪೆ ಕಾಮಗಾರಿಯಾಗದಂತೆ ನೋಡಿಕೊಳ್ಳಬೇಕು. ಈಗಾಗಲೇ ಅಂಕಿಅಂಶಗಳ ಬಗ್ಗೆ ನಮ್ಮ ನಾಯಕರಾದ ಸನ್ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ನಾನು

ಪುನರಾವರ್ತನೆ ಮಾಡುವುದಕ್ಕೆ ಹೋಗುತ್ತಿಲ್ಲ. ಏಕೆಂದರೆ, ಕರ್ನಾಟಕ ದೇಶದಲ್ಲಿ ಬಹಳ ಅತ್ಯುತ್ತಮವಾದ ರಾಜ್ಯವಾಗಿ ಪರಿವರ್ತನೆಯಾಗಬೇಕೆಂಬುದು ನಮ್ಮ ಆಸೆಯಾಗಿದೆ. ಆದರೆ ಪ್ರತಿಯೊಂದು ವರ್ಷದ ಲೆಕ್ಕಾಚಾರವನ್ನು ನೋಡಿದಾಗ ಎಂಟು, ಒಂಬತ್ತನೆ ಸ್ಥಾನದಲ್ಲಿದ್ದೇವೆ. ಆ ದೃಷ್ಟಿಯಿಂದ, ರಾಜಸ್ಥಾನವಿರಬಹುದು, ಮಧ್ಯಪ್ರದೇಶವಿರಬಹುದು, ಒರಿಸ್ಸಾಮಿವಿರಬಹುದು ಅಂತಹ ಹಿಂದುಳಿದ ರಾಜ್ಯಗಳು ಬಹಳಷ್ಟು ಕಾಮಗಾರಿ ಕೆಲಸಗಳನ್ನು ಮಾಡಿ ಈ ಸರ್ಕಾರದಿಂದ ಬರುವಂತಹ ಬೇರೆ ಬೇರೆ ಸೌವಲತ್ತುಗಳನ್ನು ಸರಿಯಾದ ರೀತಿಯ ಸದುಪಯೋಗ ಮಾಡಿಕೊಂಡು ಆ ರಾಜ್ಯದ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಇವತ್ತೇನು ಕರ್ನಾಟಕದಲ್ಲಿ ಸಮಿಶ್ರ ಸರ್ಕಾರವಿದೆ, ಈ ಪ್ರಧಾನಮಂತ್ರಿ ಸಡಕ್ ಯೋಜನೆಯಲ್ಲಿ ಬಂದಂತಹ ನೂರಾರು ಕೋಟಿ ರೂಪಾಯಿಗಳ ಉಪಯೋಗವಾಗದೆ ವಾಪಸ್ ಹೋಗಿದೆ. ಆ ದೃಷ್ಟಿಯಿಂದ ನಾನು ಮತ್ತೊಮ್ಮೆ ನಾನು ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ ಇನ್ನು ಮುಂದೆಯಾದರು ಇದು ಏತಕ್ಕೆ ಆಯಿತು, ಇದಕ್ಕೆ ಯಾರು ಕಾರಣಕರ್ತರು ಎನ್ನುವ ವಿಚಾರಬೇಕು. ಆ ದೃಷ್ಟಿಯಿಂದ ಮಗದೊಮ್ಮೆ ನಾನು ಇದೇ ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇನ್ನು ಮುಂದಾದರೂ ಇದು ಏಕೆ ಆಯಿತು? ಇದಕ್ಕೆ ಯಾರು ಕಾರಣಕರ್ತರು ಎನ್ನುವ ಒಂದು ವಿಚಾರ ಕೂಡಬೇಕು. ಕಳಪೆ ಕಾಮಗಾರಿ ಬಗ್ಗೆ ಕೂಡ ಸಂಬಂಧಪಟ್ಟ ಅಧಿಕಾರಿಗಳು ಯಾರು ಜವಾಬ್ದಾರಿ ಇದ್ದರಾ, ಅವರ ಬಗ್ಗೆ ಸೂಕ್ತ ತನಿಖೆಯಾಗಬೇಕು. ಮೂರನೆಯದು, ಇನ್ನು ಮುಂದೆಯಾದರೂ ಸರಿಯಾದ ರೀತಿಯಲ್ಲಿ ಯಾವುದೇ ಹಣವನ್ನು ಬಂದ ಹಣವನ್ನು, ಹಣ ಬರುವುದೇ ಬಹಳ ಕಷ್ಟ. ಆ ರೀತಿ ಬಂದದ್ದನ್ನು ಉಪಯೋಗ ಮಾಡಿ ಸಮಗ್ರವಾಗಿ ನಮ್ಮ ಗ್ರಾಮೀಣಾಭಿವೃದ್ಧಿ ಆಗುವಂಥ ಕೆಲಸದಲ್ಲಿ ಮುನ್ನಡೆಯಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಹಾಗೂ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ): ಮಾನ್ಯ ಉಪಾಧ್ಯಕ್ಷರೇ, ನಮ್ಮ ನಾಯಕರಾದ ಯಡಿಯೂರಪ್ಪನವರು ಮತ್ತೆ ನಮ್ಮ ಉಪನಾಯಕರು ನಮ್ಮ ಗೌರವಾನ್ವಿತ ಸದಸ್ಯರಾದ ನಾಗರಾಜಶೆಟ್ಟಿರು ಈಗಾಗಲೇ ವಿಷಯವನ್ನು ಪ್ರಸ್ತಾ ಸಿದ್ದಾರೆ. ನಾನು ಪ್ರಧಾನಮಂತ್ರಿಗಳ ಗ್ರಾಮಸಡಕ್ ಯೋಜನೆ ಇವರೊಳಗೆ ಹೇಗೆ ನಮ್ಮ ರಾಜ್ಯ ಈ ಯೋಜನೆಯ ಲಾಭವನ್ನು ತೆಗೆದುಕೊಳ್ಳುವುದಕ್ಕೆ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದನ್ನು ಮಾನ್ಯ

ನಾಯಕರು ಈಗಾಗಲೇ ವಿವರಿಸಿದ್ದಾರೆ. ರಸ್ತೆಗಳ ಬಗ್ಗೆ ಹೇಳುವುದಾದರೆ ಯಾವುದೇ ದೇಶ ಅಭಿವೃದ್ಧಿ ಹೊಂದಿದ ದೇಶಗಳ ಬಗ್ಗೆ ಒಂದು ಮಾತಿದೆ. ಆ ದೇಶಗಳು ಏಕೆ ಅಭಿವೃದ್ಧಿಯನ್ನು ಹೊಂದಿದವು ಎಂದರೆ ಆ ದೇಶಗಳ ರಸ್ತೆಗಳು ಆ ದೇಶವನ್ನು ಅಭಿವೃದ್ಧಿಯ ದಾರಿಯಲ್ಲಿ ಮುನ್ನಡೆಸುವುದಕ್ಕೆ ಕಾರಣೀಕರ್ತವಾದವು ಎನ್ನುವ ಮಾತನ್ನು ನಾವು ಕೇಳುತ್ತೇವೆ. ಅದರೊಳಗೆ ರಸ್ತೆಗಳು ಇವತ್ತು ಅತ್ಯಂತ ಪ್ರಾಮುಖ್ಯವಾದಂಥ ಒಂದು ನಮ್ಮ developmental activities, core sector. ಬಹಳ ಪ್ರಮುಖವಾದ ಒಂದು ವಿಭಾಗ. ಆದರೆ ಇವತ್ತು ನಮಗೆ ಸ್ವಾತಂತ್ರ್ಯ ಬಂದು 57 ವರ್ಷಗಳ ನಂತರವೂ ನೋಡಿದರೆ ನಮ್ಮ ಗ್ರಾಮೀಣ ಭಾಗದಲ್ಲಿ ರಸ್ತೆಗಳು ಅಥವಾ ಮುಖ್ಯ ರಸ್ತೆಗಳು ಅದು ರಾಷ್ಟ್ರೀಯ ಹೆದ್ದಾರಿಯಿಂದ ಹಿಡಿದು ನಾವು ರಾಜ್ಯ ಹೆದ್ದಾರಿಯಿಂದ ಹಿಡಿದು ಜಿಲ್ಲಾ ಮುಖ್ಯ ರಸ್ತೆಯಿಂದ ಹಿಡಿದು ನಾವು ಗ್ರಾಮೀಣ ಭಾಗದ ಯಾವುದೇ ರಸ್ತೆಗಳನ್ನು ನೋಡಿದರೂ ಅದು ಈ ಸರ್ಕಾರದ ಆದ್ಯತಾ ಪಟ್ಟಿಯಲ್ಲೇ ಬರಲಿಲ್ಲ. ನಾವು ನಿಜವಾಗಿ ಅಟಲ್ ಬಿಹಾರಿ ವಾಜಪೇಯಿಯವರಿಗೆ ಧನ್ಯವಾದಗಳನ್ನು ಸಲ್ಲಿಸಬೇಕು. ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಪ್ರಧಾನಮಂತ್ರಿಯಾದಾಗ ಸರ್ವಶಿಕ್ಷಣ ಅಭಿಯಾನ ಹೇಗೆ ಶಿಕ್ಷಣ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನು ತಂದಿತೋ ಅದೇ ರೀತಿ ಈ ರಸ್ತೆ ಗ್ರಾಮೀಣ ಸಂಪರ್ಕವನ್ನು ಸಾಧಿಸುವಲ್ಲಿ ರಸ್ತೆ ವ್ಯವಸ್ಥೆ ಬಗ್ಗೆ ಒಂದು ವಿಶೇಷವಾದ ಸಂಪರ್ಕ ತಂದರು. ಚತುಷ್ಕೋನ ರಸ್ತೆ. ರಾಷ್ಟ್ರೀಯ ಹೆದ್ದಾರಿ, ಇವೆಲ್ಲಾ ಯಾವ ಯಾವ ಹಂತದಲ್ಲಿದೆ ಎನ್ನುವುದು ಗೊತ್ತಿದೆ. ಯು ಎ ಸರ್ಕಾರದವರು ಬೋರ್ಡ್ ಒಂದನ್ನು ಇಳಿಸುವುದಕ್ಕೆ ಸಾಧ್ಯವಾಯಿತೇ ಹೊರತು ಅವರಿಗೆ ಒಂದು ಇಂಚು ಕೆಲಸ ಮುಂದು ಮಾಡಿಸುವುದಕ್ಕೆ ಆಗಲಿಲ್ಲ. ನಾನು ಆ ವಿಷಯಗಳನ್ನು ಇಲ್ಲಿ ಪ್ರಸ್ತಾ ಸುವುದಿಲ್ಲ. ಆದರೆ ಇವತ್ತು ಪ್ರಧಾನ ಮಂತ್ರಿ ಸಡಕ್ ಯೋಜನೆಯಲ್ಲಿ ಒಂದು ಸಾವಿರ ಜನಸಂಖ್ಯೆ ಇರುವ, ಹೆಚ್ಚು ಇರುವ, ಮೇಲೆ ಇರುವ ಗ್ರಾಮೀಣ ಭಾಗದ ರಸ್ತೆಗಳಿಗೆ ಕೊಟ್ಟಿರುವ ಹಣವನ್ನು ಅನುಷ್ಠಾನಗೊಳಿಸುವುದಕ್ಕೆ ವಿಫಲವಾಯಿತು. ಮೊದಲು ಒಂದನೇ ಹಂತ, ಎರಡನೇ ಹಂತದ ಯೋಜನೆಯಲ್ಲಿ ಇವರು ಮನಬಂದಂತೆ ಕೆಲಸವನ್ನು ಮಾಡಿದರು. ಲ್ಯಾಂಡ್ ಆರ್ಮಿಯವರಿಗೆ ಕೊಟ್ಟರು. ಆ ಲ್ಯಾಂಡ್ ಆರ್ಮಿಯವರು ಟೆಂಡರ್‌ನಲ್ಲಿ

ಪಾರ್ಟಿಸಿಪೇಟ್ ಮಾಡಲಿಲ್ಲ. ಇವರು ಅಲಾಟ್ ಮಾಡಿದರು. ಹಿಂದಿನ ಸರ್ಕಾರದವರು ಮಾಡಿದರು ಇಲ್ಲಿ ಮಂತ್ರಿಗಳು ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು ಸೆಕ್ರೆಟರಿಗಳು ಅದೇಗೆ ಒ ಪ್ಪಿದರೋ, ಕೇಂದ್ರಸರ್ಕಾರವನ್ನು ಹೇಗೆ ಒ ಪ್ಪಿಸಿದರೋ ಗೊತ್ತಿಲ್ಲ. ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು ಲ್ಯಾಂಡ್ ಆರ್ಮಿಯವರಿಗೆ ಅಲಾಟ್ ಮಾಡಿದರು. ಅವರು ಟೆಂಡರ್‌ನಲ್ಲಿ ಪಾರ್ಟಿಸಿಪೇಟ್ ಮಾಡದಿದ್ದರೂ ಅವರಿಗೆ ಅಲಾಟ್ ಮಾಡಿದರು, ಇವತ್ತು ರಸ್ತೆಗಳೆಲ್ಲಾ ಹಾಳಾಗಿದೆ. ಯಾವ ಗುತ್ತಿಗೆದಾರರನ್ನು ಹಿಡಿತಕ್ಕೆ ತೆಗೆದುಕೊಂಡು ಸಮರ್ಪಕವಾಗಿ ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತೂ ಸಹಾ ಸಿಆರ್‌ಎಫ್‌ನ ಕೆಲಸ ಇರಬಹುದು. ಮುಖ್ಯಮಂತ್ರಿ ಸಡಕ್ ಎಂದು ಶುರುಮಾಡಿದರು. ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಮಂತ್ರಿ ಸಡಕ್ ಯೋಜನೆ ಎಂದು ಶುರುಮಾಡಿದ ತಕ್ಷಣ ನಾವೇನು ಒಂದು ಹೆಜ್ಜೆ ಕಡಿಮೆ ಎಂದು ಹಿಂದಿನ ಸರ್ಕಾರದವರು ಮುಖ್ಯಮಂತ್ರಿ ಸಡಕ್ ಎಂದು ಶುರುಮಾಡಿದರು. ಆ ಮುಖ್ಯಮಂತ್ರಿ ಸಡಕ್ ಎನ್ನುವ ಹೆಸರು ಉಳಿಯಿತೇ ಹೊರತು ಅದಕ್ಕೆ ದುಡ್ಡೂ ಬರುತ್ತಿಲ್ಲ. ದುಡ್ಡು 3054 ಅಡಿಯಲ್ಲಿ ಹೇಗೆ ಬೇಕೋ ಹಾಗೆ ಉಸ್ತುವಾರಿ ಸಚಿವರು ಅವರಿಗೆ ರಾಜಕೀಯ ಕಾರಣಕ್ಕಾಗಿ ಯಾರ್ಯಾರಿಗೆ ಆ ಹಣವನ್ನು ಕೊಡಬೇಕೋ ಅವರವರಿಗೆ ಕೊಟ್ಟುಕೊಂಡು 3054 ಅಡಿಯಲ್ಲಿ ಮುಖ್ಯಮಂತ್ರಿ ಸಡಕ್ ಕೆಲಸವನ್ನೂ ಮುಗಿಸುತ್ತಿರುವುದನ್ನು ನೋಡುತ್ತಿದ್ದೇವೆ. ಇವತ್ತು ಸಿಆರ್‌ಎಫ್, ಮುಖ್ಯಮಂತ್ರಿ ಸಡಕ್, ಇವತ್ತು ನಬಾರ್ಡ್‌ನಲ್ಲಿ ತೆಗೆದುಕೊಂಡಿರುವ ರಸ್ತೆಗಳು, ವಿಶ್ವಬ್ಯಾಂಕ್‌ನ ಅಡಿಯಲ್ಲಿ ತೆಗೆದುಕೊಂಡಿರುವ ರಸ್ತೆಗಳು, ರಸ್ತೆಗಳಿಗೆ ಹಣವನ್ನು ತೆಗೆದುಕೊಳ್ಳುವುದಕ್ಕೆ ಕಡಿಮೆ ಮಾಡಲಿಲ್ಲ. ಯಾವುದೂ ಸಮರ್ಪಕವಾಗಿ ಅನುಷ್ಠಾನವಾಗದೆ ಆ ಒಂದು ಗುತ್ತಿಗೆದಾರರ ಕೈಯಲ್ಲಿ ಸರ್ಕಾರ ಸಿಕ್ಕಿಹಾಕಿಕೊಂಡು ಕಳಪೆ ಗುಣಮಟ್ಟದ ಕೆಲಸವಾಗಿ, ಅನುಷ್ಠಾನದಲ್ಲಿ ವಿಳಂಬವಾಗಿ ನಾವು ಇವತ್ತು ರಾಜ್ಯ ಅಭಿವೃದ್ಧಿಯಲ್ಲಿ ಹಿಂದೆ ಬೀಳುತ್ತಿರುವ ಒಂದು ದುಸ್ಥಿತಿ ಎದುರಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹಾಗಾಗಿ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಿಷ್ಟೆ. ಬಂದಂಥ ಹಣವನ್ನು ಸದುಪಯೋಗ ಮಾಡಿಕೊಳ್ಳುವುದಕ್ಕೆ ನಿಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ. ಇವರ ರಾಜಕೀಯ ಜಗಳಾಟದಲ್ಲಿ ಕಚ್ಚಾಟದಲ್ಲಿ ಅಭಿವೃದ್ಧಿ ಕುಂಠಿತವಾಗುತ್ತಿರುವುದನ್ನು ಎಲ್ಲಾ ಕ್ಷೇತ್ರದಲ್ಲಿ ನಾವು ಕಾಣುತ್ತಿದ್ದೇವೆ.

ಹಾಗಾಗಿ ಇಚ್ಛಾಶಕ್ತಿಯಿಂದ ಬಂದಿರುವಂಥ ಹಣದ ಸದುಪಯೋಗವನ್ನು ನಿಗದಿತ ಸಮಯದಲ್ಲಿ ತೆಗೆದುಕೊಳ್ಳಬೇಕು. ಮತ್ತು ಅದು ಇಡೀ ರಾಜ್ಯದಲ್ಲಿ ಸಮಾನಾಂತರವಾಗಿ ಆ ಹಣ ವಿಂಗಡಣೆಯಾಗುವುದಕ್ಕೂ ಸರ್ಕಾರ ಕೇಂದ್ರಸರ್ಕಾರದಲ್ಲಿ ವಿಶೇಷವಾದ ಒಂದು ಅವಕಾಶವನ್ನು ತೆಗೆದುಕೊಳ್ಳಬೇಕು. ನಾವು ಮಲೆನಾಡಿನ ಜಿಲ್ಲೆಗಳಿಂದ ಬರುವಂಥವರು ನಾವು ಅನೇಕರು. ಮಲೆನಾಡಿನ ಜಿಲ್ಲೆಗಳಿಂದ ಬಂದಂಥವರಿಗೆ ಕೇಂದ್ರಸರ್ಕಾರಕ್ಕೆ ರಾಜ್ಯ ಸರ್ಕಾರ ಮನದಟ್ಟು ಮಾಡಿಕೊಡಬೇಕು. ಅಲ್ಲಿ ಒಂದು ಸಾವಿರ ಜನಸಂಖ್ಯೆ ಇರುವಂಥ ಮುಖ್ಯರಸ್ತೆಯನ್ನೇ ತೆಗೆದುಕೊಳ್ಳುತ್ತೇವೆಂದರೆ ಮಲೆನಾಡಿನ ಜಿಲ್ಲೆಗಳಲ್ಲಿ ಯಾವ ರಸ್ತೆಯನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು 12 ಮೀಟರ್ ಅಗಲ ಮಾಡಬೇಕಾದ ರಸ್ತೆಯನ್ನು ಅಗಲ ಮಾಡುತ್ತೇವೆಂದರೆ ನಮ್ಮ ಕಡೆಯಲ್ಲಿ ಅದು ಸಾಧ್ಯವೇ ಇಲ್ಲ. ಅರಣ್ಯದ ಮಧ್ಯೆ ಆರೂವರೆ ಅಡಿ ರಸ್ತೆ ಮಾಡುವುದಕ್ಕೆ ಅಲ್ಲಿ ಕಷ್ಟ. ಇವರು 12 ಮೀಟರ್ ರಸ್ತೆ ಬೇಕೆಂದರೆ ರಾಷ್ಟ್ರೀಯ ಹೆದ್ದಾರಿಗೂ ಅಷ್ಟು ಕೇಳುವುದಿಲ್ಲ. ಅಷ್ಟು ಅಡಿ ರಸ್ತೆಗೆ ಈ ಪ್ರಧಾನಮಂತ್ರಿ ಸಡಕ್ ಯೋಜನೆಗೆ ಬೇಕು ಎಂದು ನಿಯಮಗಳನ್ನು ಹಾಕಿಕೊಂಡಿದ್ದಾರೆ. ಹಾಗಾಗಿ ಇವತ್ತು ಮಲೆನಾಡಿನ ಜಿಲ್ಲೆಗಳಲ್ಲಿ ರಸ್ತೆಯ ಅಗಲ ಅದು ಎರಡು ವಾಹನಗಳು ಓಡಾಡುವುದಕ್ಕೆ ಎಷ್ಟು ಬೇಕೋ ಆರೂವರೆ ಮೀಟರ್ ಏನು ಬೇಕೋ ಅದೆಲ್ಲಾ ಇದೆ. ಅದಕ್ಕೆ ಮಿನಿಮಮ್ ನೀಡ್ ಇದೆ. ಅದರಂತೆ ಅವರು ಮಾಡಲಿ. ಅಭಿವೃದ್ಧಿಪಡಿಸಲಿ. ಮತ್ತು relaxation ಮಾಡಲಿ. 750 ಜನಸಂಖ್ಯೆಗೆ, 500 ಜನಸಂಖ್ಯೆಗೆ, 250 ಜನಸಂಖ್ಯೆಗೆ ಈ ರೀತಿಯಲ್ಲೂ ಸಹಾ ಕಾನೂನಿನ relax ಮಾಡಿ ಆ ರೀತಿ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೂ ಅವಕಾಶವಾಗಬೇಕು. ಇಲ್ಲದಿದ್ದರೆ 2006ರ ನಂತರ 2007ರ ನಂತರ ಇಂಥ ರಸ್ತೆಗಳನ್ನೂ ತೆಗೆದುಕೊಳ್ಳುತ್ತೇವೆಂದು ಸುತ್ತೋಲೆಯಲ್ಲಿ ಇದೆ. ಕೇಂದ್ರ ಸರ್ಕಾರದ ಆದೇಶದಲ್ಲಿದೆ ಎಂದು ಹೇಳಿದರೂ ನಮಗೆ ಸಮಾಧಾನವಿಲ್ಲ. ಕೇಂದ್ರಸರ್ಕಾರಕ್ಕೆ ಈ ವಿಷಯಗಳನ್ನು ಮನದಟ್ಟು ಮಾಡಿಕೊಟ್ಟು ಗುಡ್ಡಗಾಡು ಮತ್ತು ಪಶ್ಚಿಮ ಘಟ್ಟದಂಥ ಪ್ರದೇಶ ಮತ್ತು ಮಲೆನಾಡಿನಂಥ ಪ್ರದೇಶದಲ್ಲಿ ಇದರೊಳಗೆ relaxation ಬೇಕು ಎನ್ನುವುದನ್ನು ಸರ್ಕಾರ ಮನದಟ್ಟು ಮಾಡಿಕೊಂಡಿರುವ ಕೆಲಸವನ್ನೂ ಮಾಡಬೇಕೆಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ; (ಕಲಘಟಗಿ):- ಮಾನ್ಯ ಉಪಾಧ್ಯಕ್ಷರೇ, ಈ ಪ್ರಧಾನಮಂತ್ರಿ ಸಡಕ್ ಯೋಜನೆ ಇವತ್ತು ಕರ್ನಾಟಕ ರಾಜ್ಯ ಸರ್ಕಾರ ಜಿಲ್ಲಾ ಪಂಚಾಯಿತಿಯ ಮುಖಾಂತರ ಒಂದು ಕಿಲೋಮೀಟರ್‌ಗೆ ಮೂರು ಲಕ್ಷ ರೂಗಳನ್ನು ಕೊಡುತ್ತಾರೆ. ಆದರೆ ಪ್ರಧಾನಮಂತ್ರಿಯವರ ಸಡಕ್ ಯೋಜನೆಗೆ ಅವರನ್ನು ನಿಯೋಜಿಸ ಬೇಕಾಗುತ್ತದೆ. ಒಂದು ಕಿಲೋ ಮೀಟರ್ ಕಡಿಮೆ ಎಂದರೂ ಏಳರಿಂದ ಎಂಟು ಲಕ್ಷ ರೂ.ಗಳನ್ನು ಕೊಡುತ್ತಾರೆ. ಪ್ರಧಾನಮಂತ್ರಿ ಸಡಕ್ ಯೋಜನೆಗೆ ಕೊಡುತ್ತಾರೆ. ಇವತ್ತು ನಾವು ನಿತ್ಯ ಟಿವಿ ಯಲ್ಲಿ ನೋಡುತ್ತೇವೆ. ಗ್ರಾಮೀಣಾಬಿವೃದ್ಧಿ ಇಲಾಖೆಯಿಂದ ಗ್ರಾಮೀಣ ಸುಧಾರಣೆಯಾಗಬೇಕು ಎನ್ನುವ ವಿಚಾರವನ್ನು ನಾವು ನಿತ್ಯ ಟಿವಿಯಲ್ಲಿ ನೋಡುತ್ತೇವೆ. ಆದರೆ ನಾಲ್ಕು ವರ್ಷದಿಂದ ಪ್ರಧಾನಮಂತ್ರಿಯವರು ಏನು ಹೇಳಿದ್ದಾರೆಂದರೆ 2007ನೇ ಇಸವಿಗೆ ಇಡೀ ಗ್ರಾಮದಲ್ಲಿ ಬರುವಂಥ ಸುಧಾರಣೆಯನ್ನು ಮಾಡಬೇಕೆನ್ನುವ ಹಂಬಲವನ್ನು ಇಟ್ಟುಕೊಂಡು ಪ್ರತಿಯೊಂದು ಮತಕ್ಷೇತ್ರಕ್ಕೆ ಇಡೀ ಕರ್ನಾಟಕದಲ್ಲಿ 1ಕೋಟಿ 20 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎನ್ನುವ ಒಂದು ಯೋಜನೆಯನ್ನು ಅವರು ತೆಗೆದುಕೊಂಡು ಬಂದರು. ಆದರೆ ಇತ್ತೀಚೆಗೆ ಎರಡು ವರ್ಷದ ಹಿಂದೆ ನಮ್ಮ ಲೋಕಸಭಾ ಸದಸ್ಯರಿದ್ದರು. ವಿಜಯ ಸಂಕೇಶ್ವರ್ ಎಂದು. ಅವರನ್ನು ಕರೆದುಕೊಂಡು ಹೋಗಿ ನಾನು ಖುದ್ದು ರಸ್ತೆಯನ್ನು ತೋರಿಸಿ ಈ ಎರಡೂ ರಸ್ತೆಗಳನ್ನು ಮಾಡಿಸಿಕೊಡಬೇಕೆಂದು ವಿನಂತಿ ಮಾಡಿಕೊಂಡಾಗ ಅವರು ಶಿಫಾರಸ್ ಮಾಡಿದರು. ಎರಡು ವರ್ಷದಲ್ಲಿ ಶಿಫಾರಸ್ ಮಾಡಿದಂಥ ರಸ್ತೆ ಇವತ್ತು ಅಲ್ಲಿ ಹೋರಾಟ ನಡೆದಿದೆ. ರಸ್ತೆ ಬಂದ್ ಕರೆ ಕೊಟ್ಟಿದ್ದಾರೆ. ರಸ್ತೆ ಬಂದ್ ಕರೆ ಕೊಟ್ಟರೂ ಸಹಾ ಎರಡು ವರ್ಷದಿಂದಲೂ ಇವತ್ತು ಆ ರಸ್ತೆಗಳು ಆಗುತ್ತಿಲ್ಲ. ಅಂದರೆ ಎರಡು ವರ್ಷದಿಂದ ಯಾವುದೇ ಒಂದು ಪ್ರಧಾನಮಂತ್ರಿ ಸಡಕ್ ಯೋಜನೆ ಇವತ್ತಿನವರೆಗೂ ಆಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳ ಬಳಿ ಹೋಗಿ ಕೇಳಿದರೆ ಇಲ್ಲ, ಅಪೂರ್ಣವಾಗಿದೆ, ಸ್ಯಾಂಕ್ಷನ್ ಆಗಿದೆ. 8 ದಿವಸದಲ್ಲಿ ಬರುತ್ತದೆ, 15 ದಿವಸದಲ್ಲಿ ಬರುತ್ತದೆ. ಇದನ್ನೇ ಹೇಳುತ್ತಾರೆಯೇ ಹೊರತು ನಿರಂತರವಾಗಿ ಎರಡು ವರ್ಷದಿಂದ ಇವತ್ತು ಗ್ರಾಮೀಣ ರಸ್ತೆ ಅಭಿವೃದ್ಧಿ ಆಗುತ್ತಿಲ್ಲ. ಅದಕ್ಕೆ ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅತೀ ಮಹತ್ವ ಕೊಡಬೇಕಾದ ಈ ಪ್ರಧಾನ ಮಂತ್ರಿ

ಯೋಜನೆಯನ್ನು ತಾವು ತಕ್ಷಣ ಜಾರಿಗೆ ತೆಗೆದುಕೊಂಡು ಬಂದು ಆ ಕೆಲಸವನ್ನು ಪ್ರಾರಂಭ ಮಾಡಿ ಎಂದು ಕೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಪಾಪರೆಡ್ಡಿ:- (ರಾಯಚೂರು):- ಮಾನ್ಯ ಉಪಾಧ್ಯಕ್ಷರೇ, ಈ ಗ್ರಾಮೀಣ ಸಡಕ್ ಯೋಜನೆ ಹಳ್ಳಿಗಳಿಗೆ ವರದಾನವಾದ ಯೋಜನೆ. ಇಂಥ ಒಳ್ಳೆಯ ಯೋಜನೆ ಪ್ರತಿಯೊಂದು ಕ್ಷೇತ್ರಕ್ಕೆ ಒಂದು ಕೋಟಿ ರೂ.ಗಳನ್ನು ಕೊಟ್ಟು ಅಲ್ಲಿಯ ರಸ್ತೆಗಳ ಅಭಿವೃದ್ಧಿ ಆಗುತ್ತಿದೆ. ಯಾವ ಹಳ್ಳಿಗಳಿಗೆ ಸಂಪರ್ಕ ಇರುವುದಿಲ್ಲ, ಅಂಥ ಹಳ್ಳಿಗಳಿಗೆ ಸಂಪರ್ಕವನ್ನು ಕಲ್ಪಿಸುವ ಈ ಒಂದು ಒಳ್ಳೆಯ ಯೋಜನೆಯನ್ನು ಸರ್ಕಾರ, ಈ ಸರ್ಕಾರ ತಂದಂಥ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳದೆ ಇರುವುದು ಬೇಜವಾಬ್ದಾರಿತನ. ಅಧಿಕಾರಿಗಳಾಗಲೀ, ಮಂತ್ರಿಗಳಾಗಲೀ, ಈ ಯೋಜನೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಬೇಕಾಗಿತ್ತು. ಏಕೆಂದರೆ ಯಾವ ಹಳ್ಳಿಗಳಿಗೆ ರಸ್ತೆಗಳು ಇಲ್ಲ. ಅಂಥ ಹಳ್ಳಿಗಳಿಗೆ ಒಳ್ಳೆಯ ರಸ್ತೆಯಾಗಿ ಆ ಹಳ್ಳಿಯ ಜನರು ಸರಿಯಾದ ರೀತಿಯಲ್ಲಿ ಕೇಂದ್ರ ಸ್ಥಾನವನ್ನು ಮುಟ್ಟುವಂಥದ್ದು ವಿಫಲವಾಗುತ್ತದೆ. ನಮ್ಮ ಸರ್ಕಾರದಲ್ಲಿ ಮಾಡುವಂಥ ಕೆಲಸ, ಮಾಡಲಾರದಂಥ ಕೆಲಸ ಕೇಂದ್ರ ಸರ್ಕಾರ ಕೊಡುವ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ಆ ಕಾರಣದಿಂದ ನಮ್ಮ ನಾಯಕರು ಹೇಳಿದ ಪ್ರಕಾರ ಈ ಒಂದು ಯೋಜನೆ ಸರಿಯಾದಂಥ ರೀತಿಯಲ್ಲಿ ಉಪಯೋಗವಾಗಬೇಕು. ಆ ರೀತಿ ಉಪಯೋಗ ವಾಗುವುದರಿಂದ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಎಲ್ಲಾ ಹಳ್ಳಿಗಳಿಗೂ ಒಳ್ಳೆಯ ಸಂಪರ್ಕವಾಗಲಿ, ಹಳ್ಳಿಯ ಜನ ಸರಿಯಾದ ರೀತಿಯಲ್ಲಿ ಕೇಂದ್ರ ಸ್ಥಾನಕ್ಕೆ ಮುಟ್ಟುವ ಒಂದು ಯೋಚನೆಯಿಂದ, ಒಂದು ವಿಚಾರದಿಂದ, ಇಂಥ ಮಹತ್ವಾದ ಯೋಜನೆಯನ್ನು ಕೊಟ್ಟಿದ್ದಾರೆ. ಅಂಥ ಯೋಜನೆಯನ್ನು ನಮ್ಮ ಸರ್ಕಾರ ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳದೇ ಹೋದರೆ ಬಹಳ ದೊಡ್ಡ ತಪ್ಪಾಗುತ್ತದೆ. ಆ ಕಾರಣದಿಂದ ಸರ್ಕಾರ ತಮ್ಮ ಮುಖಾಂತರ ನಾನು ಒತ್ತಾಯ ಮಾಡುತ್ತೇನೆ, ಪ್ರತಿಯೊಂದು ಕ್ಷೇತ್ರಕ್ಕೆ ಒಂದು ಕೋಟಿ ರೂ. ಕೊಡುವ ಈ ಯೋಜನೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕೆನ್ನುವ ವಿಚಾರವನ್ನು ನಾನು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಈ ದೇಶದಲ್ಲಿ 2000-01ನೇ ಇಸವಿಯಲ್ಲಿ ಪ್ರಧಾನ ಮಂತ್ರಿಗಳು ಗ್ರಾಮೀಣ ರಸ್ತೆಗಳನ್ನು ಮಾಡಲಿಕ್ಕೆ 500ಜನ ವಸತಿ ಪ್ರದೇಶಗಳನ್ನು ಒಳಗೊಂಡಂತೆ ಎಲ್ಲಾ ಗ್ರಾಮೀಣಪ್ರದೇಶಗಳಿಗೆ ರಸ್ತೆ ಸಂಪರ್ಕವನ್ನು ನಿರ್ಮಾಣ ಮಾಡಬೇಕೆಂದು ಹೇಳಿ 2000-01ನೇ ಇಸವಿಯಲ್ಲಿ ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಯನ್ನು ಈ ದೇಶದಲ್ಲಿ ಜಾರಿಗೆ ತಂದರು. ಈ ಯೋಜನೆ ಜಾರಿ ಆದಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ಕೂಡ ಈ ಯೋಜನೆ ಜಾರಿ ಆಯಿತು. ಜಾರಿ ಆಗಿ ರಾಜ್ಯದ ಸುಮಾರು 1 ಲಕ್ಷದ 12 ಸಾವಿರಕ್ಕೂ ಹೆಚ್ಚು ಕಿಲೋ ಮೀಟರ್ ಉದ್ದದ ಗ್ರಾಮೀಣ ರಸ್ತೆಗಳು ಇದ್ದಾವೆ. ಆ ರಸ್ತೆಗಳಲ್ಲಿ ಸರಿ ಸುಮಾರು 25ಸಾವಿರ ಕಿಲೋ ಮೀಟರ್ ರಸ್ತೆಗಳಿಗೆ ಟಾರ್ ಮಾಡಿದ್ದಾರೆ. 25ಸಾವಿರ ರಸ್ತೆಗಳಿಗೆ ಮೆಟಲಿಂಗ್ ಮಾಡಿದೆ. ಉಳಿದಂತಹ ರಸ್ತೆಗಳು, ಸಮರ್ಪಕವಾಗಿ ನಿರ್ವಹಣೆ ಮಾಡಲಿಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಒಂದು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಮತ್ತು ಇದೇ ಮಾದರಿಯಲ್ಲಿ ಕರ್ನಾಟಕ ಮೊದಲನೇ ಬಾರಿಗೆ ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಕೂಡ ಜಾರಿ ಮಾಡಿದ್ದೇವೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಸನ್ಮಾನ್ಯ ಹಿರಿಯರಾದಂತಹ ಯಡಿಯೂರಪ್ಪನವರು, ಶ್ರೀನಾಗರಾಜ್ ಶೆಟ್ಟರು, ಶ್ರೀಗೋವಿಂದ ಕಾರಜೋಳ ಅವರುಗಳು ನಿಯಮ 69ರ ಕೆಳಗಡೆ ಪ್ರಮುಖವಾದಂತಹ ಮತ್ತು ಸಾರ್ವಜನಿಕ ಮಹತ್ವವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿ ಹಳ್ಳಿಗಾಡಿನ ರಸ್ತೆಯನ್ನು ಅಭಿವೃದ್ಧಿ ಮಾಡುವಲ್ಲಿ ಕೇಂದ್ರ ಸರ್ಕಾರ ಕೊಡತಕ್ಕ ಹಣವನ್ನು ರಾಜ್ಯ ಸರ್ಕಾರ ಸಮರ್ಪಕವಾಗಿ ಬಳಸಿ ಈ ರಾಜ್ಯದ ಹಳ್ಳಿಗಾಡಿನ ರಸ್ತೆಗಳನ್ನು ಸುವ್ಯವಸ್ಥಿತವಾಗಿ ನಿರ್ಮಾಣ ಮಾಡಬೇಕು ಎನ್ನುತಕ್ಕ ಕಾಳಜಿ ಯನ್ನು ಅವರು ವ್ಯಕ್ತ ಮಾಡಿ ಸರ್ಕಾರದ ಗಮನವನ್ನು ಸೆಳೆಯುತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಈ ಯೋಜನೆ ಹಂತ1ರಲ್ಲಿ ಸುಮಾರು 938 ಕಾಮಗಾರಿಗಳು.....

ಶ್ರೀ ಯಡಿಯೂರಪ್ಪ ಬಿ.ಎಸ್.:- ಯಾವ ವರ್ಷ ಹೇಳಿ.

ಡಾ. ಹೆಚ್.ಸಿ. ಮಹದೇವಪ್ಪ:- ಹೇಳುತ್ತೇನೆ. ಒಟ್ಟು ಅನುಮೋದಿತ ಕಾಮಗಾರಿಗಳ ಸಂಖ್ಯೆ: ಹಂತ-1 :- 2000-01ರಲ್ಲಿ 412. ಹಂತ-2,2 ಮತ್ತು 2-3 ರಲ್ಲಿ 938. ಹಂತ-3, 2003-04ರಲ್ಲಿ 360.ಕೈಬಿಡಲಾರದ ಕಾಮಗಾರಿಗಳ

ಸಂಖ್ಯೆ:6, ಹಂತ–1ರಲ್ಲಿ ಮತ್ತು ಹಂತ–2ರಲ್ಲಿ 51, ಹಂತ–3ರಲ್ಲಿ ಪ್ಯಾಕೇಜ್‌ಗಳ ಸಂಖ್ಯೆ: 65, ಒಂದನೇ ಹಂತದಲ್ಲಿ 2ನೇ ಹಂತದಲ್ಲಿ 118. ಹಂತ –3ರಲ್ಲಿ 82. ಪೂರ್ಣಗೊಳಿಸಲಾರದ ಕಾಮಗಾರಿಗಳ ಸಂಖ್ಯೆ :412ರಲ್ಲಿ ಹಂತ–1ರಲ್ಲಿ 406, ಹಂತ–2ರಲ್ಲಿ 869, ಹಂತ–3ರಲ್ಲಿ 36. ಅಭಿವೃದ್ಧಿ ಪಡಿಸಲು ಉದ್ದೇಶಿಸಲಾದ ರಸ್ತೆಯ ಉದ್ದ– ಕಿ ಲೋಮೀಟರ್‌ಗಳಲ್ಲಿ ಹಂತ–1ರಲ್ಲಿ 1640. ಹಂತ–2ರಲ್ಲಿ 2000,2002,2002–03 ಎರಡೆರಡು ಒಂದೇ ಸಾರಿ ಕೊಟ್ಟು ಬಿಟ್ಟಿದ್ದಾರೆ. 2002ರಲ್ಲಿ 63, 2003ರಲ್ಲಿ 1096 ಕೇಂದ್ರ ಸರ್ಕಾರವು ಅನುಮೋದಿಸಿದ ಮೊತ್ತ 1ಲಕ್ಷ 360–7.....

ಶ್ರೀ ಬಿ.ಎಸ್. ಯಡಿಯೂರಪ್ಪ: ಏನೋ ನಮಗೆ ಆ ಯೋಜನೆ ಅತ್ಯಂತ ಉತ್ತಮವಾದುದ್ದು, ನೀವೂ ಒಪ್ಪುತ್ತೀರಾ, ನಾವೂ ಒಪ್ಪುತ್ತೀವಿ. ಅಂದರೆ ಯಾವುದರ ಬಗ್ಗೆಯೂ ನಾವು ಮಾತನಾಡುತ್ತಿಲ್ಲ. ಬೇರೆ ರಾಜ್ಯಗಳ ವಿಷಯವೂ ಬೇಡ. ನೇರವಾಗಿ ಮೂರೇ ಪ್ರಶ್ನೆ ನಿಮ್ಮ ಮುಂದೆ, 2001–2001, 2002–2003ಕ್ಕೆ ನಿಮಗೆ ಒಟ್ಟು 218ಕೋಟಿ 22ಲಕ್ಷ ಬಂತು, ನಿಮಗೆ ಆರ್ಡರ್ ಕಾ ಯನ್ನೆಲ್ಲಾ ಕೊಡುತ್ತೇನೆ. ಅದರಲ್ಲಿ ಖರ್ಚು ಮಾಡಿರುವುದು 190ಕೋಟಿ, ಅಂದರೆ ಇನ್ನೂ 28ಕೋಟಿ 22ಲಕ್ಷ ಇದುವರೆಗೆ ಖರ್ಚು ಮಾಡಲಿಲ್ಲ ಇದು ನಂಬರ್ ಒಂದು, ನಂಬರ್ ಟೂ, 2003–2004ಕ್ಕೆ 118ಕೋಟಿ 41ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿತು, ನೀವು 27.6.2005ರವರೆಗೆ ಖರ್ಚು ಮಾಡಿರುವುದು 34 ಕೋಟಿ 33ಲಕ್ಷ ಮಾತ್ರ. ಅಂದರೆ 84ಕೋಟಿ 10ಲಕ್ಷ ರೂಪಾಯಿಗಳನ್ನು ಇದುವರೆಗೆ ಖರ್ಚು ಮಾಡಿಲ್ಲ. 2004–2005ನೇ ಸಾಲಿನಲ್ಲಿ 211 ಕೋಟಿ 7ಲಕ್ಷ ರೂಪಾಯಿಗೆ ಮಂಜೂರಾತಿ ಕೊಟ್ಟರೆ ನೀವು ಅದಕ್ಕೆ ಬೇಕಾದಂಥ ಪ್ರಸ್ತಾವನೆಯನ್ನೆ ಕಳಿಸದೆಯೆ 211 ಕೋಟಿ 7 ಲಕ್ಷವನ್ನು ಲ್ಯಾಪ್ಸ್ ಮಾಡಿದ್ದೀರಾ, ಪತ್ರ ಬರೆದಿದೆ, ನಿಮ್ಮ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಸಚಿವರು ಪತ್ರ ಬರೆದಿದ್ದಾರೆ, ಅಧಿಕಾರಿಗಳು ಬರೆದ ಪತ್ರಗಳನ್ನು ನಾನು ನಿಮಗೆ ಕಳಿಸಿಕೊಡುತ್ತೇನೆ. ಅಂದರೆ ಒಟ್ಟು 323ಕೋಟಿ 39ಲಕ್ಷ ಈ ನಿಮಿಷದವರೆಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಮಾಡಿದಂಥವನ್ನು ನೀವು ಉಪಯೋಗ ಮಾಡಿಕೊಂಡಿಲ್ಲ. ಈ ಕೆಲಸ ಕಾಮಗಾರಿಯನ್ನು ಪ್ರಧಾನ ಮಂತ್ರಿಗಳ ಸಡಕ್ ಯೋಜನೆಯನ್ನು ಮಾಡದೇ ಇರುವುದಕ್ಕೆ ನಿಮಗೆ ಅಡ್ಡಿಯೇನು? ನೂರು

ಪರ್‌ಸೆಂಟ್ ಕೇಂದ್ರ ಸರ್ಕಾರ ಹಣವನ್ನು ಕೊಡುವ ಕಾಲದಲ್ಲಿ ನೀವೇಕೆ ಹಣವನ್ನು ಖರ್ಚು ಮಾಡಲಿಲ್ಲ? ಯಾವ್ಯಾವಾಗ ಕೆಲಸ ಮಂಜೂರಾತಿಯಾದಾಗ ಆ ಲಿಂಕ್ ತಪ್ಪಿಹೋದುದಕ್ಕೆ ಮಿಸ್ಸಿಂಗ್ ಲಿಂಕ್‌ಗೆ ಪ್ರಪೋಸಲ್ ಕಳಿಸಬೇಡಿ, ಅಂದರೆ ಯಾವುದೋ 6 ಕಿಲೋಮೀಟರ್ ಇದೆ, 5 ಕಿಲೋಮೀಟರ್ ಮಾಡಿಸಿದ್ದೀರ, ಇನ್ನು ಒಂದು ಕಿಲೋಮೀಟರ್ ಹಾಗೆಯೆ ಅಲ್ಲಿ ಕಲ್ಲು ಮಣ್ಣು ಇದೆ, ಇನ್ನು ಉಳಿದದ್ದು ಡಾಂಬರೀಕರಣವಾಗಿದೆ, ಇದನ್ನು ಕಳಿಸಿಕೊಡಿ ಎಂದರು. ಇದುವರೆಗೆ ನೀವು ಏನನ್ನೂ ಕಳಿಸದೆಯೆ ನಿಮ್ಮ ಅಧಿಕಾರಿಗಳು ನೀವು ಕೈಕಟ್ಟಿಕೊಂಡು ಕುಳಿತುಕೊಳ್ಳಲು ಕಾರಣವೇನು ಎಂದು ನೇರ ಉತ್ತರವನ್ನು ಕೊಟ್ಟರೆ ಇದರ ಎಲ್ಲಾ ಮಾಹಿತಿಯನ್ನು ವಿವರಗಳನ್ನು ನಾನು ನಿಮಗೆ ಕಳಿಸಿಕೊಡುತ್ತೇನೆ. ಒಂದು ರೂಪಾಯಿ ವ್ಯತ್ಯಾಸವಿಲ್ಲ ಇದರಲ್ಲಿ, ಅದಕ್ಕೆ ನಿಮ್ಮ ಪ್ರಾಬ್ಲಮ್ ಏನು? 2001–02, 2002–03ರ ನಿಮ್ಮ ಸಮಸ್ಯೆ ಏನು? 2003–04ರಲ್ಲಿ ಕೊಟ್ಟಂಥ ಹಣವನ್ನು ಖರ್ಚು ಮಾಡದೆ 84ಕೋಟಿ 10ಲಕ್ಷ ಉಳಿಯಲು ಕಾರಣವೇನು. 2004–05ರದ್ದು ಹತ್ತಾರು ಬಾರಿ ಪತ್ರವನ್ನು ಬರೆದಮೇಲೆ 211ಕೋಟಿ 7ಲಕ್ಷಕ್ಕೆ ನೀವು ಪ್ರಪೋಸಲ್‌ನ್ನೆ ಕಳುಹಿಸದೆಯೆ ಇದುವರೆಗೆ ಕಾಮಗಾರಿಯನ್ನು ಪ್ರಾರಂಭ ಮಾಡದಿರಲು ನಿಮ್ಮ ಕಷ್ಟವೇನು? ಇದನ್ನು ಹೇಳಿದರೆ ಚರ್ಚೆ ಮಾಡಲು., ನನ್ನ ಮಾಹಿತಿ ತಪ್ಪಿದ್ದರೆ ತಿದ್ದಿಕೊಳ್ಳುತ್ತೇನೆ, ನಿಮ್ಮ ಮಾಹಿತಿ ಸರಿ ಇಲ್ಲದಿದ್ದರೆ ಕಾರಣವೇನು ಹೇಳಿ?

ಡಾ: ಹೆಚ್. ಸಿ. ಮಹದೇವಪ್ಪ: (ಗ್ರಾಮೀಣಾಭಿವೃದ್ಧಿ): ಕೇಂದ್ರದಿಂದ ಬರತಕ್ಕಂಥ ಏನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಇದೆ ಇದು ಲ್ಯಾಪ್ಸ್ ಆಯಿತು ಎನ್ನುವಂಥ ಪ್ರಶ್ನೆ ಇಲ್ಲವೇ ಇಲ್ಲ. ಆ ಹಣವನ್ನು ಖರ್ಚು ಮಾಡಲೇ ಬೇಕು. ಏನು ಇವತ್ತು ಈ ಹಣ ಪೇಜ್ ಒಂದರಲ್ಲಿ 103.67ಪೇಜ್ ಎರಡರಲ್ಲಿ 212.22ಪೇಜ್ ಮೂರರಲ್ಲಿ 38, ಒಟ್ಟು ಬಿಡುಗಡೆಯಾಗಿರುವುದು ಮತ್ತು ಖರ್ಚು 354.7, ಬಿಡುಗಡೆಯಾಗಿರುವುದು 365ಕೋಟಿ ಲ್ಯಾಪ್ಸ್ ಆಗುವುದಿಲ್ಲ. ಈ ಹಣ ಲ್ಯಾಪ್ಸ್ ಆಗುವ ಪ್ರಶ್ನೆಯೇ ಇಲ್ಲ. ಏನು ಯುಟಿಲೈಜೇಷನ್ ಮಾಡಿರುತ್ತಾರೆ ಆ ಯುಟಿಲೈಜೇಷನ್ ಸರ್ಟಿಫಿಕೇಟ್‌ನ್ನು ಕೊಟ್ಟು ಈ ಹಣ ಲ್ಯಾಪ್ಸ್ ಆಗುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: 2004–05ನೇ ಸಾಲಿನ ದುಡ್ಡನ್ನೇ ತಂದಿಲ್ಲವಲ್ಲ? 212 ಕೋಟಿ 7ಲಕ್ಷ ರೂಪಾಯಿ ಪ್ರಪೋಸಲ್ ಕಳಿಸಿ ಎಂದರೆ,

ಬೇರೆ ರಾಜ್ಯದವರು ಉಪಯೋಗ ಮಾಡಿಕೊಂಡರೆ, ತಾವು ಪ್ರಪೋಸಲ್‌ನ್ನೆ ಕಳಿಸಿಲ್ಲವಲ್ಲ?

ಶ್ರೀ ಕೆ. ಜೆ. ಬೋಪಯ್ಯ: ಕೇದ್ರ ಸರ್ಕಾರದ ಅಧಿಕಾರಿಗಳು ಹಣವನ್ನು ಖರ್ಚು ಮಾಡಿಲ್ಲವೆಂದು ಪತ್ರವನ್ನೆ ಬರೆದಿದ್ದಾರೆ.

ಡಾ: ಹೆಚ್.ಸಿ. ಮಹದೇವಪ್ಪ: ಎರಡು ಬಾರಿ ಖುದ್ದಾಗಿ ಕೇಂದ್ರದ ಗ್ರಾಮೀಣ ಅಭಿವೃದ್ಧಿ ಸಚಿವರನ್ನೇ ಭೇಟಿ ಮಾಡಿ ಎರಡು ಮೂರು ಗಂಟೆಗಳ ಕಾಲ ಚರ್ಚೆ ಮಾಡಿದ್ದೇನೆ. ರಸ್ತೆಗೆ ಹಣವನ್ನು ಕೊಡಬೇಕೆಂದು ಕೇಳಿದ್ದೇನೆ. ಈ ಸಾರಿ ಅವರು 205 ಕೋಟಿ ಕೊಡುತ್ತಿದ್ದಾರೆ. ಮತ್ತೆ ಹೆಚ್ಚು ಕೊಡಬೇಕೆಂದು ಕೇಳಿದಮೇಲೆ ಅವರು 500 ಕೋಟಿ ಕೊಡುತ್ತೇನೆಂದು ಕೇಳಿದ ತಿಂಗಳು ದೆಹಲಿಗೆ ಹೋಗಿದ್ದಾಗ ಹೇಳಿದರು. ಮೂರು ದಿನ ಇದ್ದು ಅವರೊಂದಿಗೆ ಎರಡು ಮೂರು ಗಂಟೆ ಚರ್ಚೆ ಮಾಡಿ ಸುತ್ತೂರಿನ ಸಭೆಗೆ ಬಂದಿದ್ದಾಗ ಅಲ್ಲಿ ಅನೌನ್ಸ್ ಮಾಡಿದ್ದಾರೆ. ಇಲ್ಲಿ ಯುಟಿಲೈಜೇಷನ್ ಸರ್ಟಿ,ಕೇಟ್ ಕೊಡತಕ್ಕದ್ದು ಸ್ವಲ್ಪ ನಿಧಾನವಾಗಿದೆ. ಆದರೆ ಬಹುತೇಕ ಅವರು ಕೊಟ್ಟಿರತಕ್ಕ ಹಣವನ್ನು ನಾವು ಖರ್ಚು ಮಾಡಿದ್ದೇವೆ. ಕೆಲವು ತೊಂದರೆಗಳು ಇದೆ. ಗೈಡ್‌ಲೆನ್ಸ್ ಬಗ್ಗೆ ಏನು ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದಾರೆ ಅವರು ರಿಮಾರ್ಕ್ಸ್‌ನ್ನು ಮಾಡಲಿಲ್ಲ, ಇಂಥ ಯೋಜನೆ ಚೆನ್ನಾಗಿದೆ. ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಅ್ರೀಶಿಯೇಟ್ ಮಾಡುತ್ತ ಅಲ್ಲಿರತಕ್ಕ ಈ ಯೋಜನೆ ತುಂಬಾ ಒಳ್ಳೆಯ ಯೋಜನೆ ಇದೆ, ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒಂದು ಪ್ರಮುಖವಾದ ಯೋಜನೆ ಇದಾಗಿದೆ, ಇದನ್ನು ಅನುಷ್ಠಾನ ಮಾಡುವುದಕ್ಕೆ ರಾಜ್ಯ ಸರ್ಕಾರಗಳು ಪ್ರಯತ್ನ ಪಟ್ಟು ಕೊಡತಕ್ಕ ಹಣವನ್ನು ಸಂಪೂರ್ಣವಾಗಿ ಬಳಸಿ ಎಲ್ಲಾ ಗ್ರಾಮದ ಐದುನೂರು ಜನವಸತಿಗಳನ್ನು 2007ನೇ ಇಸವಿಗೆ ರಸ್ತೆಗಳನ್ನು ಮಾಡಬೇಕು ಎಂದು ಆ ಪತ್ರದಲ್ಲಿ ಬರೆದಿದ್ದಾರೆ. ಅದನ್ನು ಹೊರತುಪಡಿಸಿ..

ಶ್ರೀ ಹೆಚ್.ಡಿ. ಬಸವರಾಜು: ಪ್ರಶ್ನೆ ಏನಿದೆ ಎಂದರೆ, ಅಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ, ಯುಟಿಲೈಜೇಷನ್ ಸರ್ಟಿ,ಕೇಟ್‌ಗಳು ಹೋಗುತ್ತಿಲ್ಲ, ಯುಟಿಲೈಜೇಷನ್ ಸರ್ಟಿ,ಕೇಟ್‌ಗಳು ಇವತ್ತು ಹೋಗದೆ ಇರುವುದರಿಂದ ಇವತ್ತು ಏನು ಮಾಡಿದ್ದೇರೆಂದರೆ ಕೇಂದ್ರ ಸರ್ಕಾರದವರು ಹಣವನ್ನೇ ಬಿಡುಗಡೆ ಮಾಡುತ್ತಿಲ್ಲ. ಈಗ ನೀವು ಏನು ಹೇಳುತ್ತಿದ್ದೀರಾ ಎಂದರೆ ಬಿಡುಗಡೆ ಮಾಡುತ್ತಾರೆ, ಮಾಡುತ್ತಾರೆ ಎಂದು ಔದು ಖಂಡಿತ ಬಿಡುಗಡೆ

ಮಾಡೇ ಮಾಡುತ್ತಾರೆ, ಇಲ್ಲವೆಂದಲ್ಲ, ಅಧಿಕಾರಿಗಳು ಸಮರ್ಪಕ ವಾಗಿ ಕೆಲಸ ಮಾಡಿ ಆ ಕೆಲಸ ಆಗಿದೆ ಎನ್ನುವಂಥ ಯುಟಿಲೈಜೇಷನ್ ಸರ್ಟಿ,ಕೇಟ್ ಕೊಟ್ಟಾಗ ಮಾತ್ರವೆ ತಮಗೆ ಬರುವಂಥ ಹಣ ಬರುತ್ತದೆ. ಇವರು ಯುಟಿಲೈಜೇಷನ್ ಸರ್ಟಿ,ಕೇಟ್‌ನ್ನೆ ಕೊಡಲಿಲ್ಲವೆಂದರೆ ಎಷ್ಟು ದಿವಸ ದಲ್ಲಿ ಕೊಡುತ್ತೀರ? ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ? ಈ ಕೆಲಸವನ್ನು ಯಾವಾಗ ಪೂರ್ಣ ಮಾಡುತ್ತೀರ ಅದರ ಬಗ್ಗೆ ತಾವು ಜವಾಬ್ದಾರಿ ಯುತವಾಗಿ ನಿಮ್ಮಿಂದ ನಾವು ಉತ್ತರವನ್ನು ಪಡೆಯಲು ಇಚ್ಛೆಪಡುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಒಂದು ವಿಚಾರವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಪ್ರಶ್ನೆಯೇನೆಂದರೆ, ಬಹಿರಂಗವಾಗಿ ಕೇಂದ್ರದ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಪತ್ರಿಕಾ ಹೇಳಿಕೆ ಕೊಡುವ ಮೂಲಕ 'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಗೆ ಕೇಂದ್ರ ಸರ್ಕಾರ ಕೊಟ್ಟಿರುವ ಹಣವನ್ನು ನೀವು (ರಾಜ್ಯ ಸರ್ಕಾರ) ಉಪಯೋಗಿಸಿ ಕೊಂಡಿಲ್ಲ. ಹಾಗಾಗಿ, ಪರಿಸ್ಥಿತಿ ಹೀಗೇ ಮುಂದುವರೆದರೆ ಕರ್ನಾಟಕಕ್ಕೆ ಇನ್ನು ಮುಂದೆ ನಾವು ಹಣವನ್ನು ಬಿಡುಗಡೆ ಮಾಡುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಬಿಡುಗಡೆಯಾದ ಹಣವನ್ನು ಖರ್ಚು ಮಾಡುವುದಕ್ಕೆ ನಿಮಗಾದ ತೊಂದರೆಯೇನು? 'ಯುಟಿಲೈಜೇಷನ್ ಸರ್ಟಿ,ಕೇಟ್ ಕೊಟ್ಟಿಲ್ಲ. ಅದರಲ್ಲಿ ಮಿಸ್ಟೇಕ್ ಆಗಿದೆ. ಆದರೆ, ಹಣ ಖರ್ಚಾಗಿದೆ' ಎಂದು ನೀವು ಹೇಳುತ್ತಿದ್ದೀರಿ. ಯುಟಿಲೈಜೇಷನ್ ಸರ್ಟಿ,ಕೇಟ್ ಕೊಡಲಿಲ್ಲವೆಂದರೆ, ಅದು ಇನ್ನೂ ಬೇಜವಾಬ್ದಾರಿತನದ ಪರಮಾವಧಿಯಾಗುತ್ತದೆ. ಅಂದರೆ, ಹಣ ಉಪಯೋಗಿಸಿಕೊಂಡಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮಾಹಿತಿ ಕೊಡುವುದರಲ್ಲಿ ವಿಫಲರಾಗಿದ್ದೀರಿ ಎಂದರೆ, ಇದನ್ನು ಏನೆಂದು ಹೇಳಬೇಕು? ಇದೊಂದು ಬೇಜವಾಬ್ದಾರಿತನವಲ್ಲವೇ? ಅಥವಾ ಖರ್ಚು ಮಾಡದೇ ಇರಬೇಕು. ಅವರು ಈ ಕುರಿತಂತೆ ಸ್ಪಷ್ಟವಾಗಿ ಹೇಳಿದ್ದಾರೆ. ಕಳೆದ ವರ್ಷಕ್ಕೆ 31 ಕೋಟಿ ರೂಪಾಯಿಗಳನ್ನು ಮಾತ್ರ ಇದೆ. ನನ್ನದೇ ಕ್ಷೇತ್ರದ ಉದಾಹರಣೆ ಹೇಳುವುದಾದರೆ, ನಾಲ್ಕು ಕಾಮಗಾರಿಗಳ ಅನುಮೋದನೆಗಾಗಿ ಪ್ರಸ್ತಾವನೆ ಕಳುಹಿಸಿ ಒಂದೂವರೆ ವರ್ಷವಾಗಿದೆ. ಇದು ನಂಬರ್ ವನ್ ,ಯಾರಿಟಿಯಲ್ಲಿದೆ. ಇವೊತ್ತಿಗೂ ಅದರ ಎಸ್ಟಿಮೇಟ್ ಮಾಡಿ, ಟೆಂಡರ್

ಸಿದ್ಧಪಡಿಸಲು ನಿಮ್ಮಿಂದ ಸಾಧ್ಯವಾಗಿಲ್ಲ ಮತ್ತು ಅದನ್ನು ಸಕಾಲದಲ್ಲಿ ಸಬ್‌ಮಿಟ್ ಮಾಡದಿರುವುದೂ ಇದೆ. ಹಾಗಾಗಿ, ಅದೊಂದು ಅತ್ಯುತ್ತಮವಾದ ಯೋಜನೆಯಾಗಿದೆ. ಆ ಯೋಜನೆಯನ್ನು ಯಾವುದೇ ಪ್ರಧಾನಮಂತ್ರಿ ಗಳು ಜಾರಿಗೊಳಿಸಿದರೂ ಕೂಡ ಅವರನ್ನು ಅಭಿನಂದಿಸ ಬೇಕಾಗುತ್ತದೆ. ಅದರಲ್ಲಿ ಪ್ರಶ್ನೆ, ಸಮಸ್ಯೆ ಇರುವುದೇನೆಂದರೆ, ನಿಯಮಾವಳಿಗಳ ಷರತ್ತುಗಳಿವೆಯಲ್ಲ, ಸಿಂಗಲ್ ಲಿಂಕ್ ರೋಡ್‌ಗೆ ಸಂಬಂಧಿಸಿದಂತೆ, 500 ಜನಸಂಖ್ಯೆ ಇದ್ದುದನ್ನು 4,000 ಜನಸಂಖ್ಯೆಗೆ ಹೆಚ್ಚಿಸಿದರು. ರಸ್ತೆ ಕಾಮಗಾರಿಗೆ ಸಂಬಂಧಿಸಿದ ಷರತ್ತುಗಳು ಬದಲಾವಣೆಯಾಗುತ್ತಿದೆ. ಈ ರೀತಿಯಾದ ಬದಲಾವಣೆಯಿಂದಾಗಿ ಸ್ವಲ್ಪ ಅಡಚಣೆಯುಂಟಾಗಿದೆ. ಈಗ ಕೇಂದ್ರ ಸರ್ಕಾರದ ಮುಂದೆ ನಮ್ಮ ಪ್ರಸ್ತಾವನೆ ಪೆಂಡಿಂಗ್ ಇದೆಯೆಂದು ಏನು ಹೇಳುತ್ತಿದ್ದೀರಿ, ಪೆಂಡಿಂಗ್ ಇರುವುದಕ್ಕೆ ಕಾರಣ, ಈ ನಿಯಮಾವಳಿಯಲ್ಲಿ ಆದಂಥ ಬದಲಾವಣೆ. ಆದರೆ, ರಾಜ್ಯ ಸರ್ಕಾರದವರಾದ ನೀವು ಕೇಂದ್ರ ಸರ್ಕಾರದ ಗಮನಕ್ಕೆ ತರದೇ ವಿಫಲರಾಗಿರುವುದು ಎಲ್ಲಿ ಎಂದರೆ, ಗ್ರಾಮ ಸಡಕ್ ಯೋಜನೆಯಲ್ಲಿ ಏನು ನಿಯಮಾವಳಿ ವಿಧಿಸಿದ್ದೀರ, ಆ ನಿಯಮಾವಳಿಗಳು ಭಾರತ ದೇಶದ ಎಲ್ಲಾ ರಾಜ್ಯಗಳಿಗೂ ಒಂದೇ ರೀತಿಯಲ್ಲಿ ಅನ್ವಯವಾಗುವುದಿಲ್ಲ. ನೀವೇನಾದರೂ ಆ ಷರತ್ತುಗಳನ್ನು ಒಪ್ಪುವುದಾದರೆ, ಇಡೀ ಮಲೆನಾಡು ಪ್ರದೇಶದಲ್ಲಿ, ಕೋಸ್ಟಲ್ ಬೆಲ್ಟ್‌ನಲ್ಲಿ ಎಂಜಿಎಸ್‌ವೈ ಅಡಿಯಲ್ಲಿ ಒಂದೇ ಒಂದು ರಸ್ತೆ ಕಾಮಗಾರಿಯನ್ನೂ ನಿಮಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ! ಇಡೀ ಕೋಸ್ಟಲ್ ಬೆಲ್ಟ್‌ನಲ್ಲಿ ಸಣ್ಣ ಸಣ್ಣ ರಸ್ತೆ ಇರುವುದಷ್ಟೇ ಅಲ್ಲ, 1,000 ಜನಸಂಖ್ಯೆ ಇರುವ ಹಳ್ಳಿಗಳೇ ಇಲ್ಲ. ಎಲ್ಲಿವೆ? ನೀವು ರಸ್ತೆ ಕಾಮಗಾರಿಯನ್ನು ಹೇಗೆ ಕೈಗೊಳ್ಳುತ್ತೀರಿ ? ಮತ್ತು ಕರ್ನಾಟಕದ ದಕ್ಷಿಣ ಒಳಭಾಗದ ಜಿಲ್ಲೆಗಳಲ್ಲಿ ಕೂಡ 4,000 5,000 ಜನಸಂಖ್ಯೆ ಇರುವ ಹಳ್ಳಿಗಳು ಬಹಳ ಕಡಿಮೆ ಸಂಖ್ಯೆಯಲ್ಲಿವೆ. ಹೌದಲ್ಲವೇ ? ಆದಕಾರಣ, ನೀವು ನಿಯಮಾಳಿಯನ್ನು ಬದಲಾಯಿಸದೆ ಹೋದರೆ, ನೀವು ಕೊಟ್ಟಂಥ ಹಣವನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗುವುದಿಲ್ಲವೆನ್ನುವ ವಿಚಾರವನ್ನು ನೀವೇಕೆ ಕೇಂದ್ರ ಸರ್ಕಾರದ ಗಮನಕ್ಕೆ ತರಲಿಲ್ಲ? ಆ ಕುರಿತಂತೆ ನೀವೇಕೆ ಒತ್ತಾಯ ಮಾಡಲಿಲ್ಲ? ಇದು ಯಾವ ಜವಾಬ್ದಾರಿ ? ಇದರಿಂದಾಗಿ ಇವೊತ್ತು ರಾಜ್ಯಕ್ಕೆ ಬಂದ ನೂರಾರು ಕೋಟಿ ರೂಪಾಯಿಗಳಷ್ಟು ಹಣವನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ ಮತ್ತು ಬರಬೇಕಾಗಿರತಕ್ಕ ಹಣವನ್ನು ಪಡೆಯಲು ಸಾಧ್ಯವಾಗದೆ, ಇವೊತ್ತು ಹದಗೆಟ್ಟಿರುವ ರಸ್ತೆಗಳು ಗತಿ

ಕಾಣದೆ ಹೋಗಿದೆ. ಇದು ಸಂಪೂರ್ಣವಾಗಿ ನಿಮ್ಮ ಆಡಳಿತಾತ್ಮಕ ವಿಫಲತೆಯೇ ಹೊರತು ಬೇರೇನೂ ಕಾರಣವಲ್ಲ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪಾಧ್ಯಕ್ಷರೆ, ಪ್ರಧಾನ ಮಂತ್ರಿಗಳ ಗ್ರಾಮ ಸೆಡಕ್ ಯೋಜನೆ ಏನಿದೆ, ಇದು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ತಂದ ಒಂದು ಪ್ರಮುಖ ಕಾರ್ಯಕ್ರಮವಾಗಿದೆ. ಸದರಿ ಯೋಜನೆಯ ಮಂಜೂರಾತಿ ಮತ್ತು ಅನುಷ್ಠಾನದಲ್ಲಿ ಆಡಳಿತಾತ್ಮಕ ಲೋಪವಾಗಿದೆಯೆಂದು ಮಂತ್ರಿಗಳು ಒಪ್ಪಿಕೊಂಡರೆ ನಾನು ಸ್ವಾಗತಿಸುತ್ತೇವೆ. ಇವರು ಲೋಪವೆಸಗಿದ್ದಾರೆಂದು ನಾವು ಹೇಳುವುದಕ್ಕೆ ಹೋಗುವುದಿಲ್ಲ. ಅಧಿಕಾರಿಶಾಹಿ ಏನಿದೆ, ಅವರು ಕರ್ತವ್ಯಲೋಪ ಮಾಡುತ್ತಿದ್ದಾರೆ. ಅಂತಹವರು ಯಾರಿದ್ದಾರೆ, you kick them out. ಈ ಯೋಜನೆಯಡಿ ಕೇಂದ್ರ ಸರ್ಕಾರ ಪ್ರತಿಶತ ನೂರರಷ್ಟು ಅನುದಾನ ಕೊಡುತ್ತಿದೆ. 2001–02 ಮತ್ತು 2002–03 ಈ ಎರಡು ವರ್ಷಗಳ ಯೋಜನೆಯನ್ನು ಒಟ್ಟಿಗೆ ಏಕೆ ಕಳುಹಿಸಿದಿರಿ? ಆಯಾ ವರ್ಷವೇ ಏಕೆ ಕಳುಹಿಸಿಕೊಡಲಿಲ್ಲ ? ಮತ್ತು 2004–05ನೇ ಸಾಲಿನ ಯೋಜನೆಗೆ ಸಂಬಂಧಿಸಿದ ಪ್ರಸ್ತಾವನೆಗೆ ತಾವಿನ್ನೂ ಮಂಜೂರಾತಿಯೇ ಮಾಡಿಸಿ ಕೊಂಡಿಲ್ಲ. ನೀವು ಪ್ರಸ್ತಾವನೆ ಕಳುಹಿಸಿಕೊಡಲಿಲ್ಲ, ಮಂಜೂರಾತಿ ಏಕೆ ವಿಳಂಬವಾಗುತ್ತಿದೆ? ಅನುಷ್ಠಾನ ಗೊಳ್ಳಲು ಏಕೆ ವಿಳಂಬವಾಗುತ್ತಿದೆ? ಇಂಜಿನಿಯರ್ಸ್, ಕಂಟ್ರಾಕ್ಟರ್ಸ್ ಮಧ್ಯೇ ಅವರವರ ವ್ಯವಹಾರಕ್ಕೋಸ್ಕರ ವಿಳಂಬವಾಗುತ್ತಿದೆಯೇ? ನಿಮ್ಮದೇನಾದರೂ ಅದರಲ್ಲಿ ಪಾಲು ಇದೆಯೇ ? ಪಾಲು ಇಲ್ಲದೇ ಇದ್ದರೆ ನೀವೇಕೆ ಸುಮ್ಮನೆ ಕುಳಿತಿದ್ದೀರಿ? You sack them. You kick them out. ಕೇಂದ್ರ ಸರ್ಕಾರ ದುಡ್ಡು ಕೊಡುತ್ತದೆಂದರೆ, ನೀವು ಅದನ್ನು ಸಂಪೂರ್ಣ ಬಳಸಿಕೊಂಡು ಇನ್ನು ಹೆಚ್ಚು ಕೊಡಿ ಎಂದು ಕೇಳಬೇಕು. ಆದರೆ, ಕೊಟ್ಟ ಹಣವನ್ನು ಉಪಯೋಗಿಸಿ ಕೊಳ್ಳದೆ ಸುಮ್ಮನೆ ವಿನಾಕಾರಣ ಹೇಳುತ್ತಾ ಕುಳಿತುಕೊಳ್ಳುವುದು, ಈ ಸಮಜಾಯಿಷಿಯನ್ನು ನಾನಂತೂ ಒಪ್ಪಿಕೊಳ್ಳುವುದಿಲ್ಲ. ಈ ಸದನವೂ ಒಪ್ಪಿಕೊಳ್ಳುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ದಯಮಾಡಿ ತಾವು ಇದರ ಬಗ್ಗೆ ಗಂಭೀರವಾಗಿ ಗಮನಹರಿಸಬೇಕೆಂಬ ಮಾತನ್ನು ಹೇಳುತ್ತಾ, ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದೇನೆ. ವಿಳಂಬಕ್ಕೆ ಯಾರು ಕಾರಣರಾರು? ಇಂಜಿನಿಯರುಗಳೇ? ಗುತ್ತಿಗೆದಾರರುಗಳೇ?

ಎಷ್ಟು ಜನರನ್ನು ಕಪ್ಪು ಪಟ್ಟಿಗೆ ಸೇರಿಸಿದ್ದೀರಿ? ಕಪ್ಪು ಪಟ್ಟಿಗೆ ಏಕೆ ಸೇರಿಸಿಲ್ಲ? ನಿಮಗೆ ಪರ್ಸಂಟೇಜ್ ಕೊಡುತ್ತಾರೆ, ಅದಕ್ಕೋಸ್ಕರ, ಅವರನ್ನು ಸೇರಿಸಿಲ್ಲ. ಏನಾಗಿದೆ?

ಶ್ರೀ ಎಸ್. ಎಸ್. ಪಾಟೀಲ್(ಮುಂಡರಗಿ): ಸನ್ಮಾನ್ಯ ಉಪಾಧ್ಯಕ್ಷರೆ, ನಿಜವಾಗಿಯೂ ಇದು ಎಲ್ಲರೂ ಲೆತಗ್ಗಿಸಬೇಕಾದ ವಿಚಾರವಾಗಿದೆ. ಬಹುಶಃ ಇಲ್ಲಿಂದಲೇ ಇವರು ಲ್ಯಾಂಡ್ ಆರ್ಮಿ ಕಾರ್ಪೋರೇಷನ್‌ಗೆ ಕಳುಹಿಸಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಿಸಿದನ್ನು ಎಲ್ಲರಿಗೂ ಹೇಳಿದ್ದಾಯಿತು. ನಾನು ಹಳ್ಳಿಗೆ ಹೋಗುವಂತಿಲ್ಲ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಅಲ್ಲಿ ಕೆಲಸ ಮಾಡಿಲ್ಲ. ನೀವೀಗ ಬಂದು ಒಂದು ವರ್ಷವಾಗಿದೆ. ಎಲ್ಲವನ್ನೂ ತರಿಸಿ ಸರಿಯಾಗಿ ನೋಡಿ. ಈ ಹಿಂದೆ ಕೂಡ ಏನೇನಾಗಿದೆ ಎಂಬುದನ್ನೆಲ್ಲಾ ನೋಡಿ, ಕೆಲಸ ಮಾಡಿಲ್ಲ. ಲ್ಯಾಂಡ್ ಆರ್ಮಿಗೆ ವಹಿಸಿದ್ದೆಲ್ಲವೂ ಕಳಪೆ ಕೆಲಸಗಳಾಗಿವೆ. ಅಲ್ಲಿ ಗುಂಡಿಗಳಾಗಿವೆ. ಸುಮಾರು ಐದು ವರ್ಷಗಳ ರಿಪೇರಿ ಜವಾಬ್ದಾರಿ ಇವರದ್ದಾಗಿದ್ದು 'ಇದನ್ನೆಲ್ಲಾ ಯಾರು ಮಾಡುವುದು?' ಎಂದು ಹೇಳುತ್ತಾರೆ. ಹೀಗಾಗಿ, ಈ ಕೆಲಸ ಎಲ್ಲಾ ರೀತಿಯಲ್ಲೂ ನಿಂತುಹೋಗಿದೆ. ಬಹುಶಃ ಕೇಂದ್ರ ಸರ್ಕಾರದಿಂದ ಪುಕ್ಕಟೆಯಾಗಿ ಬರುವ ಅನುದಾನವನ್ನೂ ನಾವು ಖರ್ಚು ಮಾಡುವುದಿಲ್ಲವೆಂದರೆ, ಮಾನ್ಯ ಮಂತ್ರಿಗಳು ಉತ್ತರಿಸುವ ಮುನ್ನ 'ಇದು ಲ್ಯಾಪ್ಸ್ ಆಗುವುದಿಲ್ಲ, ಹಾಗೇ ಉಳಿಯುತ್ತದೆ' ಎಂದರು. ಅಂದರೆ, ಇನ್ನು ಹತ್ತು ವರ್ಷಗಳಾದ ಬಳಿಕ ಕೆಲಸ ಮುಗಿಸುತ್ತೀರಾ ? ಅದಕ್ಕೆ ಕಾಲಮಿತಿ ಇಲ್ಲವೇ ? ಇವೆಲ್ಲವನ್ನೂ ನಾವು ವಿಚಾರ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಮಾನ್ಯ ಮಂತ್ರಿಗಳು ಯುವಕರಾಗಿದ್ದೀರಿ, ಒಳ್ಳೆಯ ಕೆಲಸಗಾರರಿದ್ದೀರಿ, ಈ ರೀತಿ ಅನಿಸಿಕೊಳ್ಳುವಂಥ ಕೆಲಸ ಮಾಡಬೇಡಿ. ಕೇಂದ್ರ ಸರ್ಕಾರದಿಂದ ಪುಕ್ಕಟೆಯಾಗಿ ಬರುವ ಹಣವನ್ನು ನೀವು ಹೊರಳಿ ಬಿಡುತ್ತಿದ್ದೀರಿ ಎಂದರೆ, ಮತ್ತು ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಪತ್ರ ಬರೆಯುವವರೆಗೂ ನೀವು ಸುಮ್ಮನಿರುತ್ತೀರಿ ಎಂದರೆ, ಖಂಡಿತವಾಗಿಯೂ ಇದರ ಬಗ್ಗೆ ಯಾರೂ ಸುಮ್ಮನಿರಲು ಸಾಧ್ಯವಿಲ್ಲ. ಆದಕಾರಣ, ನಾನು ಈ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕೂಡಲೇ ಇದರ ಬಗ್ಗೆ ಕ್ರಮ ಕೈಗೊಂಡು ಹೆಚ್ಚು ಹಣ ಖರ್ಚು ಮಾಡಿದರೆ..... ಉದಾಹರಣೆಗೆ, ಹೇಳುವುದಾದರೆ, ಕುಡಿಯುವ ನೀರಿನ ಯೋಜನೆಯಲ್ಲಿ ನಮ್ಮ ರಾಜ್ಯದವರು ಹೆಚ್ಚಿನ ಹಣ ತೆಗೆದುಕೊಂಡು

ಬಂದಿರುವುದಕ್ಕೆ ನಿಜವಾಗಿಯೂ ನಾವು ಸಂತೋಷ ಪಡಬೇಕಾಗುತ್ತದೆ. ಏಕೆಂದರೆ, ನಾವು ಹೆಚ್ಚು ಕೆಲಸ ಮಾಡುವ ಮೂಲಕ ಹೆಚ್ಚು ಹಣ ತೆಗೆದುಕೊಂಡು ಬಂದಿದ್ದೇವೆ. ಈ ವಿಷಯ ನಮ್ಮ ಹಿಂದಿನ ಸಮಿತಿ ಸಭೆಯಲ್ಲೂ ಪ್ರಸ್ತಾಪಕ್ಕೆ ಬಂದಿದೆ.

ಹಾಗಾಗಿ, ಗ್ರಾಮ ಸಡಕ್ ಯೋಜನೆಯಲ್ಲೂ ಹೆಚ್ಚು ಕೆಲಸ ಮಾಡಿದರೆ, ಹೆಚ್ಚೆಚ್ಚು ಹಣ ತೆಗೆದುಕೊಂಡು ಬರಲು ಸಾಧ್ಯವಾಗುತ್ತದೆ. ನಾವೆಲ್ಲರೂ ಈ ರಸ್ತೆಯಲ್ಲಿ ಅಡ್ಡಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿನ ಪರಿಸ್ಥಿತಿ ಎಷ್ಟು ತ್ರಾಸದಾಯಕವಾಗಿದೆಯೆಂದರೆ, ಇಂತಹ ಪರಿಸ್ಥಿತಿಯಲ್ಲೂ ಕೇಂದ್ರದಿಂದ ಬರುವ ಹಣವನ್ನು ನೀವು ಖರ್ಚು ಮಾಡುವುದಿಲ್ಲ. ಬಂದಂಥ ಹಣದಲ್ಲಿ ನಮ್ಮ ಕ್ಷೇತ್ರದಲ್ಲಿ ಅರ್ಧರ್ಧ ಕೆಲಸಗಳನ್ನು ಮಾಡಿ ಕೈಬಿಟ್ಟಿದ್ದಾರೆ. ಲ್ಯಾಂಡ್ ಆರ್ಮಿಯವರೂ ಅದರ ಸನಿಹಕ್ಕೂ ಹೋಗುವುದಿಲ್ಲ. ಇವೆಲ್ಲಾ ಕಾರಣಗಳಿವೆ. ಆದಕಾರಣ, ತಾವು ಈ ಕುರಿತಂತೆ ಸಂಪೂರ್ಣವಾಗಿ ವಿವರವಾದ ವರದಿಯರನ್ನು ದಯವಿಟ್ಟು ಒದಗಿಸಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ನೀವು (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಮಾತನಾಡುತ್ತಾ 'ಕೇಂದ್ರ ಸರ್ಕಾರದ ಸಚಿವರನ್ನು ಭೇಟಿ ಮಾಡಿದೆ' ಎಂದಿರಿ. ನೀವು ಮಾಡುವ ಅಗತ್ಯವಿಲ್ಲ. 'ನೀವೇಕೆ ಹಣ ಖರ್ಚು ಮಾಡು ತ್ತಿಲ್ಲ'ವೆಂದು ಕೇಳುತ್ತಿದ್ದಾರೆ. 6ನೇ ಜನವರಿ 2004ರಂದು ನಿರ್ದೇಶಕ ರಾಗಿರುವ ಸಿ.ಆರ್.ನಾಯರ್‌ರವರು ಬಳಿಗಾರ್ ಅವರಿಗೆ ಪತ್ರ ಬರೆದಿದ್ದಾರೆ. ಪತ್ರದಲ್ಲಿರುವ ಎರಡು ರೆಲವೆಂಟ್ ಸೆಂಟೆನ್ಸ್ ಅನ್ನು ಓದುತ್ತೇನೆ. 'Please refer to your letter No. DRP.Secy. 134-2003 dated 16.12.2003 enclosing an additional proposal valued Rs. 116 crores seven lakhs for the current year. You may also take necessary action for completing the associated standard requirements up dated in the website ATRS on NPM report etc. Imediately action may be taken so that these proposals can be cleared during the current year itself.'

2003–04ನೇ ಸಾಲಿಗೆ 116 ಕೋಟಿ 7 ಲಕ್ಷ ರೂಪಾಯಿಗಳಷ್ಟು ಹೆಚ್ಚುವರಿ ಹಣ ಕಳುಹಿಸಿದ್ದು, ಅದಕ್ಕೂ ಮುಂಚಿತವಾಗಿ 95 ಕೋಟಿ ರೂಪಾಯಿಗಳನ್ನು ಕಳುಹಿಸಿಕೊಡುವ ಮೂಲಕ ಈ ಹಣವನ್ನು ಉಪಯೋಗಿಸಿಕೊಳ್ಳಬೇಕೆಂದು 3–

4 ರಿಮೈಂಡರ್‌ಗಳನ್ನು ಹಾಕಿದ್ದಾರೆ. ರಿಮೈಂಡರ್‌ಗಳ ಎಲ್ಲಾ ಪ್ರತಿಗಳು ನನ್ನ ಬಳಿ ಇವೆ. ಅಂದರೆ, 2003-04 ಮತ್ತು 2004-05ನೇ ಸಾಲಿನಲ್ಲಿ ನೀವು ಒಟ್ಟು 211 ಕೋಟಿ 7 ಲಕ್ಷ ರೂಪಾಯಿಗಳನ್ನು ತರಿಸಿಕೊಳ್ಳಲಿಲ್ಲ. ಇದುವರೆಗೂ ಒಂದು ಪೈಸೆಯಷ್ಟು ಹಣ ಖರ್ಚು ಮಾಡಿರುವ ಕುರಿತಂತೆ ಪ್ರಶ್ನೆ ಬರುವುದಿಲ್ಲ. ಏಕೆಂದರೆ, ನೀವು ಪ್ರಪೋಸಲ್ ಕಳುಹಿಸಲಿಲ್ಲ. 2003-04ನೇ ಸಾಲಿಗೆ ಕೊಟ್ಟ ಹಣದಲ್ಲಿ 84 ಕೋಟಿ 10 ಲಕ್ಷ ರೂಪಾಯಿಗಳನ್ನು ಉಪಯೋಗಿಸಿಕೊಂಡಿರಿ. ಇದು 27.6.2005ರೊಳಗೆ ಇಲಾಖೆಯಿಂದ ಪಡೆದುಕೊಂಡಿರುವ ಮಾಹಿತಿಯ ಸಂಗತಿಗಳನ್ನು ನಾನು ಹೇಳುತ್ತಿರುವುದು. ಮತ್ತೆ ಅದು ಸಾಲದೆಂದು 'ಇನ್ನು ಮುಂದೆ ನಿಮಗೆ ಕೊಡುತ್ತಿರುವ ಹಣವನ್ನೂ ಕೂಡ ಕಟ್ ಮಾಡಬೇಕಾಗುತ್ತದೆ.' ಎಂದು .... ಇಲ್ಲಿ ಕಂಡಿಷನ್ಸ್ ಇದೆ. ಅವರು ಏನು ಹೇಳಿದ್ದಾರೆ 'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಇನ್ನು ಮುಂದೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಹಣದಲ್ಲಿ ಕಡಿತವಾಗುತ್ತದೆ' ಎಂಬ ಎಚ್ಚರಿಕೆಯ ಪತ್ರ ಬಂದಿದೆ. ಈ ಪತ್ರವನ್ನು ಡಾ: ರಘುವಂಶ ಪ್ರಸದ್ ಸಿಂಗ್‌ರವರು ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರ. ನನಗೆ ಇನ್ನೇನೂ ವಿವರ ಬೇಡ. ನಿಮಗೆ ಕೊಟ್ಟ 211 ಕೋಟಿ 7 ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದಂತೆ ಪ್ರಪೋಸಲ್ ಕಳುಹಿಸಿಕೊಡಿರೆಂದರೆ, ಈ ನಿಮಿಷದವರೆಗೂ ನೀವು ಪ್ರಪೋಸಲ್ ಕಳುಹಿಸಿಕೊಡಲಿಲ್ಲ. ಕಾರಣವೇನು? ಕೇಂದ್ರ ಸರ್ಕಾರ ಕಳುಹಿಸಿರುವ ಹಣವನ್ನು ಬೇರೆ ರಾಜ್ಯಗಳವರು 500. 700, 1,000 ಕೋಟಿ ರೂಪಾಯಿಗಳಷ್ಟು ಈ ರೀತಿ ಹಣ ಉಪಯೋಗಿಸಿಕೊಂಡಿದ್ದಾರೆ. 2003-04ನೇ ಸಾಲಿಗೆ ಹಣ ಬಿಡುಗಡೆ ಯಾಯಿತು. ನಿಮಗೆ ಕೊಟ್ಟ ಹಣದಲ್ಲಿ 84 ಕೋಟಿ 10 ಲಕ್ಷ ರೂಪಾಯಿ ಗಳನ್ನೂ ನೀವು ಖರ್ಚು ಮಾಡಲಿಲ್ಲವೆಂದರೆ ನೀವೇನು ಮಾಡುತ್ತಿದ್ದೀರಿ ?

ಇವತ್ತು ಏನಾದರೂ ಒಂದು ಶಬ್ದ ಮಾತನಾಡಿದರೆ ಅಪಾರ್ಥಕ್ಕೆ ಅವಕಾಶ ಆಗುತ್ತದೆ. ಬಹಳ ಖಾರವಾಗಿ ಆಡಳಿತ ಪಕ್ಷದ ಸದಸ್ಯರು ಹೇಳಿದ್ದಾರೆ. ಜವಾಬ್ದಾರಿಯಿಂದ ನಾವು ಇಲ್ಲಿ ಮಾತನಾಡುತ್ತಿದ್ದೇವೆ. ನೀವು ಒಂದೇ ಒಂದು ಮಾಡಬೇಕಾಗಿರುವಂತಹ ಕೆಲಸ ಅಂದರೆ ನಿಮಗೆ ಅಸಕ್ತಿ ಇಲ್ಲವಾ ? ನಿಮ್ಮ ಸಮಸ್ಯೆ ಏನು? ನಿಮ್ಮ ಅಧಿಕಾರಿಗಳು ಕೋಅಪರೇಷನ್ ಕೊಡಲಿಲ್ಲವಾ? ಈ ದೊಡ್ಡ ದೊಡ್ಡದಾಗಿ ಮಾತನಾಡುವಂತಹ ನಿಮ್ಮ ಅಧಿಕಾರಿಗಳು ತಾವು ಬುದ್ಧಿವಾದ ಹೇಳುತ್ತಾರೆ. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಬೊಬ್ಬೆ

ಹೊಡೆಯುವಂತಹವರು ಕೊಟ್ಟ ಹಣ ಉಪಯೋಗಿಸಿ ಕೊಳ್ಳುವಂತಹ ಯೋಗ್ಯತೆ ಇಲ್ಲ. ಏಕೆ ಅವರು ಮುಂದುವರಿಯುತ್ತಾ ಏಕೆ ಅವರಿಗೆ ಅವಕಾಶ ಕೊಡುತ್ತೀರಿ? ನಿಮಗೆ ಆಸಕ್ತಿ ಇಲ್ಲದೇ ಇದ್ದರೆ ಬೇರೆ ಇಲಾಖೆ ನೀವು ತೆಗೆದುಕೊಳ್ಳಿ. ಒಂದು ಕ್ಷಣ ನೀವು ಈ ಇಲಾಖೆಯಲ್ಲಿ ಮುಂದುವರಿಯಬಾರದು. ಇಲ್ಲ ಎಂದರೆ ಕಾರಣಗಳನ್ನು ಹೇಳಿ. ಮಾಹಿತಿಗಳನ್ನು ತೆಗೆದುಕೊಂಡು ಬಂದು ಉತ್ತರ ಕೊಡಿ. ನೀವು ಬೇರೆ ಏನೋ ಕಥೆ ಹೇಳುವುದು ಬೇಡ. ನಾನು ದೆಹಲಿಗೆ ಹೋಗಿದ್ದೆ, ಮಂತ್ರಿಗಳನ್ನು ನೋಡಿದ್ದೆ ಎನ್ನುತ್ತೀರಿ. ಮಂತ್ರಿಗಳೇ ಅಲ್ಲಿಂದ ಪತ್ರ ಬರೆದರೆ, ಹೋದ ವರ್ಷ ನೀವು ಒಂದು ಪೈಸೆ ಉಪಯೋಗ ಮಾಡಿಕೊಂಡಿಲ್ಲ. ಅದೂ ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆಯಲ್ಲಿ. ಅವರು ಹೇಳಿದ ಹಾಗೆ ನಿಮ್ಮದು ಯಾವ ಲೆಕ್ಕಾಚಾರ? ನಿಮ್ಮದೇನು ಪ್ರಾಬ್ಲಮ್? ಇದುವರೆಗೂ ಪ್ರಪೋಜಲ್ ಏಕೆ ಕಳಿಸಲಿಲ್ಲ? ಇದರ ಬಗ್ಗೆ ಉತ್ತರ ಕೊಡಿ ಎಂದರೆ ಗ್ರಾಮ ಸಡಕ ಯೋಜನೆ, ಅದರ ಕಲ್ಪನೆ ಹೇಳುತ್ತೀರಿ. ಅದರ ಬಗ್ಗೆ ಬೇರೆ ಸಮಯದಲ್ಲಿ ಚರ್ಚೆ ಮಾಡೋಣ. ನೇರವಾಗಿ ಮಂತ್ರಿಗಳಾಗಿ ನಮಗೆ ಆ ಪತ್ರ ಇದೆ, ವಿವರಗಳನ್ನು ಕೊಡಿ. ಬೇರೆಯದೆಲ್ಲಾ ಏಕೆ ಮಾತನಾಡುತ್ತೀರಿ?

ಉಪಾಧ್ಯಕ್ಷರು :- ಮಾನ್ಯ ಕಾರಜೋಳ ಅವರೇ ಕುಳಿತುಕೊಳ್ಳಿ. ಪ್ರಶ್ನೆಗಳೆಲ್ಲಾ ಆಯಿತು. ಅವರು ಉತ್ತರ ಕೊಡಲಿ. ಅವರೇನು ಉತ್ತರ ಕೊಡುತ್ತಾರೋ ನೋಡೋಣ.

ಶ್ರೀ ಡಿ. ಆರ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಹೆಸರು ಗ್ರಾಮ ಸಡಕ್ ಯೋಜನೆ. ನಿರ್ಣಯ ಆಗುವುದು ಬೆಂಗಳೂರು ಒಳಗೆ. ಮಾನ್ಯ ಶ್ರೀರಾಮ ರೆಡ್ಡಿಯವರು ಹೇಳಿದ ಹಾಗೆ ಅದು ಜಿಲ್ಲಾ ಮಟ್ಟದಲ್ಲಿ ನಿರ್ಣಯ ಆಗುವಂತಹ ಒಂದು ವ್ಯವಸ್ಥೆ ಬಂದರೆ ಮಾತ್ರ ನಾವು ಪ್ರತಿ ವರ್ಷ ಈ ಕಾರ್ಯ ಸಾಧನೆಯನ್ನು ಮಾಡಿ ತೋರಿಸಲಿಕ್ಕೆ ಸಾಧ್ಯವಾಗುತ್ತದೆ. ಈ ವ್ಯವಸ್ತೆ ಬದಲು ಮಾಡಲಿಕ್ಕೆ ನೀವು ದಯವಿಟ್ಟು ಪ್ರಯತ್ನ ಮಾಡಿ. ಮೊದಲಿದ್ದ ಸರ್ಕಾರಕ್ಕೆ ವಿಕೇಂದ್ರೀಕೃತ ವ್ಯವಸ್ಥೆ ಒಳಗೆ ವಿಶ್ವಾಸ ಇದ್ದಿದ್ದಿಲ್ಲ. ಅವರು ಕೇಂದ್ರೀಕೃತ ಮಾಡಿಕೊಂಡಿದ್ದರು. ಈಗಿರುವ ಕೇಂದ್ರ ಸರ್ಕಾರಕ್ಕೆ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ತುಂಬಾ ವಿಶ್ವಾಸ ಇದೆ. ನೀವು ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ :- ವಿಕೇಂದ್ರೀಕೃತ ವ್ಯವಸ್ಥೆ ತಂದವರು ಅವರೇ. ಅದಕ್ಕೆ ವಿಕಲ್ಪವನ್ನೇ ಮಾಡಿಕೊಳ್ಳಿ ಎಂದು.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ :- ವಿಕಲ್ಪ ಮಾಡುವುದು ಬೇಡ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಮಹದೇವಪ್ಪನವರೇ, ನೀವ ಸಾಕಷ್ಟು ಬಾರಿ ಹಿಂದೆಯೂ ಮಂತ್ರಿ ಆಗಿದ್ದವರು. ಅನುಭವ ಇರುವಂತಹ ವ್ಯಕ್ತಿಗಳು. ನಿಮ್ಮ ಕಷ್ಟ ಏನು ಎಂದು ಹೇಳಿ. ದಯಮಾಡಿ ಈ ಸದನಕ್ಕೆ ತಪ್ಪು ಮಾಹಿತಿಗಳನ್ನು ಕೊಡಬೇಡಿ. ಅದೇನೂ ಲ್ಯಾಪ್ಸ್ ಆಗುವುದಿಲ್ಲ. ಯಡಿಯೂರಪ್ಪನವರೇ. ಯಾವಾಗ ಬೇಕಾದರೂ ಖರ್ಚು ಮಾಡಬಹುದು. ಯಾವಾಗ ಬೇಕಾದರೂ ಮಾಡಬಹುದು ಎಂದಲ್ಲ. ಆಯಾಯ ವರ್ಷದಲ್ಲಿ ಬಂದಂತಹ ಹಣವನ್ನು ನೀವು ಏಕೆ ಖರ್ಚು ಮಾಡಲಿಲ್ಲ ? ನಿಮಗೇನು ಕಷ್ಟ ಇದೆ? ಸಮಸ್ಯೆ ಇದೆ, ಅದರ ಬಗ್ಗೆ ಹೇಳಿ?

(ಗೊಂದಲ)

ಉಪಾಧ್ಯಕ್ಷರು :- ಮಾನ್ಯ ಕಾರಜೋಳ ಅವರೇ, ಈಗಾಗಲೇ ಸಾಕಷ್ಟು ಹೇಳಿದ್ದೀನಿ. ಹೇಳಿದ್ದೇ ಹೇಳುತ್ತೀರಲ್ಲ. ಹೊಸದು ಏನೂ ಇಲ್ಲ. ಹೇಳಿದ್ದೇ ಹೇಳುತ್ತಿದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ :- ನನಗೇ ಅವಕಾಶ ಇಲ್ಲ ಎಂದರೆ ಹೇಗೆ ?

ಉಪಾಧ್ಯಕ್ಷರು :- ಮತ್ತೆ ಅದನ್ನೇ ಹೇಳುತ್ತಿದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ :- ನೋಟೀಸ್ ಸಹಿ ಮಾಡಿದವನು ನಾನು. ಇಡೀ ಸದನವೇ ಮಾತನಾಡಿತು. ನನಗೆ ಅವಕಾಶ ಇಲ್ಲ.

ಉಪಾಧ್ಯಾಯರು :- ಆಯಿತು. ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ :- ಮಾನ್ಯ ಅಧ್ಯಕ್ಷರೆ,

ಶ್ರೀ ಎಸ್. ರಾಜೇಂದ್ರನ್ :- ಮಾನ್ಯ ಸಚಿವರು ಮಾತನಾಡುತ್ತಾ, ಮಾನ್ಯ ಉಪಸಭಾಪತಿಗಳೇ, ಉಪಾಧ್ಯಕ್ಷರೆ, ಎಂದು ಹೇಳಿದರು. ಅಲ್ಲೆ ೀಠದಲ್ಲಿ ಯಾರು

ಕುಳಿತರೂ ಸಹ ಮಾನ್ಯ ಅಧ್ಯಕ್ಷರೇ ಎಂದು ಹೇಳಬೇಕು. ಅವರು ಹೇಳುವ ಸಮಯದಲ್ಲಿ ಮಾನ್ಯ ಉಪಸಭಾಪತಿ ಉಪಸಭಾಪತಿ ಎಂದು ಹೇಳಿದರು. ನಾಳೆ ಪ್ಯಾನೆಲ್‌ನಲ್ಲಿರುವವರು ಅಧ್ಯಕ್ಷರ ಸ್ಥಾನದಲ್ಲಿ ಕುಳಿತುಕೊಂಡರೆ ಪ್ಯಾನಲ್ ಅಧ್ಯಕ್ಷರೆ, ಪ್ಯಾನಲ್ ಅಧ್ಯಕ್ಷರೇ ಎಂದು ಹೇಳುತ್ತಾರಾ ?

ಉಪಾಧ್ಯಕ್ಷರು :– ಮಾನ್ಯ ರಾಜೇಂದ್ರ ಅವರೇ, ಈಗ ನಮಗೆ ನೀವು ಅಗೌರವ ಮಾಡಿಕೊಳ್ಳುತ್ತೀದ್ದಿರಿ. ಹೇಗೋ ಅಧ್ಯಕ್ಷ ಎನ್ನುವ ಬದಲು ಉಪಾಧ್ಯಕ್ಷ ಎಂದಾಗ ನಾವು ಸಂತೋಷ ಪಡಬೇಕಲ್ಲ ಇಲ್ಲೆ. ಬರೇ ಅಧ್ಯಕ್ಷ ಎಂದರೆ ಅವರಿಗೆ ಹೋಯಿತು. ನನಗೆ ಮತ್ತೆ ಏನು ಬಂತು ? ಉಪಾಧ್ಯಕ್ಷರು ಎಂದು ಹೇಳಲಿ, ತಪ್ಪೇನು?

ಶ್ರೀ ಜೆ.ಸಿ. ಮಾಧುಸ್ವಾಮಿ :– ತಮಗೆ ಅಡ್ರೆಸ್ ಮಾಡಬೇಕಾದರೆ ಅಧ್ಯಕ್ಷ ಎಂತಲೇ ಅಡ್ರೆಸ್ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಉಪಾಧ್ಯಕ್ಷ ಎಂತಲೇ ಕರೆಯಬಹುದು.

ಉಪಾಧ್ಯಕ್ಷರು :– ಮಾನ್ಯ, ಕಾರಜೋಳ ಅವರೇ, ಮಾತನಾಡಿ, ಬೇಗ ಮುಗಿಸಿ.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಉಪಾಧ್ಯಕ್ಷರೆ, 2000 ಮತ್ತು 2001ರಲ್ಲಿ 2003–04ರಲ್ಲಿ ಪ್ರತಿ ವರ್ಷ ಕೇಂದ್ರ ಸರ್ಕಾರ ಏನು ಪ್ರಧಾನ ಮಂತ್ರಿ ಸಡಕ್ ಯೋಜನೆಗೆ ಹಣ ಬಿಡುಗಡೆ ಮಾಡಿತ್ತು ? ಆಯಾಯ ವರ್ಷದಲ್ಲಿ ಉಪಯೋಗ ಮಾಡಿಕೊಂಡು ಯುಟಿಲೈಸೇಷನ್ ಸರ್ಟಿ , ಕೇಟ್ ಕಳಿಸಿದ್ದರೆ ನಾವು 2004–05ನೇ ಸಾಲಿನಲ್ಲಿ ನಾವು ಇನ್ನೂ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಹೆಚ್ಚಿನ ಹಣವನ್ನು ಕೇಂದ್ರ ಸರ್ಕಾರದಿಂದ ಪಡೆಯಬಹುದಾಗಿತ್ತು. ಆದರೆ ಸರ್ಕಾರ ವಿಫಲ ಆದುದರಿಂದ, ಕರ್ನಾಟಕ ಸರ್ಕಾರ ವಿಫಲ ಆದುದ್ದರಿಂದ ನಮ್ಮ ರಾಜ್ಯಕ್ಕೆ ಬರಬೇಕಾದಂತಹ ಸುಮಾರು ಇನ್ನೂ 1200 ಕೋಟಿ ಕೆಲಸ ತ ್ಪ ಹೋಯಿತು ಎನ್ನುವುದು ನನ್ನದು ಒಂದನೆಯ ಆಪಾದನೆ ಸರ್ಕಾರದ ಮೇಲೆ. ಸರ್ಕಾರ ಈಗಲಾದರೂ ಕೊಟ್ಟಂತಹ ಹಣವನ್ನು ಪೂರ್ಣ ಯುಟಿಲೈ ಇದೊಂದು . ಆಮೇಲೆ ಹಣ ರೊಟ್ಟದ್ದು ಲ್ಯಾಪ್ಸ್ ಆಗುವುದಿಲ್ಲ ಎನ್ನ ತಕ್ಕ ಕಾರಣಕ್ಕಾಗಿ ಕೆಲಸಗಳನ್ನು ವಿಳಂಬ ಮಾಡಿದರೆ, ಕೆಲಸದ ಎಸ್ಟಿಮೇಟೆಡ್ ಕಾಸ್ಟ್ ಎಸ್ಕಲೇಷನ್ ಆಗಿ ಕೆಲಸದ ಮೊತ್ತ

ಪ್ರತಿ ವರ್ಷ ಹೆಚ್ಚಾಗುತ್ತದೆ. ಅದರಿಂದ ಸರ್ಕಾರರಕ್ಕೆ ನಷ್ಟ ಆಗುತ್ತದೆ. ಆ ಎಸ್ಕಲೇಷನ್ ಆಗಿದ್ದನ್ನು ಕೇಂದ್ರ ಸರ್ಕಾರದವರು ಕೊಡುವುದಿಲ್ಲ. ರಾಜ್ಯ ಸರ್ಕಾರವೇ ಭರಿಸಬೇಕು. ಇನ್ನೂ ಅನೇಕ ಕೆಲಸಗಳೆಲ್ಲ ಏನಾಗಿದೆ ಎಂದರೆ ಕೇವಲ ಮೆಟಲಿಂಗ್ ಮತ್ತು ಅನ್‌ಫಾಲ್ಟಿಂಗ್ ಮಾಡಿ ಬಿಟ್ಟು ಬಿಟ್ಟಿದ್ದಾರೆ. ಸೇತುವೆಗಳನ್ನು ಕಟ್ಟಿಲ್ಲ. ಸಿಡಿ ವರ್ಕ್‌ಗಳನ್ನು ಕಟ್ಟಿಲ್ಲ. ಕೇಂದ್ರ ಸರ್ಕಾರದ ಉದ್ದೇಶ ಏನು ಇತ್ತು ? ಮಾನ್ಯ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಉದ್ದೇಶ ಏನು ಇತ್ತು ಅಂದರೆ ಪ್ರತಿ ಒಂದು ಹಳ್ಳಿಗೂ ಸರ್ವಋತು ರೋಡ್ ಆಗಬೇಕು. ಸುಸಜ್ಜಿತವಾದಂತಹ ರಸ್ತೆಗಳು ಆಗಬೇಕು. ರೈತರು ಬೆಳೆದಂತಹ ಮಾಲನ್ನು ಮಾರುಕಟ್ಟೆಗೆ ಸಾಗಣಿಕೆಗೆ ಅನುಕೂಲ ಆಗಬೇಕು. ರೈತರು ಹೊಲಗಳಿಂದ ಮನೆಗೆ ತರಲಿಕ್ಕೆ ಅನುಕೂಲ ಆಗುವಂತಹ ರಸ್ತೆಗಳು ಆಗಬೇಕು ಎನ್ನತಕ್ಕದ್ದೇ ಮೂಲ ಉದ್ದೇಶ. ಆ ಉದ್ದೇಶವನ್ನು ಇವತ್ತು ಕರ್ನಾಟಕ ಸರ್ಕಾರ ಸರಿಯಾಗಿ ಅರ್ಥ ಮಾಡಿಕೊಳ್ಳದೇ ಕೆಲಸ ಮಾಡಿದ್ದಕ್ಕಾಗಿ ಇವತ್ತು ನಮ್ಮ ರಾಜ್ಯಕ್ಕೆ ನಷ್ಟ ಆಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವು ಉತ್ತರ ಕೊಡಬೇಕಾದರೆ 2005-06ನೇ ಸಾಲಿನ ವಿಚಾರ. ನಾಲ್ಕು ತಿಂಗಳು ಕಳೆದು ಹೋಯಿತಲ್ಲ ಸ್ವಾಮಿ. 2005-06ರ ಪ್ರಪೋಸಲ್ಸ್ ಕೊಡಬೇಕು. ಬೇರೆ ಕಡೆಗೆ, ರಾಜಸ್ಥಾನದಲ್ಲಿ ಈಗಾಗಲೇ 2005-06ನೇ ಸಾಲಿಗೆ 261 ಕೋಟಿ 97 ಲಕ್ಷ ರೂಪಾಯಿಗಳನ್ನು ಭಾರತ ಸರ್ಕಾರದಿಂದ ಅನುಮೋದನೆ ತೆಗೆದುಕೊಂಡಿದ್ದಾರೆ. ಆ ರೀತಿ ಪ್ರತಿ ಒಂದು ರಾಜ್ಯಗಳು 2005-06ನೇ ಸಾಲಿಗೆ ಪ್ರಪೋಸಲ್ಸ್‌ಗಳನ್ನು ಕಳುಹಿಸಿ ಅನುಮೋದನೆಯನ್ನು ಪಡೆದು ಕೆಲಸವನ್ನು ಪ್ರಾರಂಭ ಮಾಡುತ್ತಿರಬೇಕಾದರೆ ಕಳೆದ ನಾಲ್ಕು ತಿಂಗಳಲ್ಲಿ ನೀವು ಪ್ರಪೋಸಲ್ ಕಳುಹಿಸುವುದಕ್ಕೂ ಹೋಗಲಿಲ್ಲ. ಆ ಕಡೆ ತಿರುಗಿ ನೋಡಲಿಲ್ಲ. 2004-05ರಲ್ಲಿ ನೀವು ಒಟ್ಟು ಹಣದ ಉಪಯೋಗ ಮಾಡಿಕೊಂಡಿಲ್ಲ. 211 ಕೋಟಿ 11 ಲಕ್ಷ ರೂಪಾಯಿಗಳಲ್ಲಿ ಒಂದು ರೂಪಾಯಿ ಸಹ ನಿನ್ನೆವರೆಗೆ ಖರ್ಚು ಮಾಡಿಲ್ಲ. ಈ ಬಗ್ಗೆ ನಿಮ್ಮ ಸ್ಪಷ್ಟವಾದಂತಹ ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ. ಕಷ್ಟ ಏನು ಎಂದು ಹೇಳಿ. ನೀವು ಅದೇನೋ ಫಸ್ಟ್ ಸ್ಟೇಜ್ ಸೆಕೆಂಡ್ ಸ್ಟೇಜ್ ಎಂದು ಹೇಳುತ್ತಿದ್ದೀರಿ. ಯಾವ ಸ್ಟೇಜೂ ಬೇಡ, ನೇರ ವರ್ಷಗಳನ್ನು ಹೇಳಿದ್ದೇನೆ. ಹೌದೋ ಅಲ್ಲವೋ ?

ಡಾ : ಹೆಚ್. ಮಹದೇವಪ್ಪ :- ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ

ಸದಸ್ಯರು ತಮ್ಮನ್ನು ಸಂಬೋಧನೆ ಮಾಡಿ ಮಾತನಾಡುವಾಗ ತಮ್ಮನ್ನು ಅಧ್ಯಕ್ಷರು ಎಂದು ಹೇಳಬೇಕು ಎಂದು ಹೇಳಿದ್ದಾರೆ. ತಾವು ಉಪಾಧ್ಯರು ಆದ್ದರಿಂದ ಹಾಗೆಯೇ ಮಾತನಾಡುತ್ತಿದ್ದೆ. ಅದನ್ನು ಸರಿ ಮಾಡಿಕೊಳ್ಳೋಣ.

ಒಬ್ಬ ಮಾನ್ಯ ಸದಸ್ಯರು :– ಉಪಾಧ್ಯಕ್ಷರೆ, ಸರಿಯಾದುದು.

ಡಾ: ಹೆಚ್. ಸಿ. ಮಹದೇವಪ್ಪ :– ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರು ರಸ್ತೆಗಳು ಹಳ್ಳಿಗಳಲ್ಲಿ ಹಾಳಾಗಿವೆ. ಶಾಸಕರು ತಿರುಗಿ ಓಡಾಡುವುದಕ್ಕೆ ಆಗುವುದಿಲ್ಲ. ಜನರಿಗೆ ತೊಂದರೆ ಆಗಿದೆ ಎಂದು ನೈಜವಾದಂತಹ ಕಾಳಜಿಯನ್ನು ಇಟ್ಟು ಪಕ್ಷಬೇಧ ಮರೆತು ಗ್ರಾಮೀಣ ರಸ್ತೆಗಳಿಗೆ ಕೇಂದ್ರ ಸರ್ಕಾರ ಕೊಡತಕ್ಕಂಥ 100ಕ್ಕೆ 100 ಅನುದಾನ ಹಣವನ್ನು ನೀವು ಬಳಸಬೇಕು. ಬೇಗ ಬೇಗ ಮಾಡಿ, ರಸ್ತೆಗಳನ್ನು ದುರಸ್ತಿ ಮಾಡಿ ಎನ್ನುತಕ್ಕ ಕಾಳಜಿಯನ್ನು ವ್ಯಕ್ತ ಮಾಡಿದ್ದಾರೆ. ಇದಲ್ಲಿ ನಮಗೆ ಸರ್ಕಾರಕ್ಕೆ ಆಸಕ್ತಿ ಏನು ಇಲ್ಲ ಎಂದಲ್ಲ. ಕಷ್ಟ ಎಂತಲೂ ಇಲ್ಲ. ಎರಡು ಬಾರಿ ಗೈಡ್‌ಲೈನ್ಸ್‌ಗಳನ್ನು ಕೇಂದ್ರ ಸರ್ಕಾರದವರು ಛೇಂಜ್ ಮಾಡಿದರು. ಎರಡು ಬಾರಿ ಗೈಡ್‌ಲೈನ್ಸ್‌ಗಳನ್ನು ಕೇಂದ್ರ ಸರ್ಕಾರದವರು ಛೇಂಜ್ ಮಾಡಿದ ಮೇಲೆ ಕಾಂಫೋರೆನ್ಸ್ ಅಪ್‌ಗ್ರೇಡೇಷನ್, ್ರಯಾರಿಟಿ ಲಿಸ್ಟ್ ಮತ್ತು ಪೇಮೆಂಟ್ ಕಂಡೀನ್ ಇಂಡೆಕ್ಸ್ ಇದರ ಆಧಾರದ ಮೇಲೆ ನಾವು ಗೈಡ್‌ಲೈನ್ಸ್‌ಗಳನ್ನು ಕಳಿಸಿದೆವು. ಎರಡು ಬಾರಿ ಛೇಂಜ್ ಮಾಡಿದರು. ಪದೇ ಪದೇ ಗೈಡ್‌ಲೈನ್ಸ್ ಛೇಂಜ್ ಮಾಡಿದ್ದು ಒಂದು ಕಾರಣ. ಮತ್ತು ಈ ತಿಂಗಳ ಕೊನೆಯಲ್ಲಿ ಮೂರನೆಯ ಹಂತದ್ದು 59 ಕೋಟಿ ಬರಬೇಕೋ ಅದು ಬಿಡುಗಡೆ ಆಗುತ್ತದೆ. ಮತ್ತು ಯುಟಿಲೈಸೇಷನ್ ಸರ್ಟಿ, ಕೇಟ್ ಕೆಲವು ಕಡೆ ಕೊಟ್ಟಿರಲಿಲ್ಲ. ಅದನ್ನು ಬಂದು ನಾನು ನೋಡಿದೆ. ಕೇಂದ್ರ ಸರ್ಕಾರದ ಜೊತೆ ಮಾತನಾಡಿದೆ. ನಾನು ಈ ಪತ್ರವನ್ನು ನೋಡೇ ಇರಲಿಲ್ಲ. ಸರ್ಕಾರದ ವತಿಯಿಂದ ನಾನು ಮತ್ತು ನಮ್ಮ ಅಧಿಕಾರಿಗಳು ಕುಳಿತುಕೊಂಡು ಅಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ನಮ್ಮ ರಸ್ತೆಗಳೆಲ್ಲಾ ಹಾಳಾಗಿದ್ದಾವೆ.

ಶ್ರೀ. ಬಿ. ಎಸ್. ಯಡಿಯೂರಪ್ಪ :– ಇದೇನ್ ಸಾರ್ ಉತ್ತರ ಕೊಡುತ್ತಿರುವುದು.

ಡಾ : ಹೆಚ್. ಮಹದೇವಪ್ಪ :– ನಾನು ಅದಕ್ಕೆ ಬರುತ್ತಿದ್ದೇನೆ ಸಾರ್.

ಅದಕ್ಕೇ ಸಾರ್, ಇವತ್ತು 2005–06ನೇ ಸಾಲಿಗೆ ಪ್ರಪೋಸಲ್ಸ್ ಕಳಿಸಿ ಬಿಟ್ಟಿದ್ದೇವೆ. ಪುನಃ ನಾವು ಭೇಟಿ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಯಾವುದಕ್ಕೆ ಪ್ರಪೋಸಲ್ಸ್ ಕಳಿಸಿದ್ದೀರಿ?

ಡಾ : ಹೆಚ್. ಸಿ. ಮಹದೇವಪ್ಪ :– ನೀವು ಹೇಳಿದ್ದೀರಲ್ಲ, ಈ ಸಾಲಿಗೆ..

ಶ್ರೀ ಬಿ.ಎಸ್. ಯಡಿಯೂರಪ್ಪ :– ಯಾವಾಗ ಕಳಿಸಿದ್ದೀರಿ ಹೇಳಿ.

ಡಾ : ಹೆಚ್.ಸಿ. ಮಹದೇವಪ್ಪ :– ನಾವೆಲ್ಲಾ ರೆಡಿ ಮಾಡಿ.... ಸಾರ್ ಕೇಳಿ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ದಯವಿಟ್ಟು ಈ ತರಹದ ಮಾತನಾಡಬಾರದು.

ಡಾ : ಹೆಚ್. ಸಿ. ಮಹದೇವಪ್ಪ :– ನಾವು ಪ್ರಪೋಸಲ್ಸ್ ಕಳಿಸಿದ್ದಾವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : – ಯಾವಾಗ ಕಳಿಸಿದ್ದೀರಿ ?

ಡಾ. ಹೆಚ್.ಸಿ. ಮಹದೇವಪ್ಪ :– ಪ್ರಪೋಸಲ್ಸ್ ಅನ್ನು 100ಕ್ಕೆ 95. ಪ್ಲಸ್ 10ಕೋಟಿಗೆ ರೆಡಿಮಾಡಿ ಕಳಿಸಿದ್ದೆವು.

ಶ್ರೀ ಬಿ.ಎಸ್.ಯಡಿಯೂರಪ್ಪ :– ಯಾವಾಗ ಪ್ರಪೋಸಲ್ಸ್ ಕಳಿಸಿದ್ದೀರಿ ಹೇಳಿ? ಇವೆಲ್ಲಾ ಕಥೆ ಬೇಡ.

ಡಾ: ಹೆಚ್.ಸಿ. ಮಹದೇವಪ್ಪ :– ಪ್ರಪೋಸಲ್ಸ್ ಅನ್ನು 100ಕ್ಕೆ 95 ಮತ್ತು 10 ಕೋಟಿಗೆ ರೆಡಿ ಮಾಡಿ ಕಳಿಸಿದ್ದೆವು ನಾನು ಮತ್ತೆ ಭೇಟಿ ಮಾಡಿದ ಮೇಲೆ 500 ಕೋಟಿ ರೂಪಾಯಿ ಕೊಡುತ್ತೇವೆ ಎಂದು ಹೇಳಿ ಕೇಂದ್ರ ಸಚಿವರು ಹೇಳಿದ ಮೇಲೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನನಗೆ ಇಷ್ಟು ಹೇಳಿ. ನಿಮ್ಮ ಬಗ್ಗೆ ನನಗೆ ಗೌರವ ಇದೆ ಎಂದು ವಾಟಾಳ್ ಭಾಷೆಯಲ್ಲಿ ಹೇಳಬೇಕಾಗುತ್ತದೆ. 2004–05ನೇ ಸಾಲಿನ ಪ್ರಪೋಸಲ್ಸ್ ಯಾವಾಗ 211 ಕೋಟಿಗೆ ಕಳಿಸಿದ್ದೀರಿ ಹೇಳಿ. ಸುಮ್ಮನೇ ಕಥೆ ಹೇಳುವುದು ಬೇಡ. ಈ ನಿಮಿಷದ ವರೆಗೆ ಪ್ರಪೋಸಲ್ಸ್ ಕಳಿಸಿಲ್ಲ. ನಾವೆಲ್ಲ ಶಾಸಕರು ಇದ್ದೇವೆ. ನಮಗೇ ಗೊತ್ತಿಲ್ಲದೇ ನೀವು ಹೇಗೆ ಪ್ರಪೋಸಲ್ಸ್ ಕಳಿಸುತ್ತೀರಿ ?

ಡಾ : ಹೆಚ್.ಸಿ. ಮಹದೇವಪ್ಪ :– ಸಾರ್, ಈ ತಿಂಗಳಲ್ಲಿ 04–05 ರದ್ದು 59 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಬಿಡುಗಡೆ ಬೇಡ ....

ಡಾ : ಹಚ್.ಸಿ. ಮಹದೇವಪ್ಪ : 2005–06ನೇ ಇಸವಿಗೆ ....

ಶ್ರೀ ಬಿ. ಎಸ್. ಯಡಿಯೂರಪ್ಪ :– ಈ ಮನೆಯನ್ನು ಅಡ್ಡ ದಾರಿಗೆ ಎಳೆಯಬೇಡಿ.

ಡಾ : ಹೆಚ್.ಸಿ. ಮಹದೇವಪ್ಪ :– ಇಲ್ಲ ನಾನು ಅಡ್ಡ ದಾರಿಗೆ ಎಳೆಯುತ್ತಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :– ನೀವೇನಾದರೂ ಈ ರೀತಿ ಹೇಳಿಕೆ ಕೊಟ್ಟರೆ ್ರವಿಲೇಜ್ ಆಗುತ್ತದೆ. ನಿಮ್ಮ ಸಮಸ್ಯೆ ಏನು ಎಂದು ಹೇಳಿದರೆ ನಾವು ಅದನ್ನು ಒ ್ಪಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

(ಗೊಂದಲ)

ಶ್ರೀ. ಬಿ.ಎಸ್. ಯಡಿಯೂರಪ್ಪ :– ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. 2004–05ನೇ 211 ಕೋಟಿ 7 ಲಕ್ಷಕ್ಕೆ ಈ ನಿಮಿಷದವರೆಗೆ ನೀವು ಪ್ರಪೋಸಲ್ಸ್ ಕಳಿಸಿಲ್ಲ. ಕಳಿಸಿದ್ದರೆ ನಮ್ಮ ಶಾಸಕರಿಗೆ ಗೊತ್ತಾಗಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಅವರು ಯಾರು ಕೆಲಸ ಮಾಡುವವರು ಎಂದು ನಿಶ್ಚಯ ಆದ ಮೇಲೆ ಪ್ರಪೋಸಲ್ಸ್ ಕಳಿಸುತ್ತಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ಈ ಸದನದಲ್ಲಿ ಕೇಳಿದ ಪ್ರಶ್ನೆಗೆ ಬಿಟ್ಟು ಉಳಿದಿದ್ದೆಲ್ಲಾ ನೀವು ಮಾತನಾಡಿದರೆ...

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– 2004–05ನೇ ಇಸವಿಗೆ ...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಮಹೇವಪ್ಪನವರೆ, ಒಂದು ನಿಮಿಷ.

ಡಾ : ಹೆಚ್. ಸಿ. ಮಹದೇವಪ್ಪ:– ಹೇಳಿ ಸಾರ್.

ಶ್ರೀ ಬಿ.ಎಸ್.ಯಡಿಯೂರಪ್ಪ:– ನಿಮಗೆ ಅನುಭವ ಇದೆ. ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದುವರೆಗೆ ಇದು ಆಗದೇ ಇದ್ದರೆ, ಈ ಕಾರಣಕ್ಕೆ ಆಗಲಿಲ್ಲ ಎಂದು ಈ ರಾಜ್ಯದ ಜನರ ಕ್ಷಮಾಪಣೆ ಕೇಳಿ. 2004–05ರ ಪ್ರಪೊಸಲ್ ಅನ್ನು ಯಾವಾಗ ಕಳುಹಿಸುತ್ತೀರಿ ಎಂಬುದನ್ನು ಹೇಳಿ. 2003–04ರಲ್ಲಿ ನೀವು 84ಕೋಟಿ ರೂಪಾಯಿಗಳನ್ನು ಏಕೆ ಉಪಯೋಗಿಸಿಕೊಳ್ಳಲಿಲ್ಲ ಎಂಬುದನ್ನು ಹೇಳಿ. 2005–06ರಲ್ಲಿ ರಾಜ್ಯಗಳು ಆಗಲೇ ಪ್ರಪೊಸಲ್ ಕಳುಹಿಸಿ. ಸ್ಯಾಂಕ್ಷನ್ ಮಾಡಿಸಿಕೊಂಡು ಕೆಲಸಗಳನ್ನು ಮಾಡುತ್ತಿರಬೇಕಾದರೆ, ನಿಮ್ಮ ಅಧಿಕಾರಿಗಳು ಏಕೆ ಕುಂಭಕರ್ಣನಂತೆ ಕೈಕಟ್ಟಿಕೊಂಡು ಕುಳಿತಿದ್ದಾರೆ ? ಈ ಮೂರು ಪ್ರಶ್ನೆಗಳಿಗೆ ನೀವು ಕ್ರಮವಾಗಿ ಉತ್ತರ ಕೊಟ್ಟರೆ, ನಾವು ಗೌರವಯುತವಾಗಿ ಕುಳಿಕೊಂಡು ಎದ್ದು ಹೋಗುತ್ತೇವೆ. ಸಮಯ ಏಕೆ ಹಾಳು ಮಾಡುತ್ತೀರಿ ?

ಡಾ : ಹೆಚ್.ಸಿ. ಮಹದೇವಪ್ಪ:– ಮಾನ್ಯ ಉಪಾಧ್ಯಕ್ಷರೆ, 2003–04ರಲ್ಲಿ ಬಿಡುಗಡೆ ಮಾಡಿದ ಮೊದಲನೇ ಕಂತಿನ 59ಕೋಟಿ ರೂಪಾಯಿಗಳಲ್ಲಿ 2005ರ ಅಂತ್ಯದವರೆಗೆ 38.9 ಕೋಟಿ ರೂಪಾಯಿಗಳನ್ನು ನಾವು ಉಪಯೋಗಿಸಿಕೊಂಡಿದ್ದೇವೆ ಮತ್ತು ಈ ಅಂತ್ಯದಲ್ಲಿ ಮುಂದುವರಿದ ಕಾಮಗಾರಿಗಳಿಗೆ ಎರಡನೇ ಕಂತಿನ ಹಣವಾಗಿ 59.4 ಕೋಟಿ ರೂಪಾಯಿ ಗಳನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಿದ್ದೇವೆ. ಅದನ್ನು ಈ ತಿಂಗಳಿನಲ್ಲಿ ಕೊಡುತ್ತಾರೆ. ಇದು ಇರುವ ಪರಿಸ್ಥಿತಿಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಮಹದೇವಪ್ಪನವರೆ, ದಯಮಾಡಿ ಅವರು ಬರೆದು ಕೊಟ್ಟಿದ್ದನ್ನು ಓದಬೇಡಿ. ಇವತ್ತು ವಿರೋಧ ಪಕ್ಷದ ನಾಯಕ ಮತ್ತು ಉಪನಾಯಕ ಇಬ್ಬರೂ ಸೇರಿದಂತೆ ಎಲ್ಲರೂ ಗಂಭೀರವಾಗಿ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ ಎಂದು ಗೊತ್ತಾದ ಮೇಲೆ ನೀವು ಅಧಿಕಾರಿಗಳಿಂದ ಅಂಕಿ ಅಂಶಗಳನ್ನು ತರದೆ, ನಾನು ಎಲ್ಲಾ ದಾಖಲೆಗಳನ್ನು ಇಟ್ಟುಕೊಂಡು, ನಾನು ನಿಮ್ಮ ಅಧಿಕಾರಿಗಳಿಂದ ದಾಖಲೆಗಳನ್ನು ತರಿಸಿಕೊಂಡು, ನಾನು ಕೇಂದ್ರ ಸರ್ಕಾರದ ವೆಬ್‌ಸೈಟಿನಿಂದ ಎಲ್ಲಾ ಕಾ ೕಸ್‌ಗಳನ್ನು ತೆಗೆದುಕೊಂಡು ಬಂದು ನಾನು ಇಲ್ಲಿ ಕುಳಿತುಕೊಂಡರೆ, ನೀವು ಈ ರೀತಿಯಾಗಿ, ಈ ಮನೆಯನ್ನು ಅಡ್ಡದಾರಿಗೆ ಹಿಡಿಸುವಂತಹ ಬಂದು ನಾನು ಇಲ್ಲಿ ಕುಳಿತುಕೊಂಡರೆ, ನೀವು ಈ ರೀತಿಯಾಗಿ, ಈ ಮನೆಯನ್ನು ಅಡ್ಡದಾರಿಗೆ ಹಿಡಿಸುವಂತಹ ಹೇಳಿಕೆಯನ್ನು ಕೊಟ್ಟರೆ, ನಿಮಗೇನು ಹೇಳಬೇಕು ಸ್ವಾಮಿ?

ನನಗೆ ಇಷ್ಟೇ ಸ್ವಾಮಿ ನಿಮ್ಮಿಂದ ಬೇಕಾಗಿರುವುದು,ಒಟ್ಟು 2001-02ನೇ ಸಾಲಿನಿಂದ 2004-05 ಸಾಲಿನವರೆಗೆ 323 ಕೋಟಿ 39 ಲಕ್ಷ ರೂಪಾಯಿಗಳ ಹಣವನ್ನು ನೀವುಉಪಯೋಗ ಮಾಡಿಕೊಳ್ಳಲಿಲ್ಲ. 2004-05ರಲ್ಲಿ 211 ಕೋಟಿ 07ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳಿ. ಇದಕ್ಕಾಗಿ ಪ್ರಪೋಸಲ್ ಕಳುಹಿಸಿ ಎಂದು ರಿಮೈಂಡರ್‌ಗಳನ್ನು ಹಾಕಿದರೂ, ಇದುವರೆಗೆ ಒಂದು ಪೈಸೆ ತೆಗೆದುಕೊಳ್ಳಲಿಲ್ಲ. ನೀವು ಪ್ರಪೋಸಲ್ಸೇ ಕಳುಹಿಸಲಿಲ್ಲ. 2003-04ನೇ ಸಾಲಿಗೆ 84 ಕೋಟಿ 10ಲಕ್ಷ ರೂಪಾಯಿಗಳನ್ನು ನೀವು ಉಪಯೋಗ ಮಾಡಿಕೊಂಡಿಲ್ಲ. ಒಟ್ಟು 323 ಕೋಟಿ 39 ಲಕ್ಷ ರೂಪಾಯಿಗಳನ್ನು ನೀವು ಉಪಯೋಗಿಸಿಕೊಂಡಿಲ್ಲ ಎಂದು ದಾಖಲೆಗಳನ್ನಿಟ್ಟುಕೊಂಡು ನಾನು ಜವಾಬ್ದಾರಿಯಿಂದ ಮಾತನಾಡಿದ್ದೇನೆ. ಇದು ಆಗಿಲ್ಲ, ಯಡಿಯೂರಪ್ಪನವರೆ, ನಮ್ಮ ಅಧಿಕಾರಿಗಳು ಗಮನ ಕೊಟ್ಟಿಲ್ಲ, ನಾನು ನಾಳೆಯೇ ಕುಳಿತು, ಚರ್ಚೆ ಮಾಡಿ, ಅದಕ್ಕೊಂದು ಪರಿಹಾರ ಹುಡುಕುತ್ತೇನೆ, ನನ್ನ ಕಡೆಯಿಂದ ತಪ್ಪಾಗಿದೆ, ಇನ್ನು ಮುಂದೆ ಜವಾಬ್ದಾರಿಯಿಂದ ಕೆಲಸ ಮಾಡುತ್ತೇನೆ ಎಂದು ನೀವು ಹೇಳುವುದನ್ನು ಬಿಟ್ಟು, ಸುತ್ತಿ ಬಳಸಿ ಮಾತನಾಡಿದರೆ ಹೇಗೆ ? ಈ ಸದನದ ಕಾರ್ಯಕಲಾಪಗಳಲ್ಲಿ ನಾವು ಮತ್ತೊಮ್ಮೆ ಧರಣಿ ಮಾಡಬೇಕು. ಮತ್ತೊಬ್ಬ ನಾವು ಸತ್ಯಾಗ್ರಹ ಮಾಡಬೇಕಾಗುತ್ತದೆ. ಇದೇ ನಿಮ್ಮ ಉದ್ದೇಶವಾಗಿದ್ದಲ್ಲಿ, ನಾವೇನೂ ಮಾಡುವುದಕ್ಕಾಗುವುದಿಲ್ಲ ಸ್ವಾಮಿ.

ಡಾ: ಹೆಚ್.ಸಿ. ಮಹದೇವಪ್ಪ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರಿಗೆ ಹಾಗೂ ಈ ಮನೆಗೆ ನಾನು ಗೌರವಯುತವಾಗಿ ಮತ್ತು ವಿನಯಪೂರ್ವಕವಾಗಿ ಹೇಳುವುದೇ ನೆಂದರೆ, ಇದರಲ್ಲಿ ಯಾವುದನ್ನೂ ಮುಚ್ಚಿಡಬೇಕು ಅಥವಾ ಅದು ಇದು ಹೇಳಬೇಕು ಎನ್ನುವ ಉದ್ದೇಶ ನನಗಿಲ್ಲ. ಇಲ್ಲಿ ಎಲ್ಲಾ ಅಂಕಿ-ಅಂಶಗಳಿವೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರಿಗೆ, ಇದರಲ್ಲಿ ಏನಾದರೂ ಅನುಮಾನಗಳು ಇದ್ದರೆ, ಅಧ್ಯಕ್ಷರ ಕೊಠಡಿಯಲ್ಲಿ ಅಥವಾ ನೀವು ಎಲ್ಲಿ ಹೇಳುತ್ತೀರೋ. ...

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಲ್ಲಿ ಬೇಡ ಸಾರ್. ಎಲ್ಲಾ ಇಲ್ಲೇ ಹೇಳಬೇಕು.

ಡಾ: ಹೆಚ್.ಸಿ. ಮಹದೇವಪ್ಪ:-.... ಎಲ್ಲಾ ವಿವರಗಳನ್ನು ಕುಳಿತುಕೊಂಡು ಚರ್ಚೆ ಮಾಡಿ, ಎಲ್ಲಿ ನ್ಯೂನ್ಯತೆ ಇದೆಯೋ, ಅದನ್ನು ಸರಿಪಡಿಸಲಿಕ್ಕೆ ಮತ್ತು ನಮ್ಮ ರಾಜ್ಯದ ...

ಶ್ರೀ ಬಿ.ಎಸ್.ಯಡಿಯೂರಪ್ಪ:- ನನಗೇನೂ ಬೇಡ ನಿಮ್ಮಿಂದ. 2004-05ನೇ ಸಾಲಿಗೆ 211 ಕೋಟಿ ಚಿಲ್ಲರೆ ರೂಪಾಯಿಗಳ ಬಗ್ಗೆ ಪ್ರಪೋಸಲ್ ಕಳುಹಿಸಿ ಎಂದು ನಿಮಗೆ ರಿಮೈಂಡರ್ಸ್ ಕಳುಹಿಸಿದ್ದಾರಲ್ಲಾ, ಇಷ್ಟೊತ್ತಿಗಾಗಲೆ ಆ ವರ್ಕ್ ಮುಗಿದಿರಬೇಕಾಗಿತ್ತು. ಆ ಬಗ್ಗೆ ಈಗಲಾದರೂ ಪ್ರಪೋಸಲ್ ಕಳುಹಿಸಿದ್ದೀರಾ? ಇಲ್ಲವೆಂದರೆ, ಯಾವಾಗ ಕಳುಹಿಸುತ್ತೀರಿ? ಎಂಬುದನ್ನು ಹೇಳಿ.

ಡಾ: ಹೆಚ್.ಸಿ. ಮಹದೇವಪ್ಪ:- ಇನ್ನೊಂದು ವಾರದಲ್ಲೇ ಪ್ರಪೋಸಲ್ ಕೊಡಲಿಕ್ಕೆ ತಯಾರು ಮಾಡಿದ್ದೇವೆ. ಏನಾಯಿತು? ಎಂದು ಇರುವ ವಿಚಾರವನ್ನು ನಾನು ನಿಮಗೆ ಹೇಳಿಬಿಡುತ್ತೇನೆ. ನಾನು ದೆಹಲಿಗೆ ಹೋಗಿ ಮಂತ್ರಿಗಳನ್ನು ಭೇಟಿ ಮಾಡಿ....

ಶ್ರೀ ಬಿ.ಎಸ್.ಯಡಿಯೂರಪ್ಪ:- ಏಕೆ ದೆಹಲಿಗೆ ಹೋಗುತ್ತೀರಿ?

ಡಾ. ಹೆಚ್.ಸಿ. ಮಹದೇವಪ್ಪ:- ದಯವಿಟ್ಟು ನಾನು ಹೇಳುವುದನ್ನು ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ದೆಹಲಿಗೆ ಏಕೆ ಹೋಗುತ್ತೀರಿ? ನಿಮ್ಮ ಪಾರ್ಟಿ ವರ್ಕ್‌ಗೋಸ್ಕರ ಅಥವಾ ಇನ್ನೊಂದಕ್ಕೋಸ್ಕರ, ದೆಹಲಿಗೆ ಹೋಗಿ, ಮಂತ್ರಿಗಳನ್ನು ಮಾತನಾಡಿಸಿಕೊಂಡು...

(ಗೊಂದಲ)

ಶ್ರೀ ಎಂ. .ವೆಂಕಟೇಶ್:- ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಹತ್ತಿರ ಏನು ಅಂಕಿ ಅಂಶಗಳಿವೆಯೋ ಅದನ್ನು ಮಾನ್ಯ ಸಚಿವರು ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರ ಏನು ದುಡ್ಡು ಕೊಟ್ಟಿದೆ? ಏನು ಬಿಡುಗಡೆಯಾಗಿದೆ? ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು...

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಪ್ರಪೋಸಲ್ ಏಕೆ ಕಳುಹಿಸಲಿಲ್ಲ?......

(ಗೊಂದಲ)

ಶ್ರೀ ಎಂ. . ವೆಂಕಟೇಶ್:– ... ಕೇಂದ್ರ ಸರ್ಕಾರದಿಂದ ಏನು ಹಣ ಬಂದಿದೆ? ಏನು ಉಪಯೋಗವಾಗಿದೆ? ಎಂಬುದನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ... ಯಾರಪ್ಪನ ದುಡ್ಡು ಅದು...

(ಗೊಂದಲ)

ಶ್ರೀ ಎಂ. .ವೆಂಕಟೇಶ್:– ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಬಳಿ ಏನೊಂದು ಮಾಹಿತಿ ಇದೆಯೋ, ಅದನ್ನು ಕೊಡುತ್ತಿದ್ದಾರೆ...

(ಗೊಂದಲ)

ಉಪಾಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಅಂಜನಮೂರ್ತಿ (ವಸತಿ ಸಚಿವರು):– ಮಾನ್ಯ ಉಪಾಧ್ಯಕ್ಷರೆ,...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ನೀವ್ಯಾಕೆ ಉತ್ತರ ನೀಡುತ್ತೀರಿ? ನಾವು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಂದ ಉತ್ತರ ಬಯಸಿದ್ದೇವೆ. ನಮಗೆ ಬೇರೆ ಯಾರಿಂದಲೂ ಉತ್ತರ ಬೇಕಾಗಿಲ್ಲ, ಏಕೆ ಪ್ರಪೋಸಲ್ ಕಳುಹಿಸಲಿಲ್ಲ? ಏಕೆ ಹಣ ಖರ್ಚು ಮಾಡಲಿಲ್ಲ?....

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:– ದೆಹಲಿಗೆ ಹೋಗಬೇಡಿ ಎಂದು ನಾನು ಹೇಳಿದ್ದೇನೆಯೇ? ಮಂತ್ರಿಗಳನ್ನು ಭೇಟಿ ಮಾಡಬೇಡಿ ಎಂದು ನಾನು ಹೇಳಿದ್ದೇನೆಯೇ?.....

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೆ, ಒಂದು ನಿಮಿಷ. ತಮ್ಮ ಪ್ರಶ್ನೆ ಅವರಿಗೆ ಅರ್ಥವಾಗಿದೆ. ಮತ್ತೆ ಪದೇ ಪದೇ ಕೇಳಿದ ಪ್ರಶ್ನೆಯನ್ನೇ ಕೇಳಿ ಕನ್‌ಫ್ಯೂಸ್ ಮಾಡಬೇಡಿ. ನೀವು ಹೇಳುವುದನ್ನು ಹೇಳಿದ್ದೀರಿ. ಒಂದೆರಡು

ನಿಮಿಷ ಅವರಿಗೆ ಉತ್ತರ ಹೇಳಲು ಅವಕಾಶ ಮಾಡಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಮಹದೇವಪ್ಪನವರೆ, ನಿಮ್ಮಲ್ಲಿ ನನ್ನದು ಇಷ್ಟೇ ವಿನಂತಿ. 2004-05ನೇ ಸಾಲಿಗೆ 211 ಕೋಟಿ ರೂಪಾಯಿ ಗಳಿಗೆ ಪ್ರಪೋಸಲ್ ಕಳುಹಿಸಿ ಎಂದು ಕೇಂದ್ರ ಸರ್ಕಾರ ಹತ್ತಾರು ರಿಮೈಂಡರ್ ಹಾಕಿದ ಮೇಲೆ, ಈ ನಿಮಿಷದರೆಗೆ, ವರ್ಕ್ ಈಗಾಗಲೆ ಮುಗಿದು ಹೋಗಬೇಕಾಗಿತ್ತು. ಇನ್ನೂ ಪ್ರಪೋಸಲ್ಲೇ ಕಳುಹಿಸಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ:- ನೀವು ಕೇಳಿದ್ದಕ್ಕೆ ನಾನೀಗ ಉತ್ತರ ಹೇಳಲು ಹೊರಟಿದ್ದೇನೆ. ಆದರೆ ತಾವು ಅದನ್ನು ಕೇಳುತ್ತಿಲ್ಲ. ನಾಲ್ಕರಲ್ಲಿ 95 ಕೋಟಿ ರೂಪಾಯಿಗಳು ಮತ್ತು ಐದರಲ್ಲಿ 210 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ರಾಜ್ಯ ಮಟ್ಟದ ಸಮಿತಿಯಲ್ಲಿ ಅಪ್ರೂವಲ್ ಮಾಡಿದ್ದೇವೆ. 210 ಕೋಟಿ ರೂಪಾಯಿಗಳ ಬಗ್ಗೆ ಇಷ್ಟಕ್ಕೆ ನಿಲ್ಲಿಸುತ್ತೇನೆ. ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರು ಸುತ್ತೂರಿನಲ್ಲಿ SGSY ಕಾರ್ಯಕ್ರಮ ವೊಂದಕ್ಕೆ ಬಂದಾಗ, ನಮಗೆ ಹೆಚ್ಚು ಹಣ ಕೊಡಿ, ನಮ್ಮ ರಸ್ತೆಗಳೆಲ್ಲಾ ಹಾಳಾಗಿವೆ ಎಂದು ಮನವಿ ಮಾಡಿದ್ದೆ. ನಾನು ಮನವಿ ಮಾಡಿದ ಮೇಲೆ, ಪುನಃ ನಾನು ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದಾಗ, 210 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು State level committeeನಲ್ಲಿ approve ಮಾಡಿಕೊಂಡು ಪ್ರಸ್ತಾವನೆ ಕಳುಹಿಸುವುದರೊಳಗೆ, ನಾವು ಹೋಗಿ ರಸ್ತೆಗೆ ಹೆಚ್ಚು ದುಡ್ಡು ತೆಗೆದುಕೊಂಡು ಬಿಡೋಣ ಎಂಬ ಆಸಕ್ತಿಯಿಂದ ಅಧಿಕಾರಿ ಗಳು ಒಂದೆರಡು ಗಂಟೆಗಳ ಕಾಲ ಮಾತನಾಡಿದೆವು. ಆಗ 200 ಕೋಟಿ ರೂಪಾಯಿಗಳೇನು, 500 ಕೋಟಿ ರೂಪಾಯಿಗಳನ್ನೇ ಬೇಕಾದರೆ ಕೊಡುತ್ತೇವೆ, ನೀವು ಬೇಕಾದರೆ ಹೇಳಿ, ಅನೌನ್ಸ್ ಮಾಡಿ, ಪ್ರಸ್ತಾವನೆ ಎಲ್ಲಾ ಕಳುಹಿಸಿ ಎಂದು ಹೇಳಿದರು. 210 ಕೋಟಿ ರೂಪಾಯಿಗಳಿಗೆ ರೆಡಿ ಆಗಿದ್ದ ಪ್ರಸ್ತಾವನೆಯನ್ನು ನಮಗೆ ಇನ್ನೂ 500 ಕೋಟಿ ರೂಪಾಯಿಗಳ ದುಡ್ಡನ್ನು ಕೊಡುತ್ತಾರಲ್ಲಾ, ಒಂದೊಂದು ಕ್ಷೇತ್ರಕ್ಕೆ ಎರೆಡೆರಡು ಕೋಟಿ ರೂಪಾಯಿಗಳನ್ನು ಕೊಟ್ಟು ಬಿಡಬಹುದು ಎಂಬ ಆಸೆ ನಮ್ಮ ಸರ್ಕಾರದ್ದಾಗಿತ್ತು, ಅದಕ್ಕಾಗಿ ಇದನ್ನೆಲ್ಲಾ state level technical agency ಮುಂದಿಟ್ಟು, ಪ್ರತಿಯೊಂದು ರಸ್ತೆಯನ್ನೂ ಸ್ಕುಟಿನಿ ಮಾಡಿ ಕಳುಹಿಸಬೇಕು, ಆದಷ್ಟು ಆಗುತ್ತದೆ. ಅವರು ಹೆಚ್ಚು ದುಡ್ಡು ಕೊಡುತ್ತೇವೆ ಎಂದು ಹೇಳಿದ ಮೇಲೆ, ಎಲ್ಲಾ ಮಾನ್ಯ ಶಾಸಕರುಗಳಿಗೆ ಹೆಚ್ಚೆಚ್ಚು ದುಡ್ಡು

ಕೊಡಬಹುದಲ್ಲಾ ಎಂದು ನಮಗೆ ಆಸೆ ಬಂದು ಬಿಟ್ಟಿತು. 95 ಕೋಟಿ ಮತ್ತು 210 ಕೋಟಿ ರೂಪಾಯಿಗಳ ಪ್ರಸ್ತಾವನೆಗಳೇನಿವೆ, ಅದನ್ನು State level committeeನಲ್ಲಿ ಅಪ್ರೂವ್ ಮಾಡಿ, ಪ್ರತಿಯೊಂದು ರಸ್ತೆಯ ಬಗ್ಗೆ ಅಗಸ್ಟ್‌ನೊಳಗೆ ಪ್ರಸ್ತಾವನೆ ಕೊಟ್ಟರೆ, ತಕ್ಷಣ ದುಡ್ಡು ಕೊಡುತ್ತಾರೆ. ಆಗಸ್ಟ್‌ನೊಳಗಾಗಿ ಇದನ್ನು ಕಳುಹಿಸಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಾರ್, ನಿಮಗೆ ಕೈ ಮುಗಿಯುತ್ತೇನೆ.

ಡಾ : ಹೆಚ್.ಸಿ. ಮಹದೇವಪ್ಪ:– ಇರುವ ಪರಿಸ್ಥಿತಿಯನ್ನು ನಾನು ಹೇಳುತ್ತಿದ್ದೇನೆ...

ಶ್ರೀ ಬಿ.ಎಸ್.ಯಡಿಯೂರಪ್ಪ:– ಒಂದು ನಿಮಿಷ ಯೀಲ್ಡ್ ಆಗಿ. 2004–05ರ 211 ಕೋಟಿ ರೂಪಾಯಿಗಳನ್ನು ಈಗಾಗಲೇ ಪೂರ್ಣವಾಗಿ 2005ರ ಮಾರ್ಚ್‌ನೊಳಗಾಗಿ ಖರ್ಚು ಮಾಡಬೇಕಾಗಿತ್ತು. ಅದರ ಬಗ್ಗೆ ಪ್ರಪೋಸಲ್ ಕಳುಹಿಸಿಲ್ಲ ಎಂದು 2–3 ರಿಮೈಂಡರ್‌ಗಳನ್ನು ಬರೆದು, ಕೊನೆಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಆ ಸಂಬಂಧಪಟ್ಟ ಸಚಿವರು ಪತ್ರ ಬರೆದಿದ್ದಾರೆ. 2005–06ನೇ ಸಾಲಿಗೆ ಎಲ್ಲಾ ರಾಜ್ಯಗಳೂ ಪ್ರಪೋಸಲ್ ಕಳುಹಿಸದ್ದರೂ, ನೀವು ಇದುವರೆಗೂ ಕಣ್ಣುಮುಚ್ಚಿಕೊಂಡು ಕುಳಿತಿದ್ದೀರಿ. 2004–05ನೇ ಸಾಲಿಗೆ 211 ಕೋಟಿ ರೂಪಾಯಿಗಳಿಗೆ ಏತಕ್ಕೆ ಪ್ರಪೋಸಲ್ ಕಳುಹಿಸಲಿಲ್ಲ ಸ್ವಾಮಿ? ಆಗಸ್ಟ್‌ವರೆಗೆ ಏಕೆ? ಇದುವರೆಗೂ ಏಕೆ ಕಳುಹಿಸಲಿಲ್ಲ ಎಂಬುದಕ್ಕೆ ಉತ್ತರ ಹೇಳಿ. ನಿಮ್ಮ ಕಷ್ಟವೇನು? ಸ್ವಾಮಿ, ದೇವರು ನಿಮ್ಮನ್ನು ಕಾಪಾಡಲಿ. ನೀವು ದಯಮಾಡಿ ಬೇರೆ ಇಲಾಖೆಯನ್ನು ತೆಗೆದುಕೊಳ್ಳಿ. ನೀವು ಈ ರಾಜ್ಯದಲ್ಲಿ ...

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ... ಖುದ್ದಾಗಿ ಹೋಗಿ ನಾವು ಭೇಟಿ ಮಾಡಿದ್ದೇವೆ. ಕಾಲ ಕಾಲಕ್ಕೆ ಬದಲಾಗತಕ್ಕ ಮಾರ್ಗಸೂಚಿಗಳಿವೆ. ನಮಗೆ ಇಷ್ಟ ಬಂದ ಹಾಗೆ ಮಾಡುವುದಕ್ಕಾಗುವುದಿಲ್ಲ...

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು:- ಮಾನ್ಯ ಮಹದೇವಪ್ಪನವರೆ, ತಮ್ಮ ಉತ್ತರ ಮುಗಿಸಿಬಿಡಿ.

ಡಾ: ಹೆಚ್.ಸಿ. ಮಹದೇವಪ್ಪ:- ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಸರ್ಕಾರದ ಪ್ರಾಮಾಣಿಕತೆಯನ್ನು ಈ ಸದನಕ್ಕೆ ತಿಳಿಸಿದ್ದೇನೆ. ಕಾಲಕಾಲಕ್ಕೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಬದಲಾವಣೆಯಾಗಿವೆ. 2004-05 ರಲ್ಲಿ ಎರಡು ಬಾರಿ ಮಾರ್ಗಸೂಚಿಗಳು ಬದಲಾವಣೆಯಾದವು. ಪ್ರತಿಯೊಂದು ರಸ್ತೆಯನ್ನೂ ಕೂಡ ಪರಿಶೀಲನೆ ಮಾಡಿ ಅನುಮೋದನೆ ಕೊಡಬೇಕು. State agency ಈಗಾಗಲೇ ಅಪ್ರೂವ್ ಮಾಡಿದೆ....

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ನಿಯಮಾವಳಿಗಳು ಬದಲಾಗಬೇಕು. 500 ಜನಸಂಖ್ಯೆಯನ್ನು ಆದ್ಯತೆ ಇಟ್ಟುಕೊಂಡು, Single connectivity road ಎಂದೇನು ಮಾಡಬೇಕಾಗಿತ್ತು, ಅದು ಎರಡು ಸಾವಿರ, ನಾಲ್ಕು ಸಾವಿರಕ್ಕೆ enhance ಆಗಿದೆ. ಕೇಂದ್ರ ಸರ್ಕಾರದವರು ಪ್ರತಿ ಹಂತದಲ್ಲಿ, ನಮ್ಮಂತಹ ರಾಜ್ಯಗಳಿಗೆ ಬರುವ ಹಣವನ್ನೆಲ್ಲಾ ಹೀಗೆಯೇ ಹಾಳು ಮಾಡಿದ್ದಾರೆ. ಉತ್ತರ ಪ್ರದೇಶ, ಬಿಹಾರ ಅಂತಹ ದೊಡ್ಡ ದೊಡ್ಡ ರಾಜ್ಯಗಳಲ್ಲಿರುವ ದೊಡ್ಡ ದೊಡ್ಡ ಊರುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಆ ಮಾರ್ಗಸೂಚಿಗಳನ್ನು ಕೊಡುತ್ತಿದ್ದಾರೆ. ಇದೇನು ಪುಣ್ಯಕ್ಕೆ ಬಂದಂತಹ ದುಡ್ಡಲ್ಲ. ನಮ್ಮ ರಾಜ್ಯಕ್ಕೆ ಬರಬೇಕಾದಂತಹ development grant ಅನ್ನೇ pool ಮಾಡಿ ಈ ಯೋಜನೆ ಕೆಳಗಡೆ ಕೊಟ್ಟಿದ್ದಾರೆ. ತಾವು ಹೋರಾಟ ಮಾಡಿ, ನಮ್ಮ ಕರ್ನಾಟಕ ರಾಜ್ಯದ ಪರಿಸ್ಥಿತಿಯನ್ನು explain ಮಾಡಿ, ನಮ್ಮ ಹತ್ತಿರ ಎರಡು ಸಾವಿರ, ನಾಲ್ಕು ಸಾವಿರ, ಐದು ಸಾವಿರ population ಇರುವಂತಹ ಹಳ್ಳಿಗಳು ಬಹಳ ಕಡಿಮೆ, ಇದನ್ನು ಮೊದಲು 500ಕ್ಕೆ ಏನು ಆದ್ಯತೆ ಇತ್ತೋ, ಅದರಂತೆ ಮಾಡಬೇಕು ಎಂದು ಹೇಳಬೇಕು. ನನಗೆ ಗೊತ್ತು 2-3 ಸಲ ಇದಕ್ಕೆ estimateಗಳಾಗಿದೆ. ಒಂದೊಂದು ಸಲ evaluationನಲ್ಲಿ ಇದು reject ಆಗಿದೆ. ಇದು ಹೊಸದಲ್ಲ. ಮೂರು ವರ್ಷಗಳಿಂದ estimate ಮಾಡಿಸುತ್ತಲೇ ಇದ್ದೀರಿ, ಇಡುತ್ತಲೇ ಇದ್ದೀರಿ. ವಾಸ್ತವ ಇದು, ಅದನ್ನು ತಾವು ಹೇಳುತ್ತಿಲ್ಲ. ಇದನ್ನೇನಾದರೂ ಕುರಿತು, ಕೇಂದ್ರ ಸರ್ಕಾರದ ಮಟ್ಟದಲ್ಲಿ ತಾವು ಚರ್ಚೆ ಮಾಡಿ,

ಕರ್ನಾಟಕದ ಪರಿಸ್ಥಿತಿಯನ್ನು ಅವರಿಗೆ explain ಮಾಡಬೇಕು.

ಶ್ರೀ ಜೆ.ಸಿ ಮಾಧುಸ್ವಾಮಿ (ಮುಂದು):

ಎಲ್ಲಾ ಯೋಜನೆಗಳೂ ಹಾಗೆ ಆಗುತ್ತವೆ ನಮಗೆ. ಒಂದು ಕೊಕನಟ್ ಕ್‌ಅಪ್ ಮಾಡಬೇಕೆಂದರೆ 25,000 ರೂಪಾಯಿ ಮೇಲೆ ಕೊಡುವುದಿಲ್ಲವೆಂದುಹೇಳುತ್ತಾರೆ. ಅಲ್ಲಿ ಇರುವುದು ಬಯಲು ಸೀಮೆ. ಇಲ್ಲಿ ಇರುವವರು ಹೇಗೋ ಬದುಕುತ್ತಾರೆ. ಕೂತು ಇದನ್ನೆಲ್ಲಾ ಎಕ್ಸ್‌ಪ್ಲೇನ್ ಮಾಡಿ ನೀವು ಆದ್ಯವಾಗಿ ಪ್ರಾರಂಭ ಮಾಡಿದಾಗ ಈ ಯೋಜನೆ ಏನು 500 ಜನರಿಗೆ ಇತ್ತು, ಅಧ್ಯಕ್ಷರೇ, ಈ ಊರಿಗೆ ಇನ್ನೊಂದು ಕಡೆ ಎಲ್ಲಿಂದಲಾದರೂ ರೋಡ್ ಇದೆ ಎಂದರೆ ಕ್ಯಾನ್ಸಲ್ ಮಾಡುತ್ತಾರೆ. ಒಂದೇ ರೋಡ್ ಇರಬೇಕು. ಸಿಂಗಲ್ ಕನೆಕ್ಟಿವಿಟಿ ಇರಬೇಕು. ಕರ್ನಾಟಕದಲ್ಲಿ ಹಾಗೆ ಆಗುವುದಿಲ್ಲ . ಒಂದು ಊರಿಗೆ ಎರಡು ಕಡೆ ಮೂರು ಕಡೆಯಿಂದ ಸಂಪರ್ಕ ಜಾಲ ಆಗಲೀ ಇದೆ. ಸನ್ಮಾನ್ಯ ಒಡೆಯರ್ ರವರ ಕಾಲದಿಂದ ಇದೆ. ಇರುವ ರೋಡ್ ಅಭಿವೃದ್ಧಿ ಮಾಡುವುದಕ್ಕೆ ನಿಯಮ ಸಡಿಲಿಸಿ ಎಂದು ಕೇಳಿದರೆ ಈ ಕೆಲಸಗಳು ಆಗುವುದು. ನಿಮ್ಮ ಎಸ್ಟಿಮೇಟ್ ಹೋಗುವುದಕ್ಕಾಗುವುದಿಲ್ಲ. ಖಂಡಿತ ಆಗುವುದಿಲ್ಲ. ಈ ಫಾರ್ಮದಲ್ಲಿ ಏನಾದರೂ ಎಸ್ಟಿಮೇಟ್ ಮಾಡಿ ಕಳುಹಿಸುತ್ತೀರಿ ಎಂದರೆ 100ಕ್ಕೆ 80ರಷ್ಟು ನಮ್ಮ ರಸ್ತೆಗಳು ರಿಜೆಕ್ಟ್ ಆಗುತ್ತವೆ. ದಯಮಾಡಿ ಕೂತು ಕರ್ನಾಟಕದ ಪರಿಸ್ಥಿತಿ ಎಕ್ಸ್‌ಪ್ಲೇನ್ ಮಾಡಿ. ನಮ್ಮ ಜನಸಂಖ್ಯೆ ಇರುವ ಊರುಗಳು ಎಷ್ಟು ಇವೆ ಎಂದು ಹೇಳಿ ಮಾರ್ಗಸೂಚಿ ಬದಲಾವಣೆ ಮಾಡಿ. ಈ ಕೆಲಸ ಮಾಡುವುದಕ್ಕೆ ಆಗುತ್ತದೆ ಇಲ್ಲವೆಂದು ದಯವಿಟ್ಟು ಹೇಳಬೇಕು.

ಡಾ : ಹೆಚ್.ಸಿ. ಮಹಾದೇವಪ್ಪ: ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಮಾಧುಸ್ವಾಮಿಯವರು ಮತ್ತು ಇತರ ಸದಸ್ಯರು ಸಲಹೆ ಮಾಡಿದ್ದು 500 ಜನ ವಸತಿಯನ್ನು 250 ಜನ ವಸತಿಗೆ ಇಳಿಸಲಿಕ್ಕೆ ಕೇಂದ್ರ ಸರ್ಕಾರದ ಮನವೊಲಿಸುವುದಕ್ಕೆ ರಾಜ್ಯ ಸರ್ಕಾರ ಪ್ರಯತ್ನ ಮಾಡುತ್ತದೆ. ಕಾಲಕಾಲಕ್ಕೆ ಬದಲಾಗತಕ್ಕಂತಹ ಮಾರ್ಗಸೂಚಿಗಳು ಅದಕ್ಕೆ ಪ್ರತಿಯೊಂದು ತಾಯಾರಾಗತಕ್ಕಂತಹ ಎಸ್ಟಿಮೇಟ್ ಇರಬಹುದು, ಬೇರೆ ಬೇರೆ ಅಂದಾಜುಗಳು ಇರಬಹುದು. ನಮಗೆ ಸ್ವಲ್ಪ ತಡವಾಗಿರುವುದು ನಿಜ. ಆದ್ದರಿಂದ ಇದನ್ನು ಈ ಸರಿ ಮಾಡಲಿಕ್ಕೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕೇಂದ್ರ ಸರ್ಕಾರದಿಂದ ಬರತಕ್ಕಂಹ ಹಣವನ್ನು ಲ್ಯಾಪ್ಸ್ ಮಾಡುವುದು. ಅದನ್ನು

ಉಪಯೋಗಿಸಿಕೊಳ್ಳದೆ ಇರುವ ಪ್ರಶ್ನೆ ಇಲ್ಲ. ನಮಗೆ ಬರುವ ದುಡ್ಡು ಬಂದೇ ಬರುತ್ತದೆ. ಅದನ್ನು ನಾವು ಕಾಲಕ್ಕೆ ಸರಿಯಾಗಿ ಬಳಸಿಕೊಳ್ಳುವುದಕ್ಕೆ ನಾವು ಆಡಳಿತವನ್ನು ಸ್ವಲ್ಪ ಕೆಳ ಹಂತದಲ್ಲಿ ಚುರುಕುಗೊಳಿಸಬೇಕು. ಅದನ್ನು ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಈ ಹಣ ಲ್ಯಾಪ್ಸ್ ಆಗುವುದಕ್ಕಾಗಲಿ, ಯಾರಾದರೂ ಪಾಲುದಾರಿಕೆ ಆಗುವ ರಾಜಕೀಯ ನಮಗೆ ಗೊತ್ತಿಲ್ಲ. ಯಾರ್‍ಯಾರು ಪಾಲುಗಾರರು ಮಾಡಿದರು ನಮಗೆ ಅದಕ್ಕೆ ಸಂಬಂಧ ಇಲ್ಲ. ಆ ತರಹದ ರಾಜಕೀಯ ನಮ್ಮ ಜೀವನದಲ್ಲಿ ಇಲ್ಲ. ಅದನ್ನು ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇದರಿಂದ ಮಾನ್ಯ ಹಿರಿಯ ಸದಸ್ಯರು ಏನು ಹೇಳಿದ್ದಾರೆ ಈ ಒಂದು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಇವತ್ತು ರಾಜ್ಯದ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಇರತಕ್ಕಂತಹ ಮಾರ್ಗಸೂಚಿಗಳನ್ನು ಬದಲಾವಣೆ ಮಾಡಲಿಕ್ಕೆ ಕೇಂದ್ರ ಸರ್ಕಾರದ ಮನವೊಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಅದರ ಜೊತೆಯಲ್ಲಿ ಹೆಚ್ಚಿಗೆ ಹಣ ಬರಬೇಕೆಂದು ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ.

ಇದರಿಂದ ಅಭಿವೃದ್ಧಿ ಕೆಲಸಗಳಲ್ಲಿ ರಾಜಕೀಯ ಬೆರೆಸತಕ್ಕಂತಹ ಅವಶ್ಯಕತೆ ಇಲ್ಲ. ಇದರಲ್ಲಿ ಹಣ ಲ್ಯಾಪ್ಸ್ ಆಗುವುದಿಲ್ಲ. ಹಣ ಬರದೆ ನಿಂತು ಹೋಗುವುದಿಲ್ಲಯ ನಮಗೆ ಬರಬೇಕಾದ ಹಣ ಬರಲೇ ಬೇಕಾಗುತ್ತದೆ. ನಾವು ಯುಟಿಲೈಸೇಷನ್ ಸರ್ಟಿಫಿಕೇಟ್ ಇರಬೇಕು. ಬೇರೆ ಬೇರೆ ತಾಂತ್ರಿಕ ಕಾರ್ಯಕ್ರಮಗಳನ್ನು ಶೀಘ್ರವಾಗಿ ಮಾಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗೆ ಅನುಗುಣವಾಗಿ ನಮ್ಮ ಅನುವಾದಗಳನ್ನು ಪಡೆಯಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ.

ಶ್ರೀ ಶಿವಾನಂದ ಪಾಟೀಲ್: ಮಾನ್ಯ ಅಧ್ಯಕ್ಷರೆ, ಪ್ರಧಾನ ಮಂತ್ರಿ ಸಡಕ್ ಯೋಜನೆಯಲ್ಲಿ ತೆಗೆದುಕೊಳ್ಳತಕ್ಕಂತಹ ರಸ್ತೆಗಳು. ಏನಿವೆ, ಇದನ್ನು ಮಾಡಿದ ಮೇಲೆ ಯಾರು ಮೇಂಟೇನ್ ಮಾಡಬೇಕೆಂದು ಕಳೆದ ಐದಾರು ವರ್ಷಗಳಾಯಿತು ನಮ್ಮಲ್ಲಿ ಇನ್ನೂ ನಿರ್ಣಯ ಆಗಲಿಲ್ಲ. ಈಗಾಗಲೇ ತಮ್ಮ ಜಿಲ್ಲಾ ಪಂಚಾಯಿತಿ ರಸ್ತೆ ಒಂದು ಲಕ್ಷ 10,000 ಕಿ.ಮೀ. ಗಿಂತ ಜಾಸ್ತಿ ಏನು ಇವೆ? ಆದರೆ ಈಗ ಹೊಸದಾಗಿ ಕಳೆದ ಐದಾರು ವರ್ಷಗಳಿಂದ ನಾವು ಏನು

ರಸ್ತೆ ನಿರ್ಮಾಣ ಮಾಡುತ್ತೇವೆ ಅವುಗಳಿಗೆ ಕೊಡಬೇಕಾದ ಮೇಂಟಿನೆನ್ಸ್ ಗ್ರ್ಯಾಂಟ್ 30–54 ಹೆಡ್‌ನಲ್ಲಾಗಲಿ, ಯಾವುದೇ ಹೆಡ್‌ನಲ್ಲಾಗಲಿ ಒಂದು ಪೈಸೆ ಕೂಡ ತಾವು ಕೊಡುತ್ತಿಲ್ಲ. ಈ ರಸ್ತೆಗಳನ್ನು ನಾವು ಯಾರ ಸಲುವಾಗಿ ಮಾಡಬೇಕು, ಅವುಗಳನ್ನು ಯಾರು ಮೇಂಟೇನ್ ಮಾಡುತ್ತಾರೆ. ತಾವು ದಯಮಾಡಿ ಕ್ಲ್ಯಾರಿಫೈ ಮಾಡಬೇಕು.

ಶ್ರೀ ಹೆಚ್. ಕೆ. ಕುಮಾರ ಸ್ವಾಮಿ:– ಮಾನ್ಯ ಅಧ್ಯಕ್ಷರೆ, ಗ್ರಾಮ ಸಡಕ್ ಯೋಜನೆಗಳನ್ನು ಲ್ಯಾಂಡ್ ಆರ್ಮಿಯವರಿಗೆ ಕೆಲಸ ಮಾಡುವುದಕ್ಕೆ ಕೊಟ್ಟಿದ್ದಾರೆ. ಯಾವ ಲ್ಯಾಂಡ್ ಆರ್ಮಿಯವರೂ ನೇರವಾಗಿ ಕೆಲಸ ಮಾಡುತ್ತಿಲ್ಲ. ಅವರಿಗೆ ಒಬ್ಬ ಸಬ್ ಕಂಟ್ರಾಕ್ಟರ್ ಇರುತ್ತಾರೆ. ಯಾರೂ ಕೂಡಾ ಲ್ಯಾಂಡ್ ಆರ್ಮಿಯವರು ಕೆಲಸ ಮಾಡುತ್ತಿಲ್ಲ. ಅವರು ಮೂರು ವರ್ಷ ಮೇಂಟಿನೆನ್ಸ್ ಮಾಡುತ್ತೇವೆಂದು ಏನು ಹೇಳುತ್ತಾರೆ, ಒಂದು ವರ್ಷ ಕೂಡ ಮೇಂಟೇನ್ ಮಾಡುತ್ತಿಲ್ಲ. ದಯಮಾಡಿ ಲ್ಯಾಂಡ್ ಆರ್ಮಿಯವರು ನೇರವಾಗಿ ಮಾಡುವುದಾದರೆ ಮಾಡಲಿ, ಇಲ್ಲದಿದ್ದರೆ ಆ ಏಜೆನ್ಸಿ ಕಿತ್ತು ಹಾಕಿ ಬೇರೆಯವರಿಗೆ ಕೊಡಿ.

ಮಾನ್ಯ ಸದಸ್ಯರು:– ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ಆರ್ಮಿಯವರು ಮಾಡಬೇಕಾಗಿಲ್ಲ. ನಮ್ಮವರೇ ಇಂಜಿನಿಯರ್ಸ್ ಇದ್ದಾರೆ. ಅವರ ಕೈಯಲ್ಲಿ ಮಾಡಿಸಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ಆರ್ಮಿಯವರಿಗೆ ಆಳಿಗೊಬ್ಬ ಮೋಟಾಳು. ಅಲ್ಲಿ ಡೆಪ್ಯುಟಿ ಡೈರೆಕ್ಟರ್ ಇದ್ದಾರೆ, ಅಸಿಸ್ಟೆಂಟ್ ಡೈರೆಕ್ಟರ್ ಇದ್ದಾರೆ. ಬೇಕಾದಷ್ಟು ಜನ ಇಂಜನಿಯರ್ಸ್ ಇದ್ದಾರೆ. ಅವರೆಲ್ಲಾ ಏನು ಮಾಡುತ್ತಿದ್ದಾರೆ? ಬೇರೆಯವರಿಗೆ ಕಾಂಟ್ರ್ಯಾಕ್ಟ್ ಕೊಟ್ಟು ಮನೆಯಲ್ಲಿ ಕೂತಿದ್ದಾರೆ.

ಡಾ.ಹೆಚ್.ಸಿ. ಮಹಾದೇವಪ್ಪ:– ಮಾನ್ಯ ಅಧ್ಯಕ್ಷರೆ, ಕಂಟ್ರ್ಯಾಕ್ಟರ್ ಕೆಲಸ ಟೆಂಡರ್ ಮುಖಾಂತ ಕೊಡುವುದು. ಟೆಂಡರ್ ತೆಗೆದುಕೊಂಡು ಅವನು ಸಬ್ ಕಂಟ್ರ್ಯಾಕ್ಟ್ ಕೊಟ್ಟರೆ ಗವರ್ನಮೆಂಟ್ ಏಜೆನ್ಸಿ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಎಮ್‌ಜಿಎಸ್‌ವೈ ಕಾಮಗಾರಿಗಳನ್ನು ರಾಜ್ಯ ಸರ್ಕಾರವೇ ಮೇಂಟೇನ್ ಮಾಡಬೇಕು. ಕಳೆದ 8–10 ವರ್ಷಗಳಿಂದ ಗ್ರಾಮೀಣ ರಸ್ತೆ ಮೇಂಟೆನೆನ್ಸ್‌ಗೆ ಹಣ ಒದಗಿಸಿಲ್ಲ. ಆದ್ದರಿಂದ ನಾನು ೫ ಸಾರಿ ಮಾನ್ಯ ಹಣಕಾಸು ಸಚಿವರಲ್ಲಿ ಮನವಿ

ಮಾಡಿದ್ದೇನೆ. ಸುಮಾರು ಒಂದು ಲಕ್ಷ ಕಿ.ಮಿ. ಕ್ಕೂ ಉದ್ದ ಇರತಕ್ಕಂತಹ ಗ್ರಾಮೀಣ ಪ್ರದೇಶದ ರಸ್ತೆಗಳನ್ನು ಮೇಂಟೆನ್ ಮಾಡುವುದಕ್ಕೆ ಕೊನೆ ಪಕ್ಷ ಹಣ ಕೊಡಬೇಕೆಂದು ಮನವಿ ಮಾಡಿದ್ದೇನೆ. ಅವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಮತ್ತು ಈ ರಸ್ತೆಗಳನ್ನು ಮಾಡಲಿಕ್ಕೆ ಲ್ಯಾಂಡ್ ಆರ್ಮಿಯವರು ಟೆಂಡರ್ ಮುಖಾಂತರ ಮಾಡಿರುತ್ತಾರೆ. ಸರಿಯಾಗಿ ಮಾಡಲಿಲ್ಲ ಎಂದರೆ ಅದನ್ನು ಸರಿಪಡಿಸುವ ಜವಾಬ್ದಾರಿ ಅವರಿಗೇ ಇರುತ್ತದೆ. ಯಾರ್ಯಾರು ಟೆಂಡರ್ ತೆಗೆದುಕೊಂಡು ಕೆಲಸ ಮಾಡಿರುತ್ತಾರೆ ಅವರೇ ಮಾಡುತ್ತಾರೆ. ಟೆಂಡರ್ ಮೂಲಕ ಕೆಲಸ ತೆಗೆದುಕೊಂಡು ಬೇರೆಯವರಿಗೆ ಕಾಂಟ್ರ್ಯಾಕ್ಟ್ ಕೊಟ್ಟಿದ್ದರೆ ಅಂತಹ ಪ್ರಕರಣ ಕಂಡಬುಬಂದರೆ ಅಂತಹವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ. ಒಟ್ಟಾರೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗೆ ಬಂದಂತಹ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಬಂದಂತಹ ಹಣವನ್ನು ನಾವು ಪೋಲ್ ಮಾಡುವುದಾಗಲಿ, ಲ್ಯಾಪ್ಸ್ ಮಾಡುವುದಕ್ಕಾಗಲಿ ಬಿಡುವುದಿಲ್ಲ. ಬರಬೇಕಾದ ಹಣ ಬಂದೇ ಬರುತ್ತದೆ. ಆದರೆ ಬಂದಂತಹ ಹಣವನ್ನು ಹೆಚ್ಚು ಸಮಯ ತೆಗೆದುಕೊಳ್ಳದೆ ಕಾಲಕಾಲಕ್ಕೆ ಕೆಲಸಗಳನ್ನು ಮಾಡಿ ಮುಗಿಸುವುದಕ್ಕೆ ಮಾರ್ಗ ಸೂಚಿಗಳನ್ನು ಬದಲಾವಣೆ ಮಾಡುತ್ತೇವೆ. ಈಗಾಗಲೇ ನಾವು ಕೇಳಿದ್ದೇವೆ. 500 ಜನ ವಸತಿಗಳನ್ನು 250ಕ್ಕೆ ಇಳಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಅವರು ನಮಗೆ ಇನ್ನು ಸರಿಯಾದ ಉತ್ತರಕೊಟ್ಟಿಲ್ಲ. ಆದರೂ ಮತ್ತೊಮ್ಮೆ ನಾವು ಪ್ರಯತ್ನ ಮಾಡುತ್ತೇವೆ. ಮಲೆನಾಡು ಪ್ರದೇಶಗಳಲ್ಲಿ ನಮಗೆ ಮಾಡುವುದಕ್ಕಾಗುವುದಿಲ್ಲ ಎಂದು ಅನೇಕ ಸದಸ್ಯರು ಹಿರಿಯ ಸದಸ್ಯರಾದ ಜಯಪ್ರಕಾಶ್ ಹೆಗಡೆಯವರು ಹೇಳಿದ್ದಾರೆ. ಮಾರ್ಗಸೂಚಿಗಳನ್ನು ನಿಧಾರ ಮಾಡತಕ್ಕಂತಹವರು ಕೇಂದ್ರ ಸರ್ಕಾರ. ಆದರೂ ನಮ್ಮ ರಾಜ್ಯದ ಭೌಗೋಳಿಕ ಬದುಕನ್ನು ಪರಿಚಯವನ್ನು ಕೇಂದ್ರ ಸರ್ಕಾರಕ್ಕೆ ಮಾಡತಕ್ಕಂತಹ ಪ್ರಯತ್ನ ಮಾಡುತ್ತೇವೆ. ನಮಗೆ ಬರಬೇಕಾದ ಹಣವನ್ನು ಬೇಗ ಪಡೆದು ಗ್ರಾಮೀಣ ರಸ್ತೆಗಳ ದುರಸ್ತಿಗೆ ಈ ಹಣವನ್ನು ಉಪಯೋಗಿಸುತ್ತೇವೆ. ಹೆಚ್ಚು ಹಣ ಕೇಳಿದ್ದೇವೆ ಕೊಡುತ್ತೇವೆಂದು ಹೇಳಿದ್ದಾರೆ. ಆಗಲೇ ನಾವು ಆಗಸ್ಟ್ ಒಳಗೆ ನಾಲ್ಕು ಮತ್ತು ಐದನೇ ಫೇಸ್‌ನಲ್ಲಿ ನಾಲ್ಕನೇ ಫೇಸ್‌ಗೆ 95 ಕೋಟಿ ಮತ್ತು ಫೇಸ್ 5ಕ್ಕೆ 210ಕೋಟಿ ರೂಪಾಯಿಯ ಪ್ರಸ್ತಾವನೆ ರಾಜ್ಯ ಮಟ್ಟದ ಸಮಿತಿ ಅನುಮೋದನೆ ಮಾಡಿದೆ. ಆಗಸ್ಟ್ ಒಳಗೆ ಪ್ರಸ್ತಾವನೆ ಸಲ್ಲಿಸಿ ನಮಗೆ ಬರಬೇಕಾದ ಹಣವನ್ನು ಪಡೆದುಕೊಂಡು ಗ್ರಾಮೀಣ ಸಡಕ್ ರಸ್ತೆಗಳ ಕಾಮಗಾರಿಗಳನ್ನು ಪ್ರಾರಂಭ

ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ. ಸರ್ಕಾರ ಯಾವ ನಿರ್ಲಕ್ಷ್ಯ ಧೋರಣೆಯನ್ನು ತೋರಿಸಿಲ್ಲ. ಹಳ್ಳಿಯ ಜನರಿಗೆ ಕುಡಿಯುವ ನೀರು ರಸ್ತೆ ಒದಗಿಸುವುದು ಸರ್ಕಾರದ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ. ಅದನ್ನು ಮಾಡುತ್ತೇವೆ ಎಂದು ಹೇಳಿ ತಮ್ಮ ಮೂಲಕ ಮಾನ್ಯ ಎಲ್ಲ ಸದಸ್ಯರಿಗೂ ಮನವಿ ಮಾಡುವುದಕ್ಕೆ ಬಯಸುತ್ತೇನೆ. ಇದರಲ್ಲಿ ಯಾವುದೇ ರಾಜಕೀಯವನ್ನು ಹುಡುಕತಕ್ಕಂತಹ ಅಗತ್ಯವಿಲ್ಲ. ಅದರ ಪ್ರಯತ್ನ ಇಲ್ಲ. ನಾವು ನಮ್ಮ ಕಡೆ ಅಭಿವೃದ್ಧಿ ಕೆಲಸದಲ್ಲಿ ಬದ್ಧತೆ ಇದೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಎಮ್‌ಜಿಎಸ್ ವೈಯಲ್ಲಿ ಒಂದು ಕ್ಷೇತ್ರಕ್ಕೆ ಅಥವಾ ಒಂದು ತಾಲ್ಲೂಕಿಗೆ ಇಡೀ ವರ್ಷಕ್ಕೆಲ್ಲಾ ಸೇರಿ ಒಂದು ರಸ್ತೆ ಯಾವುದಾದರೂ ಪ್ರಪೋಸ್ ಮಾಡುತ್ತಾರೆ. ಮಹದೇವಪ್ಪನವರೇ ಗ್ರಾಮೀಣ ರಸ್ತೆಗಳು, ಎಚಿದು ತಾವು ಪದೇ ಪದೇ ಹೇಳಿದಿರಿ, ಒಂದು ತಾಲ್ಲೂಕು ಅಥವಾ ಒಂದು ವಿಧಾನಸಭಾ ಕ್ಷೇತ್ರವನ್ನು ತೆಗೆದು ಕೊಂಡರೆ ನಾಲ್ಕೈದು ರಸ್ತೆಗಳು ಡಬ್ಲ್ಯುಡಿ ಬಿಟ್ಟರೆ ಉಳಿದವು ಎಲ್ಲ ಬಜೆಟ್‌ನಲ್ಲಿ ಹೇಳಿದಿರಿ, ರಾಜ್ಯಪಾಲರ ಭಾಷಣದಲ್ಲಿ ಹೇಳಿದಿರಿ. ಅದಕ್ಕೆ ಹಣ ಮಾತ್ರ ಕೊಡಲಾಗಿದೆ. ನಿಮ್ಮ ಜಡ್ ಇಂಜಿನಿಯರಿಂಗ್ ಡಿವಿಷನ್ ಎಂದು ಇದೆಯಲ್ಲಾ ಬರಗಾಲ ಬಂದು ಕುಡಿಯುವ ನೀರಿನ ಕೆಲಸ ಇಲ್ಲದಿದ್ದರೆ ಅವರಿಗೆ ಕೆಲಸವೇ ಇಲ್ಲ. There is absolutely no money with you.

ನೀವು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೀರಿ. ವಿಕೇಂದ್ರೀಕರಣ ಮಾಡಿದ ಮೇಲೆ ಗ್ರಾಮ ಪಂಚಾಯಿತಿಗಳಿಗೆ ಸಣ್ಣ ಪುಟ್ಟ ಕೆಲಸಗಳನ್ನು ಕೊಟ್ಟಿದ್ದೀರಿ. ಜಿಲ್ಲಾ ಪಂಚಾಯತಿಗಳಗೆ ರಸ್ತೆಗಳಿಗೆ ಹಣ ಕೊಟ್ಟಿಲ್ಲ ಹೇಗೆ ಮೇಂಟೆನ್ ಮಾಡುತ್ತೀರಿ ಹೇಳಿ. ಜಿಲ್ಲಾ ಪಂಚಾಯಿತಿ ವ್ಯಾ ್ತಗೆ ಬರತಕ್ಕಂತಹ ಟೋಟಲ್ ಎಷ್ಟು ರಸ್ತೆ ಇದೆ ಈ ರಾಜ್ಯದಲ್ಲಿ ಅವುಗಳಿಗೆ ನಿಮ್ಮಲ್ಲಿ ಏನು ಹಣದ ವ್ಯವಸ್ಥೆ ಇದೆ? ಎಮ್‌ಜಿಎಸ್‌ವೈಯಲ್ಲಿ ನಾಲ್ಕು ಕಾಸು ಕೊಡುತ್ತಾರೆ. ಸಿಎಮ್‌ಜಿಎಸ್‌ವೈ ಎಂದು ಹೇಳಿ ನೀವು ನಮಗೆ ಕಾಡಿಸಿ ಅದು ಒಂದು ಇದು ಒಂದು 30ಲಕ್ಷ ರೂಪಾಯಿ ತೆಗೆದುಕೊಳ್ಳಿ, 20 ಲಕ್ಷ ತೆಗೆದುಕೊಳ್ಳಿ ಎಂದು ಬಕ್ಷೀಸು ಕೊಟ್ಟ ಹಾಗೆ ಕೊಡುತ್ತೀರಿ. ಆದರೆ ವಾಸ್ತವದಲ್ಲಿ ಬಹಳ ಆವೇಶದಲ್ಲಿ ಹೇಳಿದರು. ಯಡಿಯೂರಪ್ಪನವರು ರಿಪ್ಲೇ ಬರುವವರೆಗೆ ಇರಲಿಲ್ಲ. ಗಾಬರಿ

ಮಾಡಿ ಹೊರಟರು. ನಿಜವಾಗಿ ನಾವು ಸದಸ್ಯರಾಗಿರುವ ವರೆಲ್ಲರೂ ಓಡಾಡಬೇಕೆಂದರೆ ಆ ರಸ್ತೆಗಳ ಪರಿಸ್ಥಿತಿ ಬಹಳ ಹೀನವಾಗಿದೆ. ಯಾವ ಹೆಡ್ ಆಫ್ ಅಕೌಂಟಿನಲ್ಲಿ ದುಡ್ಡು ಬರುವ ಮಾರ್ಗ ಇಲ್ಲ. ಉತ್ತರ ಕೊಡಿ, ದುಡ್ಡು ಕೊಡಿ ಎಂದು ಹೇಳಲಿಲ್ಲ. ನೀವು ನಿಮ್ಮ ಕಾರ್ಯದರ್ಶಿಗಳ ಜೊತೆ ಚರ್ಚೆ ಮಾಡಿ ಏನಾದರೂ ಮಾಡಿದ್ದೀರಾ? ನಿಮ್ಮದೇ ಆದ ಒಂದು ಪ್ಲ್ಯಾನ್ ರಾಜ್ಯ ಮಟ್ಟದಲ್ಲಿ ಜಡ್ ರೋಡ್‌ಗಳಿಗೆ ಆದರೂ ಹಣ ಕೊಡುವುದಕ್ಕಾಗುತ್ತದೆ. ಅಸ್‌ಫಾಲ್ಟ್ ಮಾಡಬೇಡಿ, ಕೊನೇ ಪಕ್ಷ ಮೆಟಾಲಿಂಗ್ ಆದರೂ ಮಾಡಬೇಕು. ಕನ್‌ಸಾಲಿಡೇಷನ್ ಆದರೂ ಮಾಡಬೇಕು. ಓಡಾಡುವುದಕ್ಕಾಗುವುದಿಲ್ಲ.

There are all in a very bad shape.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ನನಗೆ ಒಂದು ಉತ್ತರ ಸಿಕ್ಕಿತು. ಈ ಮೇಂಟೆನೆನ್ಸ್ ಸೆಡ್ ಇಂಜಿನಿಯರಿಂಗ್ ಡಿವಿಷನ್‌ನವರು ಮಾಡಬೇಕು, ಸರ್ಕಾರ ಮಾಡುವುದಿಲ್ಲವೆಂದು ನೀವು ಹೇಳಿದಿರಿ, ಅದಕ್ಕೆ ಸರ್ಕಾರ ಕೇಂದ್ರ ಸರ್ಕಾರ ಏನು ಕಂಡೀಷನ್ ಹಾಕಿದೆ, ಸಿಂಗಲ್ ಕನೆಕ್ಟಿವಿಟಿ ಇದ್ದರೆ ಆಗುವುದಿಲ್ಲ. ಜನಸಂಖ್ಯೆ ಜಾಸ್ತಿಯಾಗಬೇಕು ಎಂದು ಹೇಳಿದಿರಿ. ಅದಕ್ಕೆ ನೀವು ಒ ್ಪಕೊಳ್ಳಿ ಏಕೆಂದರೆ, ನಿಮಗೆ ಹೇಗೂ ಮೇಂಟೇನ್ ಮಾಡುವುದಕ್ಕಾಗುವುದಿಲ್ಲ. ಪುನಃ ಇಲ್ಲಿ ರಾಜ್ಯ ಸರ್ಕಾರ ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ ಎಂದು ಅಲ್ಲಿಂದಲೂ ಬರುವುದು ಬೇಡ. ಈ ಪ್ರಧಾನಮಂತ್ರಿ ಸಡಕ್ ಯೋಜನೆಯಲ್ಲಿ ಆಗುವುದು ಬೇಡ ಎಂದು ನೀವು ನೆಮ್ಮದಿಯಾಗಿ ಕುಳಿತಿದ್ದೀರೇನೋ ಎಂದು ನನಗೆ ಅನ್ನಿಸುತ್ತಿದೆ. ಈಗ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. 2004ರಲ್ಲಿ ಮೇನಲ್ಲಿ ಮಳೆಗಾಲ ಶುರುವಾದಾಗ ನನ್ನ ಕ್ಷೇತ್ರದಲ್ಲೊಂದು ಲ್ಯಾಂಡಂ ಆರ್ಮಿ ಮುಖಾಂತರ ಮಾಡಿದರು. ಅದು ಜೂನ್‌ನಲ್ಲಿ ಕಿತ್ತುಹೋಯಿತು. ಇವತ್ತಿನವರೆಗೂ ಪುನಃ ಅವರನ್ನು ಮಾಡುತ್ತೀರೆ ಮಾಡುತ್ತೀರೆ ಎಂದು ಕೇಳಿ ಕೇಳಿ ಸಾಕಾಗಿಹೋಗಿದೆ. ಅವರು ಏನು ಹೇಳುತ್ತಾರೆಂದರೆ ಸಾಯಲ್ ಟೆಸ್ಟ್‌ಗೆ ದೆಹಲಿಗೆ ಕಳುಹಿಸಿದ್ದೇವೆ ಎನ್ನುತ್ತಾರೆ. ಮೊದಲು ಅವರು ಯುನಿವರ್ಸಿಟಿಗೆ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಇದು ಒಂದು ರಸ್ತೆಯನ್ನು ಮಾಡಿದ ಮೇಲೆ ಅದು ಹಾಳಾಗಿದೆ. ಆದರೆ ಅಲ್ಲಿ ಲೋಕಲ್‌ನವರು ಮಾಡಿದ್ದು ಯಾವುದೂ ಹಾಳಾಗಿಲ್ಲ ನಿಮ್ಮ ಇಂಜಿನಿಯರಿಂಗ್ ಡಿವಿಶನ್‌ನವರು ಅದೇ ರಸ್ತೆಯಲ್ಲಿ ಮುಂದಿನ ಭಾಗವನ್ನು

ಏನು ಮಾಡಿದ್ದಾರೆ ಅದು ಹಾಳಾಗಿಲ್ಲ. ಆದರೆ ಇವರಿಗೆ ಸಾಯಲ್ ಟೆಸ್ಟ್ ಮಾಡಬೇಕು. ಒಂದೂವರೆ ವರ್ಷವಾದರೂ ಸಾಯಲ್ ಟೆಸ್ಟ್ ರಿಪೋರ್ಟ್ ಬರುವುದಿಲ್ಲವೆಂದರೆ ಪ್ರಾಯಶಃ ಅದನ್ನು ಹಾಗೇ ಇಟ್ಟುಕೊಂಡು ಕುಳಿತುಕೊಳ್ಳಬೇಕು ಎಂದು ಅಂದಾಜು ಮಾಡಿರಬೇಕು. ದಯವಿಟ್ಟು ಇವೆರಡನ್ನು ನೀನು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಮೊದಲನೆಯದು ಜನಸಂಖ್ಯೆ ಬಗ್ಗೆ, ಇನ್ನೊಂದು ಸಿಂಗಲ್ ಕನೆಕ್ಟಿವಿಟಿ ಬಗ್ಗೆ ಹೇಳಬೇಕು. ಇವೆರಡನ್ನೂ ಮಾಡದಿರುವುದರಿಂದ ನಮ್ಮ ಭಾಗಕ್ಕೆ ಎರಡು ವರ್ಷದಿಂದ ರಸ್ತೆಗಳು ಏನೂ ಬಂದಿಲ್ಲ. ಬಹಳ ಹಿಂದೆ ಕೊಟ್ಟಿದ್ದು 2004ರಲ್ಲಿ ಮಾಡಿ ಅದು ಕಿತ್ತುಹೋಗಿದೆ. ಆದುದರಿಂದ ಇದರ ಬಗ್ಗೆ ತೀರ್ಮಾನ ಮಾಡಲು ದಯವಿಟ್ಟು ನೀವು ನಿಮ್ಮ ಅಧಿಕಾರಿಗಳನ್ನು ಕೂರಿಸಿಕೊಂಡು ಪ್ರತಿ ಜಿಲ್ಲೆಯ ಪಟ್ಟಿಯನ್ನು ತರಿಸಿ ಎಷ್ಟು ರಸ್ತೆಗಳು ಎಲ್ಲೆಲ್ಲಿ ಆಗಿದೆ ಎಂಬ ಬಗ್ಗೆ ಪಟ್ಟಿ ತರಿಸಿ ಚರ್ಚೆ ಮಾಡಿ. ಈ ರೀತಿ ಮಾಡದಿದ್ದರೆ ನಿಮಗೆ ಕೇಂದ್ರ ಸರ್ಕಾರದಿಂದ ಯಾವ ರಸ್ತೆಗೂ ದುಡ್ಡು ಸಿಗುವುದಿಲ್ಲವೆಂದು ನಾನು ತಮ್ಮ ಗಮನಕ್ಕೆ ತುರವುದಕ್ಕೆ ಬಯಸುತ್ತೇನೆ.

ಶ್ರೀ ಶಿವಾನಂದ ಪಾಟೀಲ್:- ಮಾನ್ಯ ಸಚಿವರೆ, ಕಳೆದ ನಾಲ್ಕೈದು ವರ್ಷಗಳಲ್ಲಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ, ರೋಜಗಾರ್ ಯೋಜನೆಯಲ್ಲಿ ಎಷ್ಟು ರಸ್ತೆಗಳು ಆಗಿವೆ, ಎಷ್ಟು ರಸ್ತೆಗಳನ್ನು ಇದರಲ್ಲಿ ಜಿಲ್ಲಾ ಪಂಚಾಯತ್ ನೀವು ಸೇರಿಸಿದ್ದೀರಿ ಎಂಬ ಬಗ್ಗೆಯಾದರೂ ಹೇಳಿ. ಕಳೆದ 9 ವರ್ಷದಿಂದ ಜಿಲ್ಲಾ ಪಂಚಾಯತ್ ಮೇನ್‌ಟೆನೆನ್ಸ್ ಗ್ರ್ಯಾಂಟ್ ಇಲ್ಲ. ಇದರ ಜೊತೆಗೆ ಈಗ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಆಗತಕ್ಕಂಥ ರಸ್ತೆಗಳನ್ನು ಜಿಲ್ಲಾ ಪಂಚಾಯತಿಯವರು ಟೇಕ್‌ಓವರ್ ಮಾಡಿಲ್ಲ. ಆದರೆ ತಾವು ನಾವೇ ಮೇನ್‌ಟೇನ್ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ಮೇನ್‌ಟೇನ್ ಮಾಡುವುದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂಬ ಬಗ್ಗೆಯಾದರೂ ಹೇಳಿ. ಹಣವನ್ನು ಯಾವಾಗ ಕೊಡಿಸುತ್ತೀರಿ ಎಂಬ ಬಗ್ಗೆ ನಿರ್ದಿಷ್ಟವಾಗಿ ನಮಗೆ ಹೇಳಿ.

ಡಾ: ಹೆಚ್.ಸಿ. ಮಹದೇವಪ್ಪ (ಗ್ರಾಮೀಣ ಹಾಗೂ ಪಂಚಾಯತ್ ರಾಜ್ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಹಿಂದೆ ವಿಧಾನಸಭಾಧ್ಯಕ್ಷ ರಾಗಿದ್ದಂಥ ಮಾನ್ಯ ರಮೇಶ್ ಕುಮಾರ್‌ರವರು ಮತ್ತು ಜಯಪ್ರಕಾಶಹೆಗಡೆ ಯವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ 1 ಮತ್ತು 2ನೇ ಹಂತದ ಕಾಮಗಾರಿಗಳನ್ನು

ಐದು ವರ್ಷಗಳ ಕಾಲ ಮೇನೆಟೆನೆನ್ಸ್‌ನ್ನು ಯಾರು ಕಾಮಗಾರಿಯನ್ನು ಮಾಡಿರುತ್ತಾರೋ ಅವರೇ ಮಾಡಬೇಕು.

ಶ್ರೀ ಶಿವಾನಂದ ಎಸ್. ಪಾಟೀಲ್:- ಅವರು ಮೇನ್‌ಟೇನೆನ್ಸ್‌ನನ್ನು ಮಾಡುತ್ತಲೇ ಇಲ್ಲ. ಯಾರು ಹಾಗೆ ಮಾಡಿಲ್ಲವೋ ಅಂಥವರನ್ನು ಬ್ಲ್ಯಾಕ್‌ಲಿಸ್ಟ್‌ನಲ್ಲಿ ಇಟ್ಟಿದ್ದರೆ ಅದರ ಬಗ್ಗೆ ಹೇಳಿ.

ಡಾ.ಹೆಚ್.ಸಿ. ಮಹದೇವಪ್ಪ:- ಗೈಡ್‌ಲೈನ್ಸ್ ಪ್ರಾಕಾರ ಆ ರೀತಿ ಇದೆ. ಆದರೆ ನಾನು ಖುದ್ದಾಗಿ ಅದನ್ನು ನೋಡಿಲ್ಲ. ಗೈಡ್‌ಲೈನ್ಸ್ ಪ್ರಕಾರ 1 ಮತ್ತು 2ನೇ ಹಂತದ ಕಾಮಗಾರಿಗಳನ್ನು ಯಾರು ಟೆಂಡರ್ ತೆಗೆದುಕೊಂಡು ಮಾಡಿರುತ್ತಾರೋ ಅವರಿಗೇ ಆ ರಸ್ತೆಗಳ ಮೇನ್‌ಟೆನೆನ್ಸ್‌ನ್ನು ನೋಡಿಕೊಳ್ಳುವ ಜವಾಬ್ದಾರಿ ಐದು ವರ್ಷಗಳವರೆಗೆ ಇರುತ್ತದೆ. ಮೆನ್‌ಟೇನೆನ್ಸ್ ಮಾಡಬೇಕಾದ್ದು ಅವರದೇ ಜವಾಬ್ದಾರಿಯಾಗಿರುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಜವಾಬ್ದಾರಿ ಅವರದೇ ಎಂದು ಹೇಳುತ್ತೀರಿ. ಹೀಗಿರುವಾಗ ಮೇನ್‌ಟೆನೆನ್ಸ್ ಮಾಡದಂಥವರನ್ನು ನಿಮ್ಮ ಜಿಲ್ಲಾ ಪಂಚಾಯತಿ ಡಿವಿಜನ್‌ನವರು ಬ್ಲ್ಯಾಕ್‌ಲಿಸ್ಟ್‌ನಲ್ಲಿ ಇಟ್ಟಿರುವ ಬಗ್ಗೆ ಯಾವುದಾದರೂ ಒಂದು ಉದಾಹರಣೆಯನ್ನು ಹೇಳಿ.

ಡಾ. ಹೆಚ್. ಸಿ. ಮಹದೇವಪ್ಪ :- ಲಿಸ್ಟ್‌ನ್ನು ನಾನು ತರಿಸುತ್ತೇನೆ. ಕರ್ನಾಟಕದಲ್ಲಿ ಒಟ್ಟು ಗ್ರಾಮೀಣ ರಸ್ತೆಗಳು 1 ಲಕ್ಷ 15 ಸಾವಿರ ಕಿ.ಮೀ. ಇದೆ. ಈ ರಸ್ತೆಗಳನ್ನು ಮೇನ್‌ಟೇನ್ ಮಾಡುವುದಕ್ಕೆ ಕಳೆದ ಎಂಟು-ಹತ್ತು ವರ್ಷಗಳಿಂದ ಒಂದು ಪೈಸೆ ಹಣವನ್ನೂ ಕೂಡ ಕೊಟ್ಟಿಲ್ಲ. ಕಳೆದ ಬಾರಿ ಪ್ರಧಾನಮಂತ್ರಿ ರಸ್ತೆ ಯೋಜನೆ ಮಾದರಿಯಲ್ಲಿಯೇ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಗ್ರಾಮ ಸಡಕ್ ಯೋಜನೆಯನ್ನು ಮಾಡಿ ಈ ಬಾರಿ 80 ಕೋಟಿ ರೂಪಾಯಿಯನ್ನು ಕೊಟ್ಟು ಮೊದಲನೆಯ ಕಂತಾಗಿ 17 ಲಕ್ಷ ರೂಪಾಯಿಯಂತೆ ಒಂದು ಕ್ಷೇತ್ರಕ್ಕೆ ಬಿಡುಗಡೆ ಮಾಡಿದ್ದೇವೆ ಎಂದು ನನಗೆ ಜ್ಞಾಪಕ ಇದೆ. ಆದರೆ ಇಷ್ಟಾದರೂ ಕೂಡ ಅದು ಸಾಕಾಗುವುದಿಲ್ಲ ಎಂದು ಹೇಳಿ ನಮ್ಮ ಇಲಾಖಾ ಕಾರ್ಯದರ್ಶಿಗಳು ಮತ್ತು ನಾವೆಲ್ಲಾ ಕುಳಿತು ಚರ್ಚೆ ಮಾಡಿ ಒಟ್ಟು ಕರ್ನಾಟಕ ರಾಜ್ಯದಲ್ಲಿ 1ಲಕ್ಷ 15 ಸಾವಿರ ಕೀ.ಮೀ. ಹಳ್ಳಿಗಳಲ್ಲಿ ರಸ್ತೆಗಳಿವೆ. ಅದಕ್ಕಾಗಿ 200 ಕೋಟಿ ರೂಪಾಯಿಗಳನ್ನಾದರೂ ಗ್ರಾಮೀಣ ರಸ್ತೆಗಳಿಗಾಗಿ ನೀವು ಮೇನ್‌ಟೆನೆನ್ಸ್‌ಗೆ

ಕೊಡಬೆಕು ಎಂದು.....

ಶ್ರೀ ಕೆ. ಆರ್. ರಮೇಶ್ ಕುಮಾರ್:- ಮಾನ್ಯ ಸಚಿವರೆ ಒಂದ್ನಿಮಿಷ, ನಾನು ನಿಮಗೆ ಸಹಕರಿಸುವ ನಿಟ್ಟಿನಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ದಿವಂಗತ ನಾಗೇಗೌಡರು ಇರಿಗೇಶನ್ ಮಿನಿಸ್ಟರ್ ಆಗಿದ್ದಾಗ ಅನೇಕ ಸಲ ಇದರ ಬಗ್ಗೆಯೇ ಚರ್ಚೆ ಮಾಡಿಯಾದ ಮೇಲೆ ಒಂದು ರಫ್ ಎಸ್ಟಿಮೇಟ್ಸ್ ್ರಪೇರ್ ಮಾಡಿದರು. ಟೋಟಲ್ ಜಿಲ್ಲಾ ಪಂಚಾಯತಿ ರಸ್ತೆಗಳಿಗೆ ಎಷ್ಟು ಹಣ ಬೇಕಾಗುತ್ತದೆ. ಮತ್ತು ಅಚ್ಚುಕಟ್ಟು ರೋಡ್ಸ್ ಬಗ್ಗೆ ಕೂಡ ಹೇಳಬೇಕಾಗುತ್ತದೆ. ಈಗ ಅಚ್ಚುಕಟ್ಟು ರೋಡ್ಸ್‌ಗೆ ಹಣವೇ ಇಲ್ಲವಾಗಿದೆ. ಅನೇಕ ಕಡೆಗಳಲ್ಲಿ ನಮ್ಮ ಅಚ್ಚುಕಟ್ಟು ರೋಡ್‌ಗಳು ಹೋಗೇ ಬಿಟ್ಟಿವೆ. ಆದುದರಿಂದ ಅಚ್ಚುಕಟ್ಟು ರೋಡ್‌ಗಳಿಗೆ ಮತ್ತು ಜಿಲ್ಲಾ ಪಂಚಾಯತಿ ರಸ್ತೆಗಳಿಗೆ ಸ್ಪೆಶಲ್ ಆಗಿ ನಾವು ವಿಶ್ವಬ್ಯಾಂಕ್‌ನಿಂದಲೋ ಅಥವಾ ಬೇರೆ ಯಾವುದಾದರೂ ಒಂದು ಎಕ್ಸಟರ್ನಲ್ ಏಜೆನ್ಸಿಯಿಂದ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಬಾರೋ ಮಾಡುವುದಕ್ಕೆ ಒಂದು ಸ್ಕೀಂ ್ರಪೇರ್ ಮಾಡಿದರು, ನೀವು ನೋಡಿ I think of something like that; it will be historic decision. ನಾನು ಏನು ಹೇಳುತ್ತೇನೆಂದರೆ, ಒಮ್ಮೆಗೇ you would be solving this problem. ಆಮೇಲೆ ಹೇಗಿದ್ದರೂ ಸ್ಥಳೀಯ ಸಂಸ್ಥೆಗಳಿವೆ, ಹೇಗೋ ನೀವು ಅವುಗಳಿಗೆ ಅಧಿಕಾರವನ್ನು ಕೊಡುತ್ತಿದ್ದೀರಿ, ಅವುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮೇನೆಟೆನ್ಸ್ ಮಾಡುವುದಕ್ಕೆ ಟ್ಯಾಕ್ಸ್ ಕಲೆಕ್ಟ್ ಮಾಡಲು ಹೇಳಬಹುದು. ಅವರಿಗೇ ಆ ಜವಾಬ್ದಾರಿ ಕೊಡಬಹುದು. ಈಗ ಸ್ವಚ್ಛಗ್ರಾಮ ಯೋಜನೆಯಲ್ಲಿ I am told there is a proposal. ಯಾರು ಹೌಸ್‌ಟ್ಯಾಕ್ಸ್‌ನ್ನು ಅಪ್‌ಡೇಟ್ ಮಾಡಿರುತ್ತಾರೋ ಅವರಿಗೆ ್ರಯಾರಿಟಿ ಕೊಡಬೇಕು. ಆಗ ಅವರಿಗೆ ಜವಾಬ್ದಾರಿಯೂ ಬರುತ್ತದೆ. ್ರವಿಲೀಜಸ್‌ನ್ನು ಕೊಡುತ್ತಾ ಕೊಡುತ್ತಾ ರೆಸ್ಪಾನ್‌ಸಿಬಿಲಿಟಿಯನ್ನು ಕೂಡ ಅವರಿಗೆ ಎಂಟ್ರೆಸ್ಟ್ ಮಾಡಿದರೆ ಸೂಕ್ತ. Those bodies be come live.

ಆದುದರಿಂದ ನೀವು ಒಂದು ಬಾರಿ ಇನ್‌ಫ್ರಾಸ್ಟ್ರೆಕ್ಚ್‌ರ್‌ನ್ನು ಡೆವಲಪ್ ಮಾಡಿ ತದನಂತರ ಅವರಿಗೆ ಜವಾಬ್ದಾರಿಯನ್ನು ಕೊಟ್ಟರೆ They can also take care of this thing.

ಆದಕಾರಣ ನಾಗೇಗೌಡರು ಮಾಡಿದ ಆ ರಫ್ ಎಸ್ಟಿಮೇಟ್ಸ್ ರಿಪೋರ್ಟ್‌ನ್ನು ತಾವು ತರಿಸಿ ನೋಡಿ. ಆ ಫೈಲ್ ಧೂಳು ಹೊಡೆಯುತ್ತಿದ್ದರೆ ಅದನ್ನು ತಾವು ತೆಗೆಸಿ ನೋಡಿ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಹಿಂದೆ ವಿಷಯ ಸಮಿತಿಗಳು ಇದ್ದಾಗ ಒಂದು ಕಿ.ಮೀ. ರಸ್ತೆಗೆ 8 ಸಾವಿರ ರೂಪಾಯಿಗಳಂತೆ ಒಟ್ಟು 80 ಕೋಟಿ ರೂಪಾಯಿಗಳನ್ನು ರಸ್ತೆ ನಿರ್ವಹಣೆಗಾಗಿ ಇಟ್ಟಿದ್ದರು. ಆ ಎಂಟು ಸಾವಿರ ರೂಪಾಯಿಗಳನ್ನಾದರೂ ಮೆನ್‌ಟೆನೆನ್ಸ್‌ಗೆ ಬಿಡುಗಡೆ ಮಾಡಿ ಎಂದು ಹೇಳಿದೆವು. ಆದರೆ ಇದನ್ನೂ ಮಾಡಲಿಲ್ಲ. ಕೇವಲ ಎರಡು ಸಾವಿರ, ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಈ ಹಣವೂ ಕೂಡ ಅಲ್ಲೀನು ದಿನಗೂಲಿ ನೌಕರರಿದ್ದಾರೆ ಅವರ ಪಗಾರಕ್ಕೆ ಖರ್ಚಾಗಿಬಿಡುತ್ತದೆ. ಏಕೆಂದರೆ ಆ ದಿನಗೂಲಿ ನೌಕರರು ಹೈಕೋರ್ಟ್‌ಗೆ ಹೋಗಿ ಸ್ಟೇ ತಂದಿದ್ದಾರೆ. ಆದರೆ ದಿನಗೂಲಿ ನೌಕರರಿಗೆ ಏನೂ ಕೆಲಸವೇ ಇಲ್ಲ, ಕೆಲಸ ಮಾಡದೇ ಇದ್ದರೂ, ಎಲ್ಲಿ ಇದ್ದರೂ ಕೂಡ ತಿಂಗಳಿಗೊಮ್ಮೆ ಸಹಿ ಮಾಡಿ ರೊಕ್ಕ ತೆಗೆದುಕೊಂಡು ಹೊರಟುಹೋಗುತ್ತಾರೆ. ಈ ಪರಿಸ್ಥಿತಿ ಅಲ್ಲಿ ಇದೆ. ಇವರ ಯಾವ ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡುವುದಿಲ್ಲ. ನಾನೂ ಕೂಡ ಹತ್ತು ಬಾರಿ ಅಧಿಕಾರಿಗಳನ್ನು ಕರೆಸಿ ಹೇಳಿದೆ. ಆ ನೌಕರರು ಎಲ್ಲಿ ಇದ್ದಾರೆ ಅವರನ್ನು ಕರೆಸಿ, ಕಡೆ ಪಕ್ಷ ರಸ್ತೆ ಕೆಲಸದಲ್ಲಾದರೂ ಅವರನ್ನು ಉಪಯೋಗ ಮಾಡಿಕೊಳ್ಳೋಣ ಎಂದರೂ ಕೂಡ ಅವರನ್ನು ಕರೆಸುವುದಕ್ಕೆ ಅಧಿಕಾರಿಗಳಿಗೆ ಆಗಲಿಲ್ಲ. ಆದರೆ ತಿಂಗಳು ತಿಂಗಳು ಆ ದಿನಗೂಲಿ ನೌಕರರು ಪಗಾರಕ್ಕೆ ಮಾತ್ರ ಬಂದು ಸಹಿ ಮಾಡಿ ಕರೆಕ್ಟ್ ಪಗಾರ ತೆಗೆದುಕೊಂಡು ಹೋಗುತ್ತಾರೆ. ಕೋರ್ಟ್ ಸ್ಟೇ ಕೂಡ ಇರುವುದರಿಂದ ಬಂದ ಹಣವೆಲ್ಲಾ ಅವರ ಪಗಾರಕ್ಕೆ ಹೋಗುವುದರಿಂದ ರಸ್ತೆಗಳ ನಿರ್ವಹಣೆಗೆ ಹಣವೇ ಇಲ್ಲದಂತಾಗಿದೆ. ಗ್ರಾಮೀಣ ರಸ್ತೆಗಳು ಇಷ್ಟು ಕೆಟ್ಟು ಹಾಳಾಗಿಹೋಗಿದೆ, ಇದನ್ನು ನೋಡಿದರೆ ನಿಜವಾಗಿಯೂ ಬಹಳ ನೋವಾಗುತ್ತದೆ. ಆ ಕಾರಣದಿಂದ ಮಾನ್ಯ ಸಚಿವರು ತಾವು ದಯವಿಟ್ಟು ಸಿದ್ಧರಾಮಯ್ಯನವರಿಗೆ ತಾವು ದಯವಿಟ್ಟು ಈ ಬಗ್ಗೆ ಹೇಳಿ ನಿರ್ವಹಣೆಗಾಗಿ ಹಣವನ್ನು ಬಿಡುಗಡೆ ಮಾಡಿಸಿ. ಈ ರೀತಿ ಮಾಡದಿದ್ದರೆ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿ ಹೋಗುತ್ತವೆ. ಈ ರೀತಿಯ ಪರಿಸ್ಥಿತಿ ಅಲ್ಲಿ ಇದೆ. ಮಹದೇವಪ್ಪನವರೆ, ತಾವು ದಯವಿಟ್ಟು ಸಿದ್ಧರಾಮಯ್ಯನವರಿಗೆ ಈ ಬಗ್ಗೆ ಮನವಿ ಮಾಡಿಕೊಂಡು ಬಂದು ಕಿ.ಮೀ.ಗೆ 8

ಸಾವಿರ ರೂಪಾಯಿಗಳನ್ನು ಏನು ಇಡಲಾಗಿದೆ. ಆ ಎಂಟು ಸಾವಿರ ರೂಪಾಯಿಗಳನ್ನು ಪೂರ್ಣವಾಗಿ ರಸ್ತೆಗೆ ಒಂದು ಕೀ.ಮೀ. ರಸ್ತೆಗೆ ಮೆನ್‌ಟಿನೆನ್ಸ್‌ಗೆ 30 ಸಾವಿರ ಬಿಡುಗಡೆ ಮಾಡುತ್ತಾರೆ. ಅವರ ಹಣೆಬರಹವೂ ಇದೇ ರೀತಿಯಾಗಿದೆ. ಅವರೂ ರಸ್ತೆಗಳ ನಿರ್ವಹಣೆ ಮಾಡುವುದಿಲ್ಲ. ಇನ್ನು ಗ್ರಾಮ ವ್ಯವಸ್ಥೆ ಇದೆ. ಆದಕಾರಣ ಸಂಪೂರ್ಣವಾಗಿ ಎಂಟು ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿಸಿದರೆ ರಸ್ತೆ ಸರಿಯಾಗುತ್ತದೆ.

ಡಾ:ಹೆಚ್.ಸಿ. ಮಹದೇವಪ್ಪ (ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣ ರಸ್ತೆಗಳು ಹಾಳಾಗಿವೆ ಎನ್ನುವುದರಲ್ಲಿ ಎರಡನೆಯ ಮಾತೇ ಇಲ್ಲ. ಅದು ನನಗೂ ಕೂಡ ಒಂದು ನೋವಿನ ಸಂಗತಿಯೇ ಆಗಿದೆ. ಆದರೆ ರಾಜ್ಯ ಸರ್ಕಾರ ಕೊಡುವ ಹಣದಲ್ಲಿ 1 ಲಕ್ಷ 15 ಸಾವಿರ ಕಿ.ಮೀ. ರಸ್ತೆಗಳ ದುರಸ್ತಿ ಕಾರ್ಯವನ್ನು ಏಕಾಏಕಿ ಮಾಡುವುದಕ್ಕೆ ಆಗದೇ ಇದ್ದರೂ ಕೂಡ ಮಾನ್ಯ ಹಿರಿಯ ಸದಸ್ಯರು ಈಗ ಏನು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಒಂದು ಮಾಸ್ಟರ್‌ಪ್ಲಾನನ್ನು ತಯಾರು ಮಾಡಿ ಹಂತ ಹಂತವಾಗಿ ಇವುಗಳನ್ನು ಸುಧಾರಣೆ ಮಾಡುವುದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನಗಳನ್ನು ಬಳಸಿ ಉತ್ತಮವಾಂಥ ರಸ್ತೆ ಸಂಪರ್ಕವನ್ನು ನಿರ್ಮಾಣ ಮಾಡುವುದಕ್ಕೆ ಎಷ್ಟು ಸಾಧ್ಯವಿದೆಯೋ ಅಷ್ಟನ್ನು ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮೇನ್‌ಟಿನೆನ್ಸ್‌ಗೆ ಹಣವನ್ನು ಕೊಡಬೇಕು ಎಂದು ನಾನು ಈಗಾಗಲೇ ಹಣಕಾಸಿನ ಇಲಾಖೆಯಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳು ಚರ್ಚೆ ಮಾಡಿ 100 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಈಗಾಗಲೇ ನಾನು ಪ್ರಸ್ತಾವನೆಯನ್ನು ಇಟ್ಟಿದ್ದೇವೆ. ಆದುದರಿಂದ ಸರ್ಕಾರ ಗ್ರಾಮೀಣ ನೈರ್ಮಲ್ಯ, ರಸ್ತೆ, ಕುಡಿಯುವ ನೀರಿನ ಬಗ್ಗೆ ತನ್ನ ಕಾಳಜಿಯನ್ನು ತನ್ನ ಆಯವ್ಯಯ ದಲ್ಲಿಯೇ ಪ್ರದರ್ಶನ ಮಾಡಿದ್ದರೂ ಕೂಡ ಹಳ್ಳಿಗಳಲ್ಲಿ ರಸ್ತೆಗಳು ಸಮರ್ಪಕ ವಾಗಿಲ್ಲ ಎನ್ನುವುದು ನನಗೂ ಕಡೂ ನೋವಿನ ಸಂಗತಿಯೇ ಆಗಿದೆ. ಅದನ್ನು ಸುಧಾರಣೆ ಮಾಡುವುದಕ್ಕೆ ನಾವು ಶಕ್ತಿ ಮೀರಿ ಪ್ರಯತ್ನವನ್ನು ಮಾಡುತ್ತೇವೆ ಎಂದು ಹೇಳಿ ಮಾನ್ಯ ಹಿರಿಯ ಸದಸ್ಯರುಗಳು ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಕ್ರಮ ಕೈಗೊಳ್ಳುತ್ತವೆ. ಅದರಲ್ಲೆ ಯಾವುದೇ ರಾಜಕೀಯವನ್ನು ಹುಡುಕತಕ್ಕಂಥ ಪ್ರಮೇಯ ಮತ್ತು ಅಗತ್ಯ ಏನೇನೂ

ಇಲ್ಲವೆಂದು ಪ್ರಾಮಾಣಿಕವಾಗಿ ಸ್ಪಷ್ಟವಾಗಿ ಹೇಳಿ ತಮಗೆ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ.

ಗಮನ ಸೆಳೆಯುವ ಸೂಚನೆ

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯಲು ಪೋಲೀಸ್ ಇಲಾಖೆಯವರು ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ತೋರಿಸುತ್ತಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಡಾ:ಹೆಚ್.ಸಿ. ಮಹದೇವಪ್ಪ (ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ.)

ವಿಧಾನಸಭಾಸದಸ್ಯರಾದ ಮಾನ್ಯ ಶ್ರೀ ಶ್ರೀರಾಮರೆಡ್ಡಿಯವರು ನಿಯಮ 73ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಹೇಳಿಕೆ

ಮಾನ್ಯ ಸದಸ್ಯರು ರಾಜ್ಯದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ, ಮಾನಭಂಗ, ಮತ್ತು ದೌರ್ಜನ್ಯ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿದ್ದು, ಇವರ ಮಾನ ಮತ್ತುಪ್ರಾಣ ರಕ್ಷಣೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಕುರಿತು ಪ್ರಸ್ತಾ ಸಿದ್ದಾರೆ.

ಮಾನ್ಯ ಸದಸ್ಯರ ಕಳಕಳಿಯನ್ನು ಮತ್ತು ವಿಚಾರದ ಗಂಭೀರತೆಯನ್ನು ಸರ್ಕಾರ ಮನಗಂಡಿದೆ.

ಮಹಿಳೆಯರ ಅತ್ಯಾಚಾರ, ಮಾನಭಂಗ ಮತ್ತು ದೌರ್ಜನ್ಯ ಇತ್ಯಾದಿ ಪ್ರಕರಣಗಳ ವಿವರ ಹೀಗಿದೆ.

2002ರಲ್ಲಿ	6,989 ಪ್ರಕರಣಗಳು
2003ರಲ್ಲಿ	6,558 ಪ್ರಕರಣಗಳು
2004ರಲ್ಲಿ	6,442 ಪ್ರಕರಣಗಳು
2005 ಮೇ ಮಾಹೆಯ ಅಂತ್ಯದವರೆಗೆ	3,092 ಪ್ರಕರಣಗಳು

ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆ